ಕನ್ನಡ ಆತ್ಮ ಕಥನಗಳಲ್ಲಿ ದಲಿತ ಬದುಕಿನ ವಿವಿಧ ಆಯಾಮಗಳು

(ಆಯ್ದ ದಲಿತ ಆತ್ಮಕಥನಗಳನ್ನು ಅನುಲಕ್ಷಿಸಿ)

(ಎಂ.ಫಿಲ್., ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಶೋಧನ ಸಂಪ್ರಬಂಧ)

ಸಂಶೋಧಕರು

ನೋಂದಣಿ ಸಂಖ್ಯೆ: ೧೬೦೧೦೩೦೩೦೦೦೫

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ–೫೮೩ ೨೭೬

೨೦೧೬–೨೦೧೭

ಕನ್ನಡ ಆತ್ಮ ಕಥನಗಳಲ್ಲಿ ದಲಿತ ಬದುಕಿನ ವಿವಿಧ ಆಯಾಮಗಳು

(ಆಯ್ದ ದಲಿತ ಆತ್ಮಕಥನಗಳನ್ನು ಅನುಲಕ್ಷಿಸಿ)

(ಎಂ.ಫಿಲ್., ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಶೋಧನ ಸಂಪ್ರಬಂಧ)

ಸಂಶೋಧಕರು

ನೋಂದಣಿ ಸಂಖ್ಯೆ: ೧೬೦೧೦೩೦೩೦೦೦೫

ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ.
ವಿದ್ಯಾರಣ್ಯ – ೫೮೩ ೨೭೬
೨೦೧೬–೨೦೧೭

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ಮಹತ್ವ, ವ್ಯಾಪ್ತಿ ಮತ್ತು ವಿಧಾನ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ಮಹತ್ವ, ವ್ಯಾಪ್ತಿ ಮತ್ತು ವಿಧಾನ

ಪ್ರಸ್ತಾವನೆ:

ಕನ್ನಡ ಸಾಹಿತ್ಯದ ಇತಿಹಾಸವು ಸಾವಿರಾರು ವರ್ಷಗಳಿಂದ ಕೂಡಿದ್ದು, ಹಳಗನ್ನಡ, ನಡುಗನ್ನಡ, ಹೊಸಗನ್ನಡ ಎಂಬ ಕಾಲಘಟ್ಟಗಳಲ್ಲಿ ಕನ್ನಡ ಸಾಹಿತ್ಯ ಬೆಳೆದು ಬಂದಿರುವುದನ್ನು ನೋಡಬಹುದು. ಹೊಸಗನ್ನಡ ಸಾಹಿತ್ಯವು ಬಿ.ಎಂ.ಶ್ರೀಯವರ ಇಂಗ್ಲೀಷ್ ಗೀತೆಗಳು ಪ್ರಭಾವದಿಂದ ಹುಟ್ಟಿಕೊಂಡು ಕನ್ನಡದಲ್ಲಿ ಹೊಸ ಸಂಚಲನವನ್ನು ಹುಟ್ಟಿಸಿತು. ಹೊಸಗನ್ನಡ ಸಾಹಿತ್ಯದಲ್ಲಿ ನವೋದಯ, ನವ್ಯ, ಪ್ರಗತಿಶೀಲ, ದಲಿತ ಬಂಡಾಯ ಸಾಹಿತ್ಯ ಪಂಥಗಳು ಬೆಳೆದು ಆಯಾ ಕಾಲಘಟ್ಟದ ಲಕ್ಷಣಗಳನ್ನು ಇಟ್ಟುಕೊಂಡು ಕಥೆ, ಕಾದಂಬರಿ, ನಾಟಕ, ಕಾವ್ಯ, ಪ್ರವಾಸಸಾಹಿತ್ಯ, ಜೀವನ ಚರಿತ್ರೆ, ಆತ್ಮಕತೆ ಪ್ರಕಾರಗಳಾದಿಯಲ್ಲಿ ಲೇಖಕರು ಸಾಹಿತ್ಯ ರಚನೆ ಮಾಡಿದರು. ಲೇಖಕ ತನ್ನ ಜೀವನ ಅನುಭವಗಳ ಜೊತೆಗೆ ತಾವು ಬದುಕುವ ಪರಿಸರದ ಸಾಮಾಜಿಕ ಅಂಶಗಳನ್ನು ಬರವಣಿಗೆಯ ರೂಪದಲ್ಲಿ ಅಭಿವ್ಯಕ್ತಿಸಿದ್ದಾನೆ.

ಲೇಖಕರು ಕಥೆ ಕಾವ್ಯ, ಕಾದಂಬರಿ, ಪ್ರಬಂಧಗಳ ಜೊತೆಗೆ ತನ್ನ ಬುದ್ದಿಶಕ್ತಿ, ಓದಿನ ವಿಸ್ತಾರದ ಮುಖಾಂತರ, ಜೀವನ ಚರಿತ್ರೆ, ಆತ್ಮ ಕತೆಗಳನ್ನು ಬರೆದಿದ್ದಾರೆ.

ಮನುಷ್ಯನ ಬದುಕು ಸುಂದರವಾದದ್ದು ಈ ಬದುಕು ಭೌತಿಕವಾದದ್ದು ಆದರೆ ಮಾನಸಿಕ ಲೋಕವು ಒಂದು ಅಮೂರ್ತವಾದದ್ದು, ಲೇಖಕರು ತನ್ನ ಜೀವನದಲ್ಲಿ ಅನುಭವಿಸಿದಂಥ ನೋವು–ನಲಿವು, ಸುಖ; ದುಖಃ ಸಹಿ–ಕಹಿ ಘಟನೆಗಳನ್ನು ಪ್ರಾಮಾಣಿಕವಾಗಿ ಮುಚ್ಚು ಮರೆ ಇಲ್ಲದೆ ಬರಹದಲ್ಲಿ ಅಭಿವ್ಯಕ್ತಿ ಪಡಿಸಿದ್ದಾರೆ. ಅಂತಹ ಅಭಿವ್ಯಕ್ತಿಯೇ ಆತ್ಮಕಥೆ ಎಂದು ಕರೆಸಿಕೊಳ್ಳುತ್ತದೆ.

ಆತ್ಮ ಚರಿತ್ರೆ ಎಂಬುದು ವ್ಯಕ್ತಿಯ ಬದುಕಿನ ಮೂಲದ್ದು ೧೯೮೩ರಲ್ಲಿ ಡ್ರೈಡನ್ ಎಂಬುವನು ಮೊದಲಿಗೆ "ಬಯೋಗ್ರಫಿ" ಎಂಬ ಶಬ್ದವನ್ನು ಬಳಸಿದ. ಬಯೋಗ್ರಫಿ ಎಂದರೆ ಜೀವನ ಚರಿತ್ರೆ. ಆಟೋಬಯೋಗ್ರಫಿ ಎಂದರೆ ಆತ್ಮ ಚರಿತ್ರೆ. ಜೀವನ ಚರಿತ್ರೆ ನಿರ್ದಿಷ್ಟ ವ್ಯಕ್ತಿಯ ಬದುಕಿನ ಚಿತ್ರಣವಾದರೆ, ಆತ್ಮ ಚರಿತ್ರೆಯು ತನ್ನ ಬದುಕಿನ ಕತೆಯನ್ನು ತಾನೆ ಹೇಳಿಕೊಳ್ಳುವುದು. ವ್ಯಕ್ತಿಯೊಬ್ಬನ ಕಥನ, ಈ ಆತ್ಮ ಚರಿತ್ರೆಯು ಪ್ರಮುಖವಾಗಿ ಮೂರು ಲಕ್ಷಣಗಳನ್ನು ಒಳಗೊಂಡಿರುತ್ತದೆ. ಇತಿಹಾಸ, ವ್ಯಕ್ತಿ, ಸಾಹಿತ್ಯ, ಕಲಾತ್ಮಕವಾಗಿ ರಚಿತವಾಗಿರುವುದೇ ಆತ್ಮ ಚರಿತ್ರೆ.

ಕನ್ನಡದಲ್ಲಿ ಮೊಟ್ಟ ಮೊದಲು ೧೯೩೦ರಲ್ಲಿ ಹರ್ಡೆಕರ್ ಮಂಜಪ್ಪನವರ ಆತ್ಮ ಚರಿತ್ರೆಯಾದ 'ನನ್ನ ಮೂವತ್ತು ವರ್ಷಗಳ ಕಾಣಿಕೆ' ಪ್ರಕಟವಾಯಿತು. ಹೀಗೆ ಜಿ.ಪಿ. ರಾಜರತ್ನಂರವರ 'ಹತ್ತು ವರುಷ', ಕಾರಂತರ 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಮಧುರ ಚೆನ್ನರ "ಪೂರ್ವ ರಂಗ" ಅ.ನ.ಕೃರವರ 'ಬರಹಗಾರ ಬದುಕು' ಮುಂತಾದ ಆತ್ಮಕಥೆಗಳು ಪ್ರಕಟವಾಗಿವೆ.

ಕನ್ನಡ ಸಾಹಿತ್ಯದಲ್ಲಿ ಕತೆ, ಕಾದಂಬರಿ, ನಾಟಕಗಳು ಪ್ರಕಾರಗಳು ಹಾದಿಯಲ್ಲಿ ಆತ್ಮ ಚರಿತ್ರೆಗಳು ಬಂದ ಹಾಗೆ ದಲಿತ ಸಾಹಿತ್ಯದಲ್ಲಿ ದಲಿತ ಲೇಖಕರು ಸಾಹಿತ್ಯ ಕೃಷಿ ಮಾಡಿದರು. ಇವರು ದಲಿತ ಲೇಖಕರ ಜೀವನದಲ್ಲಿನ ನೋವು ನಲಿವು, ಸುಖ ದುಃಖ ಇತ್ಯಾದಿಗಳನ್ನು ಒಂದು ಸಮುದಾಯದಲ್ಲಿ ಇರುವ ಅಂಶಗಳನ್ನು ಇಟ್ಟುಕೊಂಡು ಕತೆ, ಕಾದಂಬರಿ ಕಾವ್ಯಗಳನ್ನು ರಚಿಸಿದ ಹಾಗೆ ಆತ್ಮ ಚರಿತ್ರೆ ಅಥವಾ ಆತ್ಮ ಕತೆಗಳನ್ನು ಬರೆಯ ತೊಡಗಿದರು.

ದಲಿತ ಆತ್ಮಕಥೆಗಳು ಮೊದಲು ಬೆಳೆದದ್ದು ಮರಾಠಿ ದಲಿತ ಸಾಹಿತ್ಯದಲ್ಲಿ. ಮರಾಠಿ ಲೇಖಕರಲ್ಲಿ ಸಾಮಾಜಿಕ ನ್ಯಾಯದ ಹಿನ್ನೆಲೆಯಲ್ಲಿ ಆತ್ಮ ಕತೆಯನ್ನು ಬರೆಯಬೇಕೆಂಬುದಾಗಿತ್ತು. ದಲಿತರು ಸಮಾಜದಲ್ಲಿ ತಾವು ಅನುಭವಿಸಿದ ಘೋರವಾದ ನೋವು-ಅವಮಾನಗಳನ್ನು, ಅಸ್ಪೃಶ್ಯತೆಯ ಕೀಳಿರಿಮೆಯನ್ನು ತಮ್ಮ ಆತ್ಮ ಕಥನಗಳಲ್ಲಿ ದಾಖಲಿಸಿದ್ದಾರೆ 'ಬಾಲಚಂದ್ರ ಫಡಕೆ'ಯವರ ಆತ್ಮ ಕಥೆಗಳನ್ನು ನೋವಿನ ಕಥೆಗಳು ಎಂದು ಕರೆದಿದ್ದಾರೆ. ಈ ಆತ್ಮ ಕಥೆಗಳಲ್ಲಿ ತಮ್ಮ ಜೀವನದ ಆಗುಹೋಗುಗಳನ್ನು ಹಾಗೂ ಪರಿಸರ, ಸಂಪ್ರಾದಾಯ, ಸಾಮಾಜಿಕ ಸಾಂಸ್ಕೃತಿಕ ಅಂಶಗಳನ್ನು ಪ್ರಕಟಿಸಿದ್ದಾರೆ.

ಕನ್ನಡ ದಲಿತ ಆತ್ಮ ಕಥೆಗಳಿಗೆ ಮರಾಠಿ ದಲಿತ ಆತ್ಮ ಕಥೆಗಳೆ ಮುಖ್ಯ ಪ್ರೇರಣೆಯಾದವು. ಮರಾಠಿ ಸಾಹಿತ್ಯದಲ್ಲಿ ಶರಣಕುಮಾರ ಲಿಂಬಾಳೆಯವರ 'ಅಕ್ಕರ ಮಾಶಿ' ಮತ್ತು ಲಕ್ಷ್ಮಣ ಗಾಯಕವಾಡರ 'ಉಚಲ್ಯಾ' ಇದನ್ನು ಚಂದ್ರಕಾಂತ ಪೊಕಳೆಯರು ಕನ್ನಡಕ್ಕೆ ಅನುವಾದಿಸಿದರು. ಹೀಗೆಯೆ ಕನ್ನಡ ಸಾಹಿತ್ಯದ ದಲಿತ ಲೇಖಕರು ಮರಾಠಿ ದಲಿತ ಆತ್ಮಕಥೆಗಳ ಪ್ರೇರಣೆಯಲ್ಲಿ ಮೌಲಿಕ ಆತ್ಮಕಥೆಗಳನ್ನೇ ಬರೆಯ ತೊಡಗಿದರು.

ಕನ್ನಡದಲ್ಲಿ ದಲಿತ ಆತ್ಮ ಕಥೆಗಳು ಮೊದಲು ಬರೆಯಲು ಪ್ರಾರಂಭಿಸಿದ್ದು ೧೯೯೪ರ ದಶಕದಲ್ಲಿ. ಅರವಿಂದ ಮಾಲಗತ್ತಿಯವರು ದಲಿತ ಲೇಖಕರಾಗಿ "ಗೌರ್ಮೆಂಟ್ ಬ್ರಾಹ್ಮಣ" ಎಂಬ ಆತ್ಮ ಕಥೆಯಲ್ಲಿ ತನ್ನ ಜೀವನಾಭವದ ಮತ್ತು ದಲಿತ ಸಮುದಾಯ ಕಷ್ಟ-ನೋವುಗಳನ್ನು ದಾಖಲಿಸುವ ಮೂಲಕ ಕನ್ನಡದಲ್ಲಿ ಮೊದಲ ದಲಿತ ಆತ್ಮಕಥೆಯನ್ನು ಬರೆದರು. ನಂತರ ೧೯೨ರಲ್ಲಿ ಸಿದ್ದಲಿಂಗಯ್ಯನವರು 'ಊರು ಕೇರಿ' ತುಂಬಾಡಿ ರಾಮಯ್ಯನವರ 'ಮಣೆಗಾರ', ಯಲ್ಲಪ್ಪ ಕೆಕೆಪುರ ಅವರ 'ಕೇರಿಯಿಂದ ತೇರಿಗೆ' ಮುಂತಾದ ದಲಿತ ಆತ್ಮ ಕಥೆಗಳು ಕನ್ನಡ ಸಾಹಿತ್ಯದಲ್ಲಿ ಬಂದಿರುವುದನ್ನು ಕಾಣಬಹುದು.

ಈ ರೀತಿಯಾಗಿ ಕನ್ನಡ ಸಾಹಿತ್ಯದಲ್ಲಿ ಬಂದಂತಹ ದಲಿತ ಆತ್ಮ ಕಥೆಗಳಲ್ಲಿ ದಲಿತರಿಗೆ ಶೋಷಣೆ, ಬಡತನದ ಅನುಭವ, ಅವಮಾನಗಳು, ದಲಿತರ ಸ್ವಾತಂತ್ರ್ಯ ನಂತರ ಭಾರತದಲ್ಲಿ ದೊರಕುತ್ತಿರುವ ಸೌಲಭ್ಯಗಳಾದ ಶಿಕ್ಷಣ, ಸಮಾಜದಲ್ಲಿ ಬದುಕುವ ಸ್ಥಿತಿಯನ್ನು ತಮ್ಮ ಸಮುದಾಯಗಳ ಬದುಕಿನ ಚಿತ್ರಣವನ್ನು ಆತ್ಮ ಕಥೆಗಳಲ್ಲಿ ದಾಖಲಿಸಿದ್ದಾರೆ.

ನಾನು ಈ ಅಧ್ಯಯನದಲ್ಲಿ "ದಲಿತ ಆತ್ಮ ಕಥನಗಳಲ್ಲಿ ದಲಿತರ ಬದುಕಿನ ವಿವಿಧ ಆಯಾಮಗಳಾದ ಕೌಟುಂಬಿಕ, ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ಬಡತನ, ಸೃಜನಶೀಲತೆ ಮತ್ತು ಕ್ರಿಯಾಶೀಲತೆಗಳನ್ನು ಕುರಿತಂತೆ ಅಧ್ಯಯನ ಕೈಗೊಂಡಿರುತ್ತೇನೆ.

ಅಧ್ಯಯನದ ಉದ್ದೇಶ:

ಪ್ರಸ್ತುತವಾಗಿ ಈ ಅಧ್ಯಯನದ ಉದ್ದೇಶ ಕನ್ನಡ ದಲಿತ ಲೇಖಕರು ಆತ್ಮಕಥನದಲ್ಲಿ ಕುಟುಂಬದ ಬದುಕಿನ ಬಗ್ಗೆ, ದಲಿತರ ಜೀವನಾನು ಕ್ರಮ, ತಾವು ವಾಸಿಸುವ ಪರಿಸರದ ಜನರ ಸಾಮಾಜಿಕ ಜೀವನದ ಸ್ಥಿತಿಗತಿಗಳು ಏನು ಎಂಬುದನ್ನು ಅವಲೋಕಿಸುತ್ತಾ ದಲಿತ ಬದುಕಿನ ವಿವಿಧ ಆಯಾಮಗಳನ್ನು, ಕುಟುಂಬ, ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ, ಬಡತನ, ಸೃಜನಶೀಲತೆ ಮತ್ತು ಕ್ರಿಯಾ ಶೀಲತೆಗಳ ಹಿನ್ನೆಲೆಯಲ್ಲಿ ಸೂಕ್ಷ್ಮವಾಗಿ ಗ್ರಹಿಸುವುದಾಗಿದೆ.

ಅಧ್ಯಯನದ ಮಹತ್ವ:

ಕರ್ನಾಟಕದಲ್ಲಿ ಬದುಕುತ್ತಿರುವ ಪ್ರತಿಯೊಂದು ಸಮುದಾಯದ ಜನರು, ಸಮಾಜದಲ್ಲಿ ಯಾವ ಬಗೆಯಲ್ಲಿ ಜೀವಿಸುತ್ತಾರೆ ಅವರ ರಾಜಕೀಯ, ಸಾಂಸ್ಕೃತಿಕ, ಸಾಮಾಜಿಕ, ಶೈಕ್ಷಣಿಕ, ವಿದ್ಯಾಮಾನಗಳನ್ನು ತಿಳಿಯಲು ಹಾಗೂ ವೈಯಕ್ತಿಕ ವಿಚಾರಗಳಾದ ನೋವು, ಸುಖ-ದುಃಖ ಕಷ್ಟಗಳನ್ನು ಅರ್ಥ ಮಾಡಿಕೊಳ್ಳಲು ಆತ್ಮಕಥೆಗಳ ಮೇಲೆ ಅಧ್ಯಯನ ಮಾಡಿದರೆ ಒಳ್ಳೆಯದೇನಿಸುತ್ತದೆ. ಆದ್ದರಿಂದ ಸಮಾಜದಲ್ಲಿನ ದಲಿತರ ಜೀವನಾನುಕ್ರಮದ ಬಗ್ಗೆ ಸಮಾಜಿಕ ಸ್ಥಾನಮಾನಗಳನ್ನು ಅರಿಯುವುದಕ್ಕೆ ದಲಿತ ಆತ್ಮ ಕಥೆಗಳ ಅಧ್ಯಯನದಿಂದ ಮಾತ್ರ ತಿಳಿಯಲು ಸಾಧ್ಯವಾಗುತ್ತದೆ.

ಆದ್ದರಿಂದ ದಲಿತ ಆತ್ಮ ಕಥೆಗಳಲ್ಲಿ ದಲಿತ ಬದುಕಿನ ವಿವಿಧ ಆಯಾಮಗಳನ್ನು ಅಧ್ಯಯನ ಮಾಡುವುದು ಮುಖ್ಯವಾಗಿದೆ.

ಅಧ್ಯಯನದ ವ್ಯಾಪ್ತಿ:

ಕನ್ನಡ ದಲಿತ ಆತ್ಮ ಕಥೆಗಳಲ್ಲಿ "ದಲಿತ ಬದುಕಿನ ವಿವಿಧ ಆಯಾಮಗಳು" ಎಂಬ ವಿಷಯಕ್ಕೆ ಪೂರಕವಾಗಿ ಅಧ್ಯಯನ ವ್ಯಾಪ್ತಿಯನ್ನು ಈ ಕೆಳಗಿನಂತೆ ಗುರುತಿಸಲಾಗಿದೆ. ಸಮಾಜದಲ್ಲಿ ದಲಿತರು ಬದುಕನ್ನು ಕುರಿತಂತೆ ಅವರ ಕೌಟುಂಬಿಕ ಜೀವನ, ಸಾಮಾಜಿಕ, ಶೈಕ್ಷಣಿಕ, ಬಡತನ, ಸೃಜನ ಶೀಲತೆಗೆ ಸಂಬಂಧ ಪಟ್ಟಂತೆ ಅಧ್ಯಯನದ ವ್ಯಾಪ್ತಿಯನ್ನು ಒಳಗೊಂಡಿರುತ್ತದೆ. ಈ ಅಧ್ಯಯನಕ್ಕೆ ಬೇಕಾದಂತೆ ಆತ್ಮಕಥೆಗಳನ್ನು ಪ್ರಾದೇಶಿಕ ಮತ್ತು ಆತ್ಮ ಕಥನಕಾರ ಸಾಮಾಜಿಕ ಹಿನ್ನೆಲೆಯಲ್ಲಿ ಮುಖ್ಯವಾಗಿ ನಾಲ್ಕು ದಲಿತ ಆತ್ಮಕಥನಗಳನ್ನು ಅಧ್ಯಯನಕ್ಕೆ ಆಯ್ದು ಕೊಳ್ಳಲಾಗಿದೆ.

ಅಧ್ಯಯನದ ವಿಧಾನ:

ಪ್ರಸ್ತುತ ಅಧ್ಯಯನವು ಆಕರಕೇಂದ್ರಿತವಾಗಿದ್ದು, ಆಯ್ದ ದಲಿತ ಆತ್ಮಕಥೆಗಳನ್ನು ವಿವರಣಾತ್ಮಕ ಹಾಗೂ ವಿಶ್ಲೇಷಣಾತ್ಮಕ ವಿಧಾನದಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಅಧ್ಯಾಯ ಎರಡು

ಕೌಟುಂಬಿಕ ಆಯಾಮ

ಅಧ್ಯಾಯ ಎರಡು

ಕೌಟುಂಬಿಕ ಆಯಾಮ

ಕನ್ನಡ ದಲಿತ ಆತ್ಮಕಥೆಗಳಲ್ಲಿ ಅಸ್ಪೃಶ್ಯತೆಯ ಘೂರ ಅನುಭವ ಭೀಕರವಾದ ಬಡತನದ ಕಹಿ ಪರಾವಲಂಬನೆಯಿಂದ ಬಂದ ದಾಸ್ಯ ವ್ಯವಸ್ಥೆಯ ಅಟ್ಟಹಾಸ, ದಲಿತ ಬದುಕನ್ನು ನುಂಗಿ ನೀರು ಕುಡಿಯುವ ಮೌಡ್ಯ, ಸ್ವಾತಂತ್ರ್ಯ ನಂತರ ಬಂದ ಶೈಕ್ಷಣಿಕ ಸವಲತ್ತುಗಳಿಂದಾದ ಅನುಕೂಲತೆ, ತಮ್ಮ ಮೇಲಿನ ದೌರ್ಜನ್ಯ ದಲಿತರು ಎದುರಿಸಲು ನಡೆಸಬೇಕಾದ ಹೋರಾಟ ಇತ್ಯಾದಿ ವಿಷಯಗಳು ದಲಿತ ಆತ್ಮಕಥೆಗಳ ಒಡಲಲ್ಲಿ ಇಂಬೂಗೊಂಡಿವೆ. ದಲಿತ ಆತ್ಮ ಕಥೆಗಳಲ್ಲಿ ಮೊದಲ ಆತ್ಮ ಕಥೆ ಎಂದರೆ ಅರವಿಂದ ಮಾಲಗತ್ತಿಯವರ ಗೌರ್ಮೆಂಟ್ ಬ್ರಾಹ್ಮಣ. ಮಾಲಗತ್ತಿಯವರ ಈ ಆತ್ಮಕಥನದಲ್ಲಿ ತನ್ನ ಕುಟುಂಬ ಹಾಗೂ ತಮ್ಮ ಸಮುದಾಯದ ಬದುಕಿನ ಸ್ಥಿತಿಗತಿಗಳು ತಮ್ಮ ಕೇರಿಯ ರಾತ್ರಿ ಮತ್ತು ಹಗಲುಗಳಲ್ಲಿ ಆಗುತ್ತಿರುವ ಸಾಮಾಜಿಕ ಸಂಗತಿಗಳು ಅಂದರೆ ಸಮಾಜದಲ್ಲಿ ನಡೆಯುತ್ತಿರುವ ಅನೈತಿಕ ಚಟುವಟಿಕೆಗಳು, ತನ್ನ ಉದ್ಯೋಗ ಪೂರ್ವದ ಕುಟುಂಬದ ಬದುಕು ಹಾಗೂ ವೈಯಕ್ತಿಕ ವಿವರಗಳನ್ನು ಬಡತನ, ಭಕ್ತಿ, ಪ್ರೇಮ ಮುಂತಾದ ವಿಷಯಗಳನ್ನು ಕುರಿತಂತೆ ವಿವರಿಸಿದ್ದಾರೆ.

ನನ್ನ ಅಧ್ಯಯನಕ್ಕೆ ಸಂಬಂಧಿಸಿದಂತೆ ದಲಿತ ಆತ್ಮಕಥನಗಳಾದ ಗೌರ್ಮೆಂಟ್ ಬ್ರಾಹ್ಮಣ, ಊರುಕೇರಿ, ಮಣೆಗಾರ, ಕೇರಿಯಿಂದ ತೇರಿಗೆ ಆತ್ಮಕಥೆಗಳಲ್ಲಿ ದಲಿತ ಬದುಕಿನ ವಿವಿಧ ಆಯಾಮಗಳನ್ನು ಗುರುತಿಸುವುದಾಗಿದೆ. ಆಯಾಮಗಳೆಂದರೆ ಕೌಟುಂಬಿಕ, ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ಬಡತನ, ಸೃಜನಶೀಲತೆ ಮತ್ತು ಕ್ರಿಯಾಶೀಲತೆ.

ಕೌಟುಂಬಿಕ ಆಯಾಮ:

ಮಾಲಗತ್ತಿಯವರು ದಲಿತ ಕುಟುಂಬದಲ್ಲಿ ಜನಿಸಿದರು. ಇವರ ಕುಟುಂಬ ತಮ್ಮ ಕೇರಿಯಲ್ಲಿ ಇತರೆ ದಲಿತ ಕುಟುಂಬಗಳಿಗಿಂತ ಉನ್ನತವಾದ ಘನತೆ ಗೌರವಗಳಿಂದ ಬದುಕಿದ

ಕುಟುಂಬ, ತಂದೆಯವರು ಶಿಕ್ಷಕರಾಗಿ ಜೀವನವನ್ನು ನಡೆಸುತ್ತಿದ್ದರು. ಅವಿಭಕ್ತ ಕುಟುಂಬವಾಗಿದ್ದು, ತಂದೆಯು ತೀರಿಕೊಂಡ ನಂತರ ಚಿಕ್ಕಪ್ಪನೆ ತಮ್ಮ ಕುಟುಂಬದ ಜವಾಬ್ದಾರಿಯನ್ನು ನೋಡಿಕೊಳ್ಳುತ್ತಿದ್ದರು ಎಂಬುದನ್ನು ಲೇಖಕರು ಆತ್ಮ ಕಥೆಯಲ್ಲಿ ವಿವರಿಸಿದ್ದಾರೆ.

'ಸ್ವಾತಂತ್ರ್ಯದ ಸಂದರ್ಭದಲ್ಲಿ ನಮ್ಮ ಮನೆಯವರು ವೀರಶೈವ ಮತಕ್ಕೆ ಮತಾಂತರ ಹೊಂದಿದವರು (ಇಲ್ಲಿ ನನಗೆ ಕ್ರೈಸ್ತ ಧರ್ಮ, ಹಿಂದೂ, ಪಾದ್ರಿಗಳು, ಗಾಂಧಿ, ಅಂಬೇಡ್ಕರ್ ಮುಂತಾದವರು ನೆನಪಾಗುತ್ತಾರೆ) ಇವರಿಗೂ ಮೇಲು ಜಾತಿಯವರು ಎನಿಸಿಕೊಳ್ಳುವ ಬಯಕೆ ಹೀಗಾಗಿ ದೀಕ್ಷೆಯನ್ನು ಪಡೆದುಕೊಂಡರು. ಶಿವದಾರದ ಜೊತೆಗೆ ಬಗಲಲ್ಲಿ ಲಿಂಗವೂ ಜೋತಾಡ ತೊಡಗಿತು.'[೧]

ಲೇಖಕರು ಹಿಂದೂ ಧರ್ಮದಲ್ಲಿ ಒಳಪಂಗಡವೂ ದಲಿತರಾಗಿದ್ದರೂ ಸಮಾಜದಲ್ಲಿ ಒಳ್ಳೆಯ ಸ್ಥಾನಮಾನ, ಪ್ರೀತಿಯನ್ನು, ಗೌರವವನ್ನು ಪಡೆಯಲು ವೀರಶೈವ ಮತಕ್ಕೆ ಮತಾಂತರ ಹೊಂದುವುದು ಮಾಲಗತ್ತಿಯವರ ಕುಟುಂಬ ಮೇಲ್ವರ್ಗದವರು ಎನಿಸಿಕೊಳ್ಳಲು ಭಾವಿಸುತ್ತಿದ್ದರು. ಆದರೆ ಲೇಖಕರು ತಮ್ಮ ದಲಿತ ಜಾತಿಯನ್ನು ಬಿಟ್ಟುಕೊಡದೆ ಕುಟುಂಬದ ನಡತೆಯನ್ನು ತಿರಸ್ಕರಿಸುತ್ತಿದ್ದನ್ನು ಕಾಣಬಹುದು. ತನ್ನ ಅಜ್ಜಿಯ ಜೊತೆಯಲ್ಲಿ ಬೆಳೆದು, ಅವಳ ಸಹಕಾರದಿಂದ ಕುಟುಂಬದ ಜೀವನ ಕ್ರಮಗಳನ್ನು ಆತ್ಮ ಕಥನದಲ್ಲಿ ಬರೆದಿದ್ದಾರೆ. ಮಾಲಗತ್ತಿಯವರ ಕುಟುಂಬ ಬಡತನದಿಂದ ಬದುಕಿದ್ದರೆ ಎಂಬುದನ್ನು ಹೇಳಿರುವುದಾಗಲಿ, ತನ್ನ ಕುಟುಂಬದ ಸದಸ್ಯ ಬೇರೆಯರ ಹೋಲ ಗದ್ದೆಗಳಲ್ಲಿ ಕೂಲಿ ಮಾಡಿ ಜೀವನ ನಡೆಸಿಲ್ಲ ತನ್ನ ತಂದೆ ಶಿಕ್ಷಕರಾಗಿದ್ದು, ಚಿಕ್ಕಪ್ಪ ಸರ್ಕಾರಿ ನೌಕರಿಯಲ್ಲಿದ್ದು, ದಲಿತರಾಗಿದ್ದು ತಮ್ಮ ಘನತೆ ಗೌರವಕೋಸ್ಕರ ವೀರಶೈವ ಮತಕ್ಕೆ ಮತಾಂತರ ಹೊಂದುವುದು ಇವರು ಶಿಕ್ಷಿತರಾಗಿದ್ದಕ್ಕೆ ಇಂತಹ ಕೆಲಸದಲ್ಲಿ ಇದ್ದರು ದಲಿತರು ಎಂಬ ಕಾರಣಕ್ಕಾಗಿ ತಮ್ಮ ತನವನ್ನು ಬಿಡಬಾರದು ಎಂದು ಅರವಿಂದ ಮಾಲಗತ್ತಿಯವರು ಮಾನವೀಯತೆಯನ್ನು ಉಳಿಸಿಕೊಂಡು ದಲಿತರು ಎಂದು ಹೇಳಿಕೊಂಡು ಆತ್ಮ ಕಥನದಲ್ಲಿ ದಲಿತರಾಗಿ ಹುಟ್ಟಿದ್ದ ತನ್ನ ಹಾಗೂ ಕುಟುಂಬದ ಸ್ಥಿತಿಯನ್ನು ಚಿತ್ರಿಸಿದ್ದಾರೆ.

ಊರುಕೇರಿ:

ದಲಿತ ಕವಿ ಸಿದ್ದಲಿಂಗಯ್ಯನವರು ಊರು-ಕೇರಿ ಆತ್ಮಕಥನದಲ್ಲಿ ತಮ್ಮ ಕೇರಿಯ ಬದುಕಿನ ಪರಿಸರವನ್ನು ವಿವರವಾಗಿ ಕಟ್ಟಿಕೊಟ್ಟಿದ್ದಾರೆ. ಅವರು ಬದುಕಿನ ಜೀವಾನಾನುಭವಗಳನ್ನು ಚಿತ್ರಿಸುವಾಗ ತೀರ ಸಂವೇದನೆಯ ಅರ್ದ್ರತೆಗಳಿಂದ ಹಾಸ್ಯ, ವಿಡಂಬನೆ, ವ್ಯಂಗ, ವಿನೋದಗಳ ಮೂಲಕ ಅನುಭವ ಸುರಳಿಯನ್ನು ಬಿಚ್ಚಿಡುತ್ತಾ ಹೋಗುತ್ತಾರೆ. ಅವರ ಆತ್ಮಕಥನ ಬಾಲ್ಯದಿಂದ ಕಾಲೇಜಿನ ದಿನಗಳವರೆಗೆ ಕೆಲವು ಅನುಭವಗಳನ್ನು ತಿಳಿಸುತ್ತಾ ಅದರಲ್ಲಿ ಅನೇಕ ರೀತಿಯ ಗ್ರಾಮೀಣ ಪ್ರದೇಶದ ಬದುಕಿನ ಚಿತ್ರಣಗಳನ್ನು ಬಿಂಬಿತಗೊಂಡಿದೆ. ಅದರಲ್ಲೂ ಮುಖ್ಯವಾಗಿ ದಲಿತ ಕೇರಿಯಲ್ಲಿ ನಡೆದ ಮತ್ತು ನಡೆಯುವ ಬದುಕಿನ ತಮ್ಮ ಸಮಕಾಲೀನ ಸಂದರ್ಭದಲ್ಲಿ

ತಾನು ಅನುಭವಿಸಿದ ಜೀವಂತ ಅನುಭವಗಳನ್ನು ತಮ್ಮ ಆತ್ಮಕಥನದಲ್ಲಿ ವಿಶ್ಲೇಷಿಸಿದ್ದಾರೆ.

ಸಿದ್ದಲಿಂಗಯ್ಯನವರು ಊರುಕೇರಿ ಆತ್ಮಕಥೆಯ ಸಮಾಜದಲ್ಲಿ ದಲಿತರ ಜೀವನಾನುಕ್ರಮ ತನ್ನ ಕುಟುಂಬವು ಬಡತನದಿಂದ ಜೀವನ ನಡೆಸಿದ ಹಾಗೂ ಸಮಾಜದಲ್ಲಿ ಅಸಮಾನತೆಯಿಂದ ದಲಿತರನ್ನು ಶೋಷಣೆ ಮಾಡುವ, ಶಾಲೆಯಲ್ಲಿ ಅನುಭವಿಸಿದ ಅನುಭವ ಹಾಗೂ ಬೆಂಗಳೂರಿನ ಶ್ರೀರಾಂಪುರದಲ್ಲಿ ಬದುಕಿದ ಸಾಮಾಜಿಕ ಜೀವನದ ಬಗ್ಗೆ ವಿವರಿಸಿದ್ದಾರೆ. ಈ ಆತ್ಮಕಥನದಲ್ಲಿ ನಾನು ನನ್ನ ಅಧ್ಯಯನದ ದೃಷ್ಟಿಯಿಂದ ಕೌಟುಂಬಿಕ, ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ಆಯಾಮಗಳಲ್ಲಿ ದಲಿತರ ಸಮಾಜದಲ್ಲಿ ಜೀವಿಸಿದ ಬಗೆಯನ್ನು ನೋಡುವುದಾಗಿದೆ.

ಸಿದ್ದಲಿಂಗಯ್ಯನವರ ಕುಟುಂಬ ತೀರ ಬಡತನದಿಂದ ಜೀವನ ಮಾಡಲು ಕೂಲಿ ಮಾಡುತ್ತಾ ಬದುಕುತ್ತಿದ್ದರು. ಇವರ ಕೇರಿಯಲ್ಲಿ ಕೊನೆ ಮನೆ ಸಿದ್ದಲಿಂಗಯ್ಯನವರದು. ಇವರ ತಂದೆ-ತಾಯಿ ಊರಿನ ಐನೊರ ಹೊಲದಲ್ಲಿ ಕೂಲಿ ಮಾಡುತ್ತಾ ಜೀವನ ಮಾಡುತ್ತಿದ್ದರು. 'ಎಂದಿನಂತೆ ಹುಡುಗರಲ್ಲಿ ನಮ್ಮ ಮನೆಯ ಪಕ್ಕದ ಮೊಟು ಗೋಡೆಯ ಮೇಲೆ ನಿಂತು ಅಪ್ಪ ಅವ್ವಂದಿರನ್ನು ಕೂಗುತ್ತಿದ್ದಾಗ ನಮಗೆ ಒಂದು ನೋಟ ಕಾಣಿಸಿತು. ಐನೊರು ಹೊಲದಲ್ಲಿ ಇಬ್ಬರು ಮನುಷ್ಯರು ಹೆಗಲ ಮೇಲೆ ನೋಗ ಹೂಡಿ ಒಬ್ಬ ಹೊಲ ಉಳುತ್ತಿದ್ದರು. ಇನೊಬ್ಬ ಹಿಂದಿನಿಂದ ಚಾಟಿ ತಿರುಗಿಸುತ್ತಾ ಉಳುಮೆ ಮಾಡುತ್ತಿದ್ದ. ದೃಶ್ಯ ಮೋಜಿನಂತೆ ಕಂಡರೂ ನೋಗ ಹೊತ್ತಿದ್ದ ಇಬ್ಬರು ವ್ಯಕ್ತಿಗಳಲ್ಲಿ ಒಬ್ಬ ನನ್ನ ಅಪ್ಪ ಎಂದು ಗೊತ್ತಾದ ಕ್ಷಣದಿಂದ ನನ್ನಲ್ಲಿ ವಿಚಿತ್ರವಾದ ಸಂಕಟ ಶುರುವಾಯಿತು. ಹುಡುಗರಿದ್ದ ಜಾಗಕ್ಕೆ ಬಂದ ಕೆಲವು ಹೆಂಗಸರು 'ಪಾಪ ದ್ಯಾವಣ್ಣನಿಗೆ ಎಂಥ ಕಷ್ಟ ಬಂತು' ಎಂದದ್ದು ನನ್ನ ಕಿವಿಗೆ ಬಿದ್ದು ಮನಸ್ಸಿನ ನೋವು ಇಮ್ಮಡಿಯಾಯಿತು. ಗದ್ದೆಯಲ್ಲಿ ಎತ್ತಾಗಿ ದುಡಿದು ನಮ್ಮಪ್ಪ ಸಂಜೆ ಮನೆಗೆ ಬಂದಾಗ ಅವ್ವ ಭುಜಕ್ಕೆ ಎಣ್ಣೆ ಕಾಯಿಸಿ ಹಚ್ಚುತ್ತಿದ್ದಳು'[೨] ಸಿದ್ದಲಿಂಗಯ್ಯನವರ ಕುಟುಂಬ ಬಡತನದಿಂದ ಕೂಡಿದ್ದರಿಂದ ದಿನಾಲು ಜೀವನ ಸಾಗಿಸಲು, ಹೊಟ್ಟೆ ಹಸಿವು ನಿಗಿಸಿಕೊಳ್ಳುವುದಕ್ಕೆ ಪ್ರಾಣಿಗಳ ಹಾಗೆ ಮೇಲ್ವರ್ಗದ ಹೊಲದಲ್ಲಿ ದುಡಿಯುವ ಸ್ಥಿತಿಯನ್ನು ವಿವರಿಸಿದ್ದಾರೆ. ಹಾಗೆಯೇ ತಮ್ಮ ಕುಟುಂಬಕ್ಕೆ ಮೂರು ಕಡೆ ಚೂರು ಭೂಮಿ ಇರುವುದನ್ನು, ಮನೆಯ ಹತ್ತಿರದಲ್ಲಿ ಮಾಗಡಿ ಪೇಟೆಯ ಬ್ರಾಹ್ಮಣ ಹೊಲವನ್ನು ಪಾಲಿಗೆ ಮಾಡುವ ಮೂಲಕ ಜೀವನ ನಡೆಸುತ್ತಿದ್ದರು ಜೊತೆಗೆ ಸಿದ್ದಲಿಂಗಯ್ಯನವರ ತಂದೆಯು ಒಂದು ಚಿಕ್ಕದಾದ ಜಾಗದಲ್ಲಿ ಹೂವು, ತರಕಾರಿ ಬೆಳೆಯುತ್ತಿದ್ದರು. ಇದನ್ನು ಸಂಜೀವಯ್ಯನ ತೋಟ ಎನ್ನುತ್ತಿದ್ದರು. ಇಲ್ಲಿ ಬೆಳೆದ ಹೂವುಗಳನ್ನು ಮಾಗಡಿ ಸಂತೆಯಲ್ಲಿ ಮಾರಿ ಸಂಪಾದಿಸಿ ಬಂದ ಹಣದಿಂದ ಜೀವನ ಸಾಗಿಸುವುದನ್ನು ವಿವರಿಸಿದ್ದಾರೆ.

ತಂದೆಗೆ ತನ್ನ ಕುಟುಂಬವನ್ನು ಸಾಕಲು ಪಿತ್ರಾರ್ಜಿತವಾದ ಆಸ್ತಿ ಇತ್ತು ಎಂದು ಆತ್ಮ ಕಥನದಲ್ಲಿ ಲೇಖಕರು ಈ ರೀತಿಯಾಗಿ ವಿವರಿಸಿದ್ದಾರೆ. 'ಹೊಸ ಹೊಲ ಮತ್ತು ಹಾಳೂರು ಹೊಲ ಎಂಬ ಹೊಲದಲ್ಲಿ ತಂದೆಗೆ ಪಾಲಿತ್ತು. ಇದು ಪಿತ್ರಾರ್ಜಿತವಾಗಿ ಬಂದದ್ದು. ತಂದೆ-

ತಾಯಿ ಇಬ್ಬರು ಬಹುದೂರ ನಡೆದು ಹೋಗಿ ಹೊಸ ಹೊಲದಲ್ಲಿ ದುಡಿಯುತ್ತಿದ್ದರು. ನನ್ನನ್ನು ಮರ ಅಥವಾ ಗಿಡವೊಂದರ ಕೆಳಗೆ ಕೂರಿಸಿ ಅವರು ದುಡಿಮೆ ಮಾಡುತ್ತಿದ್ದರು. ಮಧ್ಯಾಹ್ನ ಊಟಕ್ಕೆ ಬಂದರೆ ಸಂಜೆಯ ತನಕ ದುಡಿಮೆ'[೩] ತಮ್ಮ ಕುಟುಂಬ ಬದುಕಿನ ವಿವರಗಳನ್ನು ಲೇಖಕರು ಚಿತ್ರಿಸಿದ್ದಾರೆ. ಹೀಗೆ ಜೀವನ ನಡೆಸುತ್ತಿದ್ದರು ತಂದೆಯು ಊರಲ್ಲಿ ಜೀವನ ಕಷ್ಟವಾಗಿ ತಂದೆ ಮಹಾ ಸಾಲಗಾರನಾಗಿ ಒಂದು ದಿನ ಬೆಂಗಳೂರಿನ ಸೇರಿದರು. ದುಡಿಯಲು ತಂದೆಯು ಬೇರೆ ಊರಿಗೆ ಹೋದಾಗ ತಾಯಿಯ ತೌರು ಮನೆಗೆ ಮಂಚಬಿಲೆಗೆ ಹೋಗಿ ತಾಯಿ ಹಾಗೂ ಸಿದ್ದಲಿಂಗಯ್ಯನವರು ತಾತ–ಮಾವನರ ಆಶ್ರಯದಲ್ಲಿ ಜೀವನ ಮಾಡುತ್ತಿದ್ದರು. ಒಂದು ದಿನ ತಂದೆಯು ಮಂಚನಬಲೆಗೆ ಬಂದು ತನ್ನ ಕುಟುಂಬವನ್ನು ಹಳ್ಳಿಯಿಂದ ಬೆಂಗಳೂರಿಗೆ ಕರೆದೊಯ್ದು ಬೆಂಗಳೂರಿನ ಶ್ರೀರಾಂಪುರದಲ್ಲಿ ಮನೆ ಮಾಡಿ ತಮ್ಮ ಕುಟುಂಬದ ಜೀವನ ಸಾಗಿಸಲು ತಂದೆ ಹಾಗೂ ದೊಡ್ಡಪ್ಪ ಸೆಂದಿ ಅಂಗಡಿಯಲ್ಲಿ ಕೆಲಸ ಮಾಡುತ್ತಾ ಜೀವನ ನಡೆಸಿದ ಪರಿಸ್ಥಿತಿಯೆಂದರೆ 'ಹೆಂಡದ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದರು ಲಾರಿಗಳಲ್ಲಿ ಬರುತ್ತಿದ್ದ ಹೆಂಡವನ್ನು ಪೀಪಾಯಿಗಳಿಗೆ ತುಂಬುವುದು ಅವರ ಕೆಲಸ. ಅಂಗಡಿಯ ಮಾಲೀಕರು ಇವರ ಕೆಲಸಕ್ಕೆ ಕೂಲಿ ಕೊಡುವುದಲ್ಲದೆ, ರಾತ್ರಿ ಮನೆಗೆ ಬರುವಾಗ ಹೆಂಡದ ಪಿಡಾಯಿಯನಲ್ಲಿ ತಿರುಗಿಸಿ ಸಾಕಾಗುವಷ್ಟು ಕುಡಿಯಲು ಅವಕಾಶ ಕೊಟ್ಟಿದ್ದರು'[೪] ಹೀಗೆ ಕೂಲಿ ಮಾಡುವ ಮೂಲಕ ಪೇಟೆಯಲ್ಲಿ ತಮ್ಮ ಕುಟುಂಬ ಜೀವನ ನಡೆಸುವುದನ್ನು ಹಾಗೂ ರಾಜಾ ಮಿಲ್ಲಿನಲ್ಲಿ ತಂದೆಯು ಬದಲಿ ಕೆಲಸಗಾರನಾಗಿದ್ದು ಬೆಳಗಿನ ಜಾವ ಐದು ಗಂಟೆಗೆ ಎದ್ದು ರಾಜಾ ಮಿಲ್ಲಿನ ಗೇಟಿಗೆ ನಿಲ್ಲುತ್ತಿದ್ದ. ಆ ದಿನ ಯಾರಾದರೂ ಖಾಯಂ ಕೆಲಸಗಾರರು ಗೈರು ಹಾಜರಾಗಿದ್ದರೆ ಆ ಕೆಲಸ ತಂದೆಗೆ ಸಿಗುತ್ತಿತ್ತು. ತಿಂಗಳಿನಲ್ಲಿ ಕೆಲವು ದಿನಗಳು ಈ ರೀತಿ ಕೆಲಸ ಸಿಗುತ್ತಿದ್ದರಿಂದ ಕುಟುಂಬದ ಜೀವನ ನಡೆಸಲು ಅನುಕೂಲವಾಗುತ್ತಿತ್ತು. ಹಾಗೆಯೇ ಅಕ್ಕ ಪಕ್ಕದ ಸೌದೆ ಡಿಪೋಗಳಲ್ಲಿ ತಂದೆ ನಿತ್ಯವು ಸೌದೆ ಒಡೆಯುತ್ತಿದ್ದನು. ಆಗ ಬಹುಪಾಲು ಜನ ಅಡುಗೆ, ಸ್ನಾನ ಪ್ರತಿಯೊಂದಕ್ಕೂ ಸೌದೆಯನ್ನು ಬಳಸುತ್ತಿದ್ದರಿಂದ ಡಿಪೋಗಳಲ್ಲಿ ಸೌದೆ ಕೊಳ್ಳಲು ಬಂದೇ ಬರುತ್ತಿದ್ದರು. ತಂದೆ ಮರದ ಚಿಕ್ಕ ಚಿಕ್ಕ ದಿಮ್ಮಿಗಳನ್ನು ಒಲೆಯಲ್ಲಿ ಉರಿಯಲು ಅನುಕೂಲವಾಗುವಂತೆ ಹೋಳುಗಳನ್ನಾಗಿ ಸೀಳುತ್ತಿದ್ದನು. ತಾನು ಒಡೆದ ಸೌದೆಯನ್ನು ಮೂಟೆಕಟ್ಟಿ ಮನೆ ಮನೆಗೆ ಹೊಯ್ದು ಮಾರುವ ಮೂಲಕ ಹಣ ಸಂಪಾದನೆ ಮಾಡಿ ಕುಟುಂಬವನ್ನು ಸಾಕುತ್ತಿದ್ದರು.

ಮಣೆಗಾರ:

ತುಂಬಾಡಿ ರಾಮಯ್ಯನವರ ಮಣೆಗಾರ ಆತ್ಮ ಕಥನವನ್ನು ಎರಡು ಭಾಗಗಳಾಗಿ ವಿಂಗಡಿಸಿ ಬರೆದಿದ್ದಾರೆ. ಮೊದಲ ಭಾಗದಲ್ಲಿ ತುಂಬಾಡಿ ಹಳ್ಳಿಯ ಸಾಮಾಜಿಕ, ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕವಾಗಿ ತೆರೆದು ಕೊಳ್ಳುವುದನ್ನು ಕುರಿತು ಬರೆದಿದ್ದಾರೆ. ಈ ಆತ್ಮ ಕಥನದಲ್ಲಿ ಹರಿಜನರು ದಲಿತ ಸಮಾಜದಲ್ಲಿ ಅಪಮಾನ, ಅಸಮಾನತೆಯಿಂದ ಜೀವನ

ನಡೆಸಿದ ರೀತಿ, ತನ್ನ ಕುಟುಂಬ ಸ್ಥಿತಿಯ ಬಗ್ಗೆ ತಾನು ಬಾಲ್ಯದಿಂದ ಶಿಕ್ಷಣ ಪಡೆಯುವಾಗ ಶಾಲೆಯಲ್ಲಿ ಸಮಾಜದಿಂದ ನಿಂದನೆಗೆ ಒಳಗಾದ ವಿಷಯಗಳನ್ನು ವಿಶ್ಲೇಷಿಸಿದ್ದಾರೆ. ಜೊತೆಗೆ ತನ್ನ ಬುದ್ಧಿವಂತಿಕೆಯಿಂದ ವಿದ್ಯಾರ್ಥಿ ನಿಲಯದಲ್ಲಿ ಕಲಿತ ಸಂಘರ್ಷದ ಪಾಠಗಳು, ದಲಿತ ಸಂಘರ್ಷ ಸಮಿತಿಯ ಒಡನಾಟ, ಉದ್ಯೋಗದ ಬಗ್ಗೆ ವಿವರಿಸಿದ್ದಾರೆ. ಈ ಎಲ್ಲಾ ಅಂಶಗಳನ್ನು ನೋಡಿದರು ಸಹ ದಲಿತ ಆತ್ಮ ಕಥನದಲ್ಲಿ ಸಮಾಜದಲ್ಲಿ ಬದುಕುವ ದಲಿತರ ವಿವಿಧ ಆಯಾಮಗಳನ್ನು ಕುರಿತಂತೆ ನೋಡುಬಹುದು.

ತುಂಬಾಡಿ ರಾಮಯ್ಯನವರ ಸ್ವಂತ ಊರು ಎಂದರೆ ಕೊರಟಗೆರೆಯ ಗೊಲ್ಲಹಳ್ಳಿ ಇವರ ತಂದೆ ಕ್ಯಾತಪ್ಪ, ಕ್ಯಾತಪ್ಪನ ತಂದೆ ಮುಕುಂದಪ್ಪ. ರಾಮಯ್ಯನವರ ತಾತ ಮುಕುಂದಪ್ಪ ಸಣ್ಣ ಮಕ್ಕಳಿಗೆ ತಾಯತ, ದೆವ್ವ, ಪಿಶಾಚಿ ಹಿಡಿದವರಿಗೆ ಮೂರುದಾರಿ ಕೂಡುವ ಜಾಗದಲ್ಲಿ ಕೂಡಿಸಿ ಚಂಡಿ ಪೂಜೆಗೆ ಬೇಕಾಗುವ ವಸ್ತುಗಳನ್ನು ತನ್ನ ಬ್ಯಾಗಿನೊಳಗೆ ಇಟ್ಟುಕೊಂಡು ಸುತ್ತ–ಮುತ್ತಲಿನ ಊರುಗಳಿಗೆ ಹೊಗುತ್ತಾ ತನ್ನ ಕಾಯಕ ಮಾಡುತ್ತಾ ಜೀವನ ನಡೆಸುವುದು. ತನ್ನ ತಂದೆಗೆ ಒಟ್ಟು ಎಂಟು ಜನ ಮಕ್ಕಳು ಅದರಲ್ಲಿ ನಾಲ್ಕನೇ ಮಗ ರಾಮಯ್ಯನವರು ಇವರ ತಂದೆ ಕ್ಯಾತಪ್ಪನವರು ತನ್ನ ಕುಟುಂಬದ ಜೀವನ ನಡೆಸಲು ತುಂಬಾ ಕಷ್ಟದಿಂದ ಜೀವಿಸುತ್ತಿದ್ದರು. 'ನಮ್ಮ ಅಮ್ಮನಿಗೆ ಮಕ್ಕಳಾಗುವುದು ನಿಂತ ಎಷ್ಟೋ ವರ್ಷಕ್ಕೆ ಸಂಜಯಗಾಂಧಿಯ ದೆಸೆಯಿಂದ ಕಡ್ಡಾಯವಾಗಿ ಮಕ್ಕಳಾಗದಂತೆ ಆಪರೇಷನ್ ಮಾಡಿಸಿಕೊಳ್ಳುವ ಸರ್ಕಾರಿ ಕಾರ್ಯಕ್ರಮ ಜಾರಿಗೆ ಬಂದಿತು. ಆಪರೇಷನ್ ಮಾಡಿಸಿಕೊಂಡವರಿಗೆ ಸರ್ಕಾರ ಕೊಡುತ್ತಿದ್ದ ಹಣದ ಆಸೆಯಿಂದ ಅಪ್ಪ ಆಪರೇಷನ್ ಮಾಡಿಕೊಂಡು, ಆಪರೇಷನ್ ಕ್ಯಾಂಪಿನಲ್ಲಿ ಕೊಟ್ಟಿದ್ದ ಊಟವನ್ನು ಅಲ್ಲಿಯೇ ತಿನ್ನದೆ ದುಪ್ಪಟದಲ್ಲಿ ಕಟ್ಟಿಕೊಂಡು ಬಂದು ಮನೆಯಲ್ಲಿ ಇದ್ದ ನಮಗೆಲ್ಲಾ ತುತ್ತು ನೀಡಿದ. ನಮ್ಮ ಹಸಿದ ಹೊಟ್ಟೆಗಳನ್ನು ತುಂಬಿಸಿಕೊಳ್ಳಲು ಅಪ್ಪ ಹರಿಯುವ ದಶಾವತಾರವೆತ್ತಿದಂತೆ ಬೆಳಿಗ್ಗೆಯೊಂದು ಕೆಲಸ ಮಧ್ಯಾಹ್ನ ಇನ್ನೊಂದು ಕೆಲಸ, ಸಂಜೆ ಮತ್ತೊಂದು ಕೆಲಸವನ್ನು ಎಡಬಿಡದೆ ಮಾಡುತ್ತಿದ್ದ'[೫] ತುಂಬಾಡಿ ರಾಮಯ್ಯನವರ ಕುಟುಂಬ ಆರು ಮಂದಿಯಿಂದ ಕೂಡಿದ್ದು, ಇವರು ತಮ್ಮ ಹಸಿವು ನಿಗಿಸಿಕೊಳ್ಳಲು ಊಟಕ್ಕೂ ಗತಿ ಇಲ್ಲದೇ ಇರುವ ಪರಿಸ್ಥಿತಿಯಲ್ಲಿ ತಂದೆ ಸರ್ಕಾರ ಜಾರಿಗೆ ತಂದಿದ್ದ ಮಕ್ಕಳಾಗದಂತೆ ಆಪರೇಷನ್ ಮಾಡಿಸಿಕೊಂಡವರಿಗೆ ಹಣ, ಊಟ ಕೊಡುತ್ತಿದ್ದರು. ತಂದೆ ಆಪರೇಷನ್ ಮಾಡಿಸಿಕೊಂಡು ಬಂದ ಹಣದಿಂದ ಮಧ್ಯಾಹ್ನ ಕೊಟ್ಟ ಊಟವನ್ನು ಮನೆಗೆ ತಂದು ಕುಟುಂಬದ ಎಲ್ಲಾ ಸದಸ್ಯರ ಹಸಿವು ನಿಗಿಸಿಕೊಳ್ಳುತ್ತಿದ್ದರು. ಇದರ ಜೊತೆಗೆ ತಂದೆಯು ಹರಿಜನರಾದ ತಾವು ತಮ್ಮ ಕುಲಕಸುಬನ್ನು ಮಾಡುತ್ತಾ, ಜೀವನ ನಡೆಸುವುದನ್ನು ನೋಡಬಹುದು.

'ನಮ್ಮಪ್ಪನ ಹಲವು ಅವತಾರಗಳಲ್ಲಿ ಚಪ್ಪಲಿ ಹೊಲೆಯುವುದು ಪ್ರಮುಖವಾದದ್ದು. ಚಪ್ಪಲಿ ಹೊಲೆಯುವುದರಲ್ಲಿ ನಮ್ಮಪ್ಪ ಅಂತಹ ನಿಸ್ಸಿಮನೇನೂ ಅಲ್ಲದಿದ್ದರೂ ಹೆಂಡತಿ ಮಕ್ಕಳ

ಹೊಟ್ಟೆ ತುಂಬಿಸಲು ಇದನ್ನು ಮುಖ್ಯ ಕಸುಬನ್ನಾಗಿ ಮಾಡಿಕೊಂಡಿದ್ದ. ಚಪ್ಪಲಿ ಮಾಡಲು ಬೇಕಾದ ಹೊಸ ಧರ್ಮ, ಟೈರ್‌ಗಳನ್ನು ಪ್ರತಿ ಬುಧವಾರ ಮಧುಗಿರಿ ಸಂತೆಗೆ ಹೋಗಿ ಮುಸಲ್ಮಾನರಿಂದ ಸಾಲ ತರುತ್ತಿದ್ದ. ಇಡೀ ವಾರವೆಲ್ಲ ಅದರಿಂದ ಸಂಪಾದಿಸಿದ ಹಣದಲ್ಲಿ ಸಾಲವನ್ನು ತೀರಿಸುವುದು. ಹೀಗೆಯೇ ಚಕ್ರಸುತ್ತಿದ್ದಂತೆ ನಮ್ಮಪ್ಪನ ಚಪ್ಪಲಿ ಕಾಯಕ ನಡೆದಿತ್ತು. ಇದರಿಂದಾಗಿ ನಮ್ಮಪ್ಪನ ಸಾಲ ತೀರುವಂತಿರಲಿಲ್ಲ. ನಲ್ಲ ಹಸಿವು ನೀಗುವಂತಿರಲಿಲ್ಲ ಹೀಗಿತ್ತು ನಮ್ಮ ಸ್ಥಿತಿ.'[೬]

ತುಂಬಾಡಿ ರಾಮಯ್ಯನವರು ಕುಟುಂಬವನ್ನು ಸಾಕಲು ತಂದೆ ನಾನಾ ರೀತಿಯ ಕೆಲಸಗಳಲ್ಲಿ ತೋಡಗಿಕೊಂಡು ಹಣ ಸಂಪಾದಿಸಿತ್ತಿದ್ದರು. ಚಪ್ಪಲಿ ಹೊಲೆಯುವ ಕೆಲಸಕ್ಕೆ ಬೇಕಾದಂತಹ ಸಾಮಾಗ್ರಿಗಳನ್ನು ಕೊಂಡುಕೊಳ್ಳಲು ಮುಸ್ಲಿಂರ ಹತ್ತಿರ ಸಾಲ ಪಡೆದು, ದುಡಿದು ಬಂದ ಹಣದಿಂದ ಸಾಲ ತೀರಿಸಿ ಉಳಿದದ್ದನ್ನು ತಮ್ಮ ಜೀವನ ನಡೆಸಲು ಉಪಯೋಗಿಸಿಕೊಳ್ಳುತ್ತಿದ್ದರು. ಚಪ್ಪಲಿ ಕೆಲಸ ಮಾಡಲು ಪೆಮ್ಮದೇವರ ಹಳ್ಳಿ, ತುಂಬಾಡಿ, ಎತ್ತುಗೋನೆಹಳ್ಳಿ ಮತ್ತು ಲಂಬಾಣಿ ತಾಂಡಗಳಿಗೆ ಹೋಗಿ ಕೆಲಸ ಮಾಡುತ್ತಾ ಹಳ್ಳಿಗಳಲ್ಲಿ ಕೆಲಸ ಮಾಡಿದ್ದರಿಂದ ರಾಗಿ, ಭತ್ತ, ಜೋಳದ ದಿನಸಿಗಳು ಸಿಗುತ್ತಿದ್ದವು. ಬಂದ ದವಸ ಧಾನ್ಯಗಳ ಮೂಲಕ ತನ್ನ ಕುಟುಂಬದ ಜೀವನ ನಡೆತ್ತಿತ್ತು. ತಂದೆಯ ಜೊತೆಗೆ ರಜೆ ದಿನಗಳಲ್ಲಿ ರಾಮಯ್ಯನವರು ಚಪ್ಪಲಿ ಹೊಲೆಯುವ ಚಿಕ್ಕ-ಪುಟ್ಟ ಕೆಲಸಗಳಲ್ಲಿ ಆಸರೆಯಾಗುತ್ತಿದ್ದರು. ಈ ಸಂಪಾದನೆಯಿಂದ ತಮ್ಮ ಕುಟುಂಬದ ಜೀವನ ಸಾಗಿಸಲು ಕಷ್ಟವಾಗಿದ್ದರಿಂದ ತಂದೆಯು ಹಂದಿ ಕಾಯಕ ಕೆಲಸದಲ್ಲಿ ತೊಡಗಿರುವುದನ್ನು ಮಣೆಗಾರ ಆತ್ಮ ಕಥನದಲ್ಲಿ ವಿವರಿಸಿದ್ದಾರೆ.

'ಹಂದಿ ಸಾಕುವುದರಲ್ಲಿ ಅಪ್ಪ ಊರಿಗೆ ಎತ್ತಿದ್ದ ಕೈ. ನಮ್ಮ ಮನೆಯ ಹಂದಿಗಳೆಂದರೆ ಆಗ ಸುತ್ತೇಳು ಹಳ್ಳಿಗಳಲೆಲ್ಲಾ ಹೆಸರು ವಾಸಿ. ಹಂದಿ ಸಾಕುವುದೆಂದರೆ ಅತಿ ಲಾಭದಾಯಕವಾದ ಕೆಲಸವು ಆಗಿತ್ತು. ಏಕೆಂದರೆ ಕುರಿ-ಮೇಕೆ, ದನ-ಕರುಗಳಂತೆ ಹಂದಿಗಳನ್ನು ನಿಗಾವಹಿಸಿ ಯಾರು ಮೇಯಿಸಿಕೊಂಡು ಬರಬೇಕಾಗಿರಲಿಲ್ಲ. ಊರಿನಲ್ಲಿರುವ ಎಲ್ಲಾ ಕೊಚ್ಚೆ ಗುಂಡಿ ಸೊಂಪಾದ ಕಾವಲುಗಳಾಗಿದ್ದವು. ಇದರಿಂದ ಹಂದಿ ಸಾಕಲು ಅಪ್ಪನಿಗೆ ಬಿಡಿಕಾಸು ಖರ್ಚಾಗುತ್ತಿರಲಿಲ್ಲ. ಅಲ್ಲದೆ ಒಂದು ಹಂದಿ ವರ್ಷಕ್ಕೆ ಹತ್ತಾರು ಮರಿಗಳನ್ನು ಹಾಕುತ್ತಿದ್ದರಿಂದ ವರ್ಷ ವರ್ಷವು ಹಂದಿಗಳ ಸಂಖ್ಯೆ ಬೆಳೆಯುತ್ತಾ ಹೋಗುತ್ತಿತ್ತು. ಅಪ್ಪ ಸಾಕಿದ ಹಂದಿಯನ್ನು ಊರಿನಲ್ಲಿ ಕುಯ್ದು ದಿನ ಹಬ್ಬದ ವಾತವರಣವಿರುತ್ತಿತ್ತು.'[೭] ತುಂಬಾಡಿ ರಾಮಯ್ಯನವರು ತಮ್ಮ ಸಂಸಾರವನ್ನು ನಡೆಸಲು ಹಂದಿಗಳನ್ನು ಸಾಕುತ್ತಿದ್ದು ಇವುಗಳ ಸಾಕಣೆಯಿಂದ ಹೆಚ್ಚಾಗಿ ಖರ್ಚು ಆಗುತ್ತಿರಲಿಲ್ಲ. ಹಂದಿ ಮಾಂಸ ಮಾರುತ್ತಾ ತಮ್ಮ ಜೀವನ ನಡೆಸುತ್ತಿದ್ದರು ಎಂದು ರಾಮಯ್ಯನವರು ಆತ್ಮಕಥನದಲ್ಲಿ ತಿಳಿಸಿದ್ದಾರೆ.

ಇದರ ಜೊತೆಗೆ ಬೇಸಾಯವನ್ನು ಉಪಕಸುಬು ಎಂಬಂತೆ ಮಾಡುತ್ತಿದ್ದರು. ಸ್ವಂತ ಜಮೀನು ಒಂದು ಎಕರೆ, ತುಂಬಾಡಿ ರಾಮಣ್ಣನವರ ಊರ ಪಕ್ಕದ ಒಂದು ಜಮೀನನ್ನು ಪಾಲಿಗೆ ಮಾಡುತ್ತಿದ್ದರು. ಸರ್ಕಾರ ನಾಲ್ಕು ಎಕರೆ ಜಮೀನು ಕೊಟ್ಟುದ್ದು. ತನ್ನ ಅಣ್ಣ ಮದುವೆ ಸಾಲ ಮಾಡಿದಕ್ಕೆ ಸಾಲ ತೀರಿಸಲು ಜಮೀನನ್ನು ಮಾರಿ ದನ, ಎತ್ತುಗಳನ್ನು ಸಾಕುತ್ತಾ ಊರಲ್ಲಿ ಕಪಿಲೆಬಾನಿ ಹೊಳೆಯುವ ಕೆಲಸ ಮಾಡುವ ಮೂಲಕ ತಂದೆಯು ಇದರಿಂದ ಬರುವಂತಹ ದವಸ, ಧಾನ್ಯಗಳನ್ನು ಪಡೆದು ತಮ್ಮ ಸಂಸಾರವನ್ನು ನಡೆಸುತ್ತಿದ್ದರು ಎಂದು ತಮ್ಮ ಕುಟುಂಬದ ನಿಜ ಸ್ಥಿತಿಯ ಬಗ್ಗೆ ಆತ್ಮ ಕಥನದಲ್ಲಿ ತಿಳಿಸಿದ್ದಾರೆ.

ಕೇರಿಯಿಂದ ತೇರಿಗೆ:

ಯಲ್ಲಪ್ಪ ಕೆಕೆಪುರ ಇವರು ತಮ್ಮ ಆತ್ಮ ಕಥನದಲ್ಲಿ ಬಳ್ಳಾರಿ ಪರಿಸರದ ಸಾಮಾಜಿಕ ಬದುಕನ್ನು ಬರೆದಿದ್ದಾರೆ. ದಲಿತರಾದ ಇವರು ಆಂಧ್ರ ಕರ್ನಾಟಕದ ಗಡಿಭಾಗದಲ್ಲಿರುವ ರಾಂಪುರದ ಹತ್ತಿರವಿರುವ ಕೆಕೆಪುರ ಇವರ ಊರು. ತಮ್ಮ ಊರಲ್ಲಿ ದಲಿತರು ಬದುಕನ್ನು ನಡೆಸಲು ಬಡತನದಿಂದ ಮೇಲ್ವರ್ಗದವರ ಹೊಲ-ಗದ್ದೆಗಳಲ್ಲಿ ಕೂಲಿ ಮಾಡಿ ಜೀವನ ಮಾಡುವಂತಹ ಸ್ಥಿತಿ ಹಾಗೂ ತನ್ನ ಕುಟುಂಬವು ದಲಿತರಾಗಿ ದಲಿತ ಕೇರಿಯಲ್ಲಿ ದಲಿತರಿಂದಲೆ ಶೋಷಣೆಗೆ ಒಳಪಡುವ ಪರಿಸ್ಥಿತಿಯನ್ನು ತಂದೆಯು ಮಾದಿಗತನ ಮಾಡುವುದರ ಜೊತೆಗೆ ಉಳ್ಳಗಡ್ಡೆ, ಚರ್ಮದ ವ್ಯಾಪಾರ ಮಾಡುತ್ತಾ ಆರ್ಥಿಕವಾಗಿ ಸ್ವಲ್ಪಮಟ್ಟಿಗೆ ಕೂಲಿ ಮಾಡದೆ ಕುಟುಂಬವನ್ನು ಸಾಕುತ್ತಿದ್ದನ್ನು ಹಾಗೂ ತಂದೆಯ ಸಾವಿನ ನಂತರ ತಮ್ಮ ಕುಟುಂಬವು ಬಡತನದಿಂದ ಬದುಕಲು ಕಷ್ಟವಾದಾಗ ಕೂಲಿ ಮಾಡಲು ಊರಿನ ಗಂಚಿಗಾರ ಮನೆಯಲ್ಲಿ ಕೆಲಸ ಮಾಡುತ್ತಾ ತಾಯಿ, ತಾನು ಜೀವನ ಮಾಡುತ್ತಿದ್ದರು. ಕೆಕೆಪುರವರು ತಮ್ಮ ಮೇಷ್ಟ್ರ ಮನೆಯಲ್ಲಿದ್ದುಕೊಂಡು ಕೆಲಸ ಮಾಡುತ್ತಾ ಓದು, ಬರೆಯುವಲ್ಲಿ ವಿದ್ಯಾವಂತನಾಗಲು ವಿದ್ಯಾಭ್ಯಾಸದಲ್ಲಿ ತೊಡಗಿಕೊಂಡ. ದಲಿತರಲ್ಲಿ ಮೌಢ್ಯ, ಮೂಡನಂಬಿಕಗಳು ಸಾಮಾಜಿಕ ಬದುಕಿನ ಬಗ್ಗೆ ವಿವರಿಸಿದ್ದಾರೆ. ನಾನು ಈ ಆತ್ಮ ಕಥೆಯಲ್ಲಿ ಹೈಸ್ಕೂಲ್‌ನವರೆಗಿನ ಜೀವನ ಅನುಭವಗಳನ್ನು ಅಧ್ಯಯನಕ್ಕೆ ಒಳಪಡಿಸಿದ್ದೇನೆ. ಬಾಲ್ಯದಲ್ಲಿ ಲೇಖಕರು ಸಮಾಜದಲ್ಲಿ ಅನುಭವಿಸಿದ ಕೌಟುಂಬಿಕ, ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ಆಯಾಮಗಳನ್ನು ಗುರುತಿಸಿದ್ದೇನೆ.

ಯಲ್ಲಪ್ಪ ಕೆಕೆಪುರವರು ಆತ್ಮಕಥೆಯಲ್ಲಿ ತನ್ನ ಕುಟುಂಬವು ಬದುಕಿ ಬಾಳಿ ಕಷ್ಟಪಟ್ಟು ದುಡಿದು ಸಮಾಜದಲ್ಲಿ ಉನ್ನತ ಸ್ಥಿತಿಯಲ್ಲಿ ಬದುಕಿದ್ದನ್ನು, ತಂದೆಯ ಸಾವಿನ ನಂತರ ತಾಯಿಯು ಸಂಬಂಧಿಕರ ನೆರವು ಪಡೆಯದೆ ಕಷ್ಟದಿಂದ ಕೂಲಿ ನಾಲಿ ಮಾಡಿ ಮಗನನ್ನು ವಿದ್ಯಾವಂತನನ್ನಾಗಿ ಮಾಡುವಂತಹ ಹಾಗೂ ತಾನು ಶಾಲೆಯಲ್ಲಿ ಎಲ್ಲ ವಿದ್ಯಾರ್ಥಿಗಳಿಂದ ಉತ್ತಮವಾಗಿ ಓದಿದನ್ನು ಮತ್ತು ಕುಟುಂಬ ಪರಿಸ್ಥಿತಿಯನ್ನು ವಿವರಿಸಿದ್ದಾರೆ.

"ನಿನ್ನಪ್ಪನ ಮೊದಲ ಊರು– ದೇವಸಮುದ್ರ, ತಾತ ಒಬ್ಬಲೆಪ್ಪ ತಾಯಿ ಎಲ್ಲವ್ವ. ಎರಡು ಹೆಣ್ಣು, ಎರಡು ಗಂಡು ಮಕ್ಕಳಾದರು ಎಲ್ಲಮ್ಮನಿಗೆ! ಅವರಲ್ಲಿ ನಿಮ್ಮಪ್ಪ, ನಿಮ್ಮ ದೊಡ್ಡಪ್ಪ, ಇವರಿಬ್ಬರೂ ರಾಮ ಲಕ್ಷ್ಮಣರಂತೆ ಜೀವನದಲ್ಲಿ ಜೀವ (ಇವರಿಬ್ಬರೂ ಜಗಳವಾಡಿದ್ದೇ ನಾ ಕಾಣಲಿಲ್ಲ) ತುಂಬಾ ಬಡತನ ಅಡವಿಗೆ ಹೋಗಿ ಕಟ್ಟಿಗೆ ಕಡಿದು ಹೊತ್ತು ತಂದು ಅವರಿವರಿಗೆ ಮಾರಿ ಜೀವನ ಸಾಗಿಸುತ್ತಿದ್ದರು. ರಾಂಪುರ, ತಿಮ್ಮಾಲಪುರ, ಸಿದ್ದಾಪುರ, ಜೀರಳ್ಳಿ, ಕೆಕೆಪುರದಲ್ಲಿ ಮಾರಿ ಜೋಳ ತಂದು ಎರಡೇ ತುಂಡಿಗೆ ಬಿಸಿ ಜೋಳವನ್ನು ರೊಟ್ಟಿ ಮಾಡಿ ತಿನ್ನುತ್ತಿದ್ದರು. ಹೊಟ್ಟೆಗೆ ಸಾಲದೆ ಅಪ್ಪ ಕಟ್ಟಿಗೆ ಹೊರೆ ಮಾರಿದ ಹಣದಲ್ಲಿ ಹೋಟೇಲ್ ತಿಂಡಿ, ಟೀ... ಕುಡಿದು "ಕಟ್ಟಿಗೆ ದುಡ್ಡ ನಾಳೆ ಕೊಡ್ತಾರಂತೆ, ನಾಡಿದ್ದು ಕೊಡ್ತಾರಂತೆ!"[೮]

ತನ್ನ ತಾಯಿಯು ತಂದೆಯ ಕುಟುಂಬ ಇತಿಹಾಸವನ್ನು ಹೇಳಿದ್ದನ್ನು ಹಾಗೂ ತಂದೆಯು ಬಡತನದಿಂದ ಕಟ್ಟಿಗೆ ಹೊಡೆದು ಮಾರಿ ಹಸಿವಿಗೆ ಹೋಟೇಲ್‌ನಲ್ಲಿ ತಿಂದು ಮನೆಯಲ್ಲಿ ಸುಳ್ಳು ಹೇಳಿದ್ದನ್ನು ಹಸಿವು ಮನುಷ್ಯನನ್ನು ಏನು ಬೇಕಾದರು ಮಾಡಿಸುತ್ತದೆ ಎಂಬುದನ್ನು ಆತ್ಮ ಕಥೆಯಲ್ಲಿ ಹೇಳಿದ್ದಾರೆ. ಲೇಖಕರ ತಂದೆಯು ದೇವಸಮುದ್ರದಿಂದ ಕೆಕೆಪುರಕ್ಕೆ ಬಂದು ಜೀವನ ನಡೆಸಲು ಕೂಲಿ ಮಾಡುತ್ತಿರುವಾಗ "ಸರ್ಕಾರದಿಂದ ಜಾಗ ಸಿಕ್ಕ ತಲ್ಲದೆ ತಲಾ ಐದು ನೂರು ಕೊಟ್ಟರು. ಆಗ ನಿಮ್ಮಪ್ಪ ವಡ್ಡರಳ್ಳಿ ಕಾಡಿಗೆ ಹೋಗಿ ಮೂರು ಬೊಂಬು ಇರಿಸು ದಿಮ್ಮಿ ಇತ್ಯಾದಿಗಳನ್ನು ಹಗಳಿರಳು ಕಡಿದು ಉರಿಳಿಸಿ ಬಂಡಿ ಎತ್ತುಗಳ ಬಾಡಿಗೆ ಪಡೆದು ತಂದು ಒಟ್ಟಿದ. ಊರು ಕೇರಿಯವರು ಬೆಳ್ಳುಳ್ಳಿ ಸಾಮಾನುಗಳನ್ನು ಕೊಂಡುಕೊಂಡರು. ಅರಿಸಿ ಬಿಟ್ಟಿದರಲ್ಲಿ ಗಂಡ ಹೆಂಡ್ತಿ ಮಳೆ, ಗಾಳಿ, ಬಿಸಿಲು ಎನ್ನದೆ ಪುಟ್ಟ ಮಕ್ಕಳನ್ನು ಜೋಪಾನ ಮಾಡುತ್ತಾ ಈಗಿರುವ ಮನೆಯನ್ನು ಕಟ್ಟಿಕೊಟ್ಟಿದನ್ನು ಸ್ಮರಿಸಿಕೊಂಡಳಲ್ಲದೆ ನಿಮ್ಮಪ್ಪ ಹಗಲು ರಾತ್ರಿ ಜೀತ ದುಡಿದು ಊರು ಬಿಟ್ಟು ಊರಿಗೆ ಅಲೆದ, ಮಾದಿತಕೊಂಡ, ಉಳ್ಳಗಡ್ಡೆ 'ತೊಗಲು', ಬೇವಿನ ಬೀಜ ವ್ಯಾಪಾರ ಮಾಡಿ ಏಳು ಹಳ್ಳಿಗೆ ಸಾಹುಕಾರ ಎಲ್ಲಪ್ಪನೆಂಬ ಹೆಸರು ಪಡೆದ'[೯] ಹೀಗೆ ಯಲ್ಲಪ್ಪ ಕೆಕೆಪುರವರ ಕುಟುಂಬವು ತನ್ನ ಸ್ವಂತ ಊರಾದ ಗೌರಸಮುದ್ರದಲ್ಲ ಬಡತನದಿಂದ ಕಟ್ಟಿಗೆ ಕಡಿದು ಮಾರುತ್ತಾ ಜೀವನ ನಡೆಸಿ ಕೆಕೆಪುರಕ್ಕೆ ಬಂದು ತಂದೆಯ ಬುದ್ಧಿವಂತಿಕೆಯಿಂದ ವ್ಯಾಪಾರಸ್ಥನಾಗಿ ಆರ್ಥಿಕವಾಗಿ ಅಭಿವೃದ್ಧಿ ಹೊಂದಿ ಕುಟುಂಬವನ್ನು ಬಡತನದಿಂದ ಮುಕ್ತಿಗೊಳಿಸಿದ ಸ್ಥಿತಿಯನ್ನು ವಿವರಿಸಿದ್ದಾರೆ.

ವ್ಯಾಪಾರವನ್ನು ಮಾಡಲು ಯಲ್ಲಪ್ಪನ ತಂದೆಯು ರಾಂಪುರ, ಬಳ್ಳಾರಿ, ಮೊಳಕಲ್ಮೂರು, ಚಳ್ಳಕೆರೆ ಸುತ್ತಮುತ್ತಲಿನ ಹಳ್ಳಿಗಳಿಗೆ ಹೋಗುತ್ತಿದ್ದ ಜೀವನ ನಡೆಸುತ್ತಿದ್ದರು. ತಂದೆಯು ತನ್ನ ವ್ಯಾಪಾರ, ಮಾದಿಗತನದಿಂದ ಬರುತ್ತಿದ್ದ ಸಂಪಾದನೆಯಿಂದ ಕುಟುಂಬವು ಬಡತನವೆಂಬ ಪದವನ್ನು ಕಾಣದೆ ಹೆಂಡತಿ–ಮಕ್ಕಳನ್ನು ಸಾಕುತ್ತಿದ್ದರು. ಕಾಯಿಲೆಗೆ ತುತ್ತಾಗಿ ಕೆಕೆಪುರದಲ್ಲಿ ತಂದೆಯು ನಿಧನರಾದಾಗ ಒಂದೆರಡು ವರ್ಷದವರೆಗೆ ಬಡತನವಿಲ್ಲದೆ ಜೀವಿಸುತ್ತಿದ್ದರು. ತಂದೆಯು

ಮಾಡಿದ ಹಣ, ಮೇಕೆ, ಕುರಿ ಪ್ರತಿಯೊಂದನ್ನು ತನ್ನ ಮಾವ ಬಂಜೆಪ್ಪ ಮಾರಿಕೊಂಡು ತಿನ್ನುವ ಮೂಲಕ ಕುಟುಂಬವನ್ನು ಬಡತನದ ಸ್ಥಿತಿಗೆ ತಂದದ್ದು. ಈ ರೀತಿ ಮಾಡಿದ್ದರಿಂದ ಯಲ್ಲಪ್ಪನವರ ಜೀವನವು ಕಷ್ಟಕ್ಕೆ ಬಂದಿತು. ಈ ಸಂದರ್ಭದಲ್ಲಿ ತಾಯಿಯು ಕುಟುಂಬವನ್ನು ಸಾಕಲು ಊರಿನ ಸಾಹುಕಾರರ ಹೊಲಗಳಲ್ಲಿ ಕೂಲಿ ಮಾಡಲು ನಿರ್ಧರಿಸಿದರು ಕೂಲಿ ಮಾಡಲು ಸಾಹುಕಾರರ ಹತ್ತಿರ ಹೋದಾಗ ಸಾಹುಕಾರ ಎಲ್ಲಪ್ಪ ನಿನೆಂದು ಕೂಲಿ ಮಾಡಿದ್ದು ಬೇಡವಿರಿದಾಗ ಊರಿನ ಕಾಮರೆಡ್ಡಿಯರ ಹೊಲದಲ್ಲಿ ಕೆಲಸ ಮಾಡಲು ಹೋಗುತ್ತಾರೆ. 'ಒಂದು ದಿನ ಕಾಮರೆಡ್ಡಿ ಗಂಚಿಗಾರ ಹೊಲದಲ್ಲಿ ಉಳ್ಳಗಡ್ಡೆ ಕಿತ್ತುವುದು, ಸೊಸುವುದು, ಗರ್ಸಿಗೆ ಹೊರುವುದಕ್ಕಾಗಿ ಕೂಲಿಯಾಳು ಬೇಕೆಂದರು. ಅಮ್ಮ ರೊಟ್ಟಿಸುಡುವಳು, ಅಕ್ಕ ಶಾಂತಕ್ಕ ಚಟ್ನಿ ಮಾಡಿದಳು, ಗಬಗಬ ತಿಂದು ಬುತ್ತಿಕಟ್ಟಿಕೊಂಡು ಕುಡುಗೊಲು, ಪುಟ್ಟಿ, ತಟ್ಟೆ, ಸಿಂಬೆ... ತಲೆ ಮೇಲೆ ಇಟ್ಟುಕೊಂಡು ಅಮ್ಮ ಅಕ್ಕ ಶಾಂತಕ್ಕ ನಾನು ತಮ್ಮ ಕೃಷ್ಣನು... ಹೊರಟೆ. ಹೊಲ ತಲುಪುದೆವು ಉಳ್ಳಗಡ್ಡೆ ಕಿತ್ತಲು ಎಲ್ಲರಂತೆ ಸಾಲು ಹಿಡಿದೆ, ಬೇಗ ಬೇಗ ಕಿತ್ತಿಬೇಕು, ಕೆಲಸ ಮಾಡಿ ಅಭ್ಯಾಸವಿಲ್ಲ ಹತ್ತು ಗಂಟೆ ಬಳ್ಳಾರಿ ಕಾಡು ಬಿಸಿಲು, ಚುರುಕು ಮುಟ್ಟುವಂತೆ ಬಡಿಯುತ್ತಿತ್ತು. ತಲೆ ಸಿಡಿದು ಕಣ್ಣು, ಕಾಲು ತಿರುಗ ತೊಡಗಿದವು. ಜಲ ಜಲ ಬೆವತು ಹೊದೆ ಅಮ್ಮ ಇತರೆ ಕೂಲಿಯಾಳುಗಳಿಗಿಂತ ಹಿಂದೆ. ಅಕ್ಕ ಶಾಂತಕ್ಕ ಇನ್ನು ಹಿಂದೆ. ತಮ್ಮ ಕೃಷ್ಣನಿಗಿಂತ ನಾವಳು ಹಿಂದೆ ಬಿದ್ದೆ. ಕೆಲಸ ಮಾಡಿ ಯಾರಿಗೂ ಅಭ್ಯಾಸವಿಲ್ಲ. ನಾಚಿ ನಿರಾದೆವು... ನಿಜವಾದ ಹೋರಾಟವೆಂದರೆ... ಇದು.'[೧೦]

ತಂದೆಯು ಜೀವಂತವಾಗಿದ್ದಾಗ ದುಡಿದು ತನ್ನ ಹೆಂಡತಿ, ಮಕ್ಕಳಿಗೆ ಕಷ್ಟವೆಂಬುದನ್ನು ಗೊತ್ತಿಲ್ಲದಂತೆ ಸಾಕಿದ್ದು, ಸಾವಿನ ನಂತರ ಮಾವ ಬಂಜೆಪ್ಪನು ತನ್ನ ತಂದೆ ಮಾಡಿದ ಆಸ್ತಿಯನ್ನು ಮಾರಿ ಕುಡಿದು ಬಡತನಕ್ಕೆ ನೂಗಿದ್ದನ್ನ ಮತ್ತು ತಾಯಿಯು, ಕೂಲಿ ಮಾಡುವ ಮೂಲಕ ಕಡು-ಬಡತನದಿಂದ ಸಂಬಂಧಿಕರ ಆಸರೆ ಇಲ್ಲದೆ ಮಗನನ್ನು ವಿದ್ಯಾವಂತನನ್ನಾಗಿ ಮಾಡಿದ್ದನು ಮತ್ತು ಕುಟುಂಬದ ಸ್ಥಿತಿಯ ಬಗ್ಗೆ ನೋಡಬಹುದು.

ಟಿಪ್ಪಣಿಗಳು:

೧. ಅರವಿಂದ ಮಾಲಗತ್ತಿ, ಗೌರ್ಮೆಂಟ್ ಬ್ರಾಹ್ಮಣ, ಪುಟ ಸಂ: ೩೯

೨. ಸಿದ್ದಲಿಂಗಯ್ಯ, ಊರು-ಕೇರಿ, ಪುಟ ಸಂ: ೦೧

೩. ಅದೇ ಪುಸ್ತಕ, ಪುಟ ಸಂ: ೦೯

೪. ಅದೇ ಪುಸ್ತಕ, ಪುಟ ಸಂ: ೨೧

೫. ತುಂಬಾಡಿ ರಾಮಯ್ಯ, ಮಣೆಗಾರ, ಪುಟ ಸಂ: ೧೨

೬. ಅದೇ ಪುಸ್ತಕ, ಪುಟ ಸಂ: ೧೨, ೧೩

೭. ಅದೇ ಪುಸ್ತಕ, ಪುಟ ಸಂ: ೨೦

೮. ಯಲ್ಲಪ್ಪ ಕೆಕೆಪುರ, ಕೇರಿಯಿಂದ ತೇರಿಗೆ, ಪುಟ ಸಂ: ೬೯

೯. ಅದೇ ಪುಸ್ತಕ, ಪುಟ ಸಂ: ೭೦

೧೦. ಅದೇ ಪುಸ್ತಕ, ಪುಟ ಸಂ: ೮೯, ೯೦

ಅಧ್ಯಾಯ ಮೂರು

ಸಾಮಾಜಿಕ ಆಯಾಮ

ಅಧ್ಯಾಯ ಮೂರು

ಸಾಮಾಜಿಕ ಆಯಾಮ

ಸಾಮಾಜಿಕ ಆಯಾಮ

ಅರವಿಂದ ಮಾಲಗತ್ತಿಯವರು ತಾನೊಬ್ಬ ದಲಿತನಾಗಿ ಅನುಭವಿಸಿದ ಜಾತಿಯ ಅವಮಾನ, ಶೋಷಣೆ, ದಬ್ಬಾಳಿಕೆಗಳಿಂದ ದಲಿತರನ್ನು ಹೇಗೆ ಸಮಾಜದಲ್ಲಿ ಅಪಮಾನ, ಅಸಮಾನತೆಯಿಂದ ಅಮಾನುಷವಾಗಿ ಕೀಳಾಗಿ ಕಾಣುತ್ತಾರೆಂಬುದನ್ನು ತಮ್ಮ ಆತ್ಮಕಥೆಯಲ್ಲಿ ಚಿತ್ರಿಸಿದ್ದಾರೆ. ಆತ್ಮ ಕಥನದಲ್ಲಿ ಊರಿನ ಪರಿಸರದ ಚಿತ್ರಣವನ್ನು ಕೊಡುತ್ತಾ ತಮ್ಮ ಜಾತಿಯವರು ಮೇಲ್ಜಾತಿಯವರಿದ ದಬ್ಬಾಳಿಕೆಗೆ ಒಳಪಟ್ಟು ಅಸಮಾನತೆಯಿಂದ ಬದುಕುವುದನ್ನು ಬಿಚ್ಚಿಟ್ಟಿದ್ದಾರೆ.

"ನನ್ನಟ್ಟಿಯವರು ಕೆರೆಗೆ ಬಟ್ಟೆ ತೊಳೆಯಲು ಒಟ್ಟಾಗಿ ಹೋಗುತ್ತಿದ್ದರು. ಜೊತೆಗೆ ಪಕ್ಕದ ಎರಡು ಮೂರು ಮನೆಯ ಹೆಂಗಸರನ್ನೂ ಕರೆದುಕೊಂಡು ಹೋಗುತ್ತಿದ್ದರು. ಒಂದು ರೀತಿಯಲ್ಲಿ ಇದು ಸೈನ್ಯಕಟ್ಟುವ ಪದ್ಧತಿ, ಯಾರಾದರು ಮೇಲು ಜಾತಿಯ ಹೆಂಗಸರು ಒಬ್ಬರು ಕದನಕ್ಕೆ ಬಂದರೆ ಸಾಕು ಕೇರಿಯ ಎಲ್ಲಾ ಬಾಯಿಗಳು ಒಂದುಗೂಡಿ ಬಿಡುತ್ತಿದ್ದವು. ಮೇಲು ಜಾತಿಯವರೋ ಜಾತಿಯ ಹೆಸರು ಹೇಳಿ ಗುರುತಿಸದ ಹಾವು ಕಂಡಂತೆ ಹೆದರಿ ಕವುಚಿ ತಾತ್ಸರ ಭಾವನೆಯಿಂದ ನೋಡುತ್ತಿದ್ದರು.

"ಊರ ಹೊರಾಗ ಕೊಳ್ಳದ, ಗರಸಿನ ತಗ್ಗದ
ಅಲ್ಲಗಿ ಹೋಗಬಾರ್ದ? ಇಲ್ಲ್ಯಾಕ ಬರಬೇಕು
ಏನು ದೊಡ್ಡ ಜಾತಿಯವರಂಗ ಬರ್ತಾವು?

ಹೀಗೆ ಮಾತಾನಾಡಿಕೊಳ್ಳುವವರೇನು ಮೇಲು ಜಾತಿಯವರೇನಲ್ಲಾ ಇವರು ಮಾಂಸ ಹಾರಿಗಳೆ.

ಮೇ.ಜಾ: ನಿಮ್ಮದರ ಏನು ದೊಡ್ಡ ಜಾತಿ
ದನ ತಿನ್ನೋ ಜಾತಿ
ಕೆ.ಜಾ. ನಿಮ್ಮದರ ಏನು? ದೊಡ್ಡ ಜಾತಿ
ಸತ್ತಿದ್ದ ದನ ತಿನ್ನೋ ಜಾತಿ'[೧]

ದಲಿತ ಹೆಂಗಸರು ಬಟ್ಟೆ ತೊಳೆಯಲು ಕೆರೆಗೆ ಹೊದಾಗ ಕೆರೆಯಲ್ಲಿ ದಲಿತರಿಗೆ ಪ್ರತ್ಯೇಕವಾದ ಬಟ್ಟೆ ಹೊಗೆಯುವ (ಕಲ್ಲು) ಬಂಡೆಗಳು ಇರುತ್ತಿದ್ದವು. ಅಲ್ಲಿ ಮೇಲು ಜಾತಿಯ ಹೆಂಗಸರು ಹೊಗುತ್ತಿದ್ದರು. ಆ ಸಂದರ್ಭದಲ್ಲಿ ಬಟ್ಟೆ ಸೆಳೆಯುವಾಗ ದಲಿತರು ಬಟ್ಟೆಯಲ್ಲಿನ ನೀರು ಮೇಲ್ವರ್ಗದ ಹೆಂಗಸರಿಗೆ ಸಿಡಿದಾಗ ದಲಿತರನ್ನು ದನ ಮಾಂಸ ತಿನ್ನುವ ಜಾತಿಯವರು ಇಲ್ಲಿಗೆ ಯಾಕೆ ಬಂದಿದ್ದಿರಿ ಊರ ಪಕ್ಕದ ಕೊಳದಲ್ಲಿ ಹೋಗಿ ಬಟ್ಟೆ ತೊಳೆದರೆ ಆಯಿತು. ಮನಸ್ಸಿಗೆ ನೋವುಂಟು ಮಾಡುತ್ತಿದ್ದರು ಎನ್ನುವ ಮಾತಿನಲ್ಲಿ ಸಮಾಜ ದಲಿತರಿಗೆ ಯಾವ ರೀತಿಯಾಗಿ ಮೇಲ್ವರ್ಗದವರು ಅಸಮಾನತೆಯಿಂದ ನೋಡುತ್ತಾರೆ ಎಂದು ಹೇಳಿದ್ದಾರೆ.

ಅರವಿಂದ ಮಾಲಗಿತ್ತಿಯವರು ಸತ್ತ ಕುರಿಗಳು ಮಾಂಸದ ಮಾರಾಟ ಮಾಡುವುದನ್ನು ಕುರಿತಂತೆ "ಹತ್ತಾರು ಮಾಂಸದ ಗುಪ್ಪೆಗಳು, ಈ ಗುಪ್ಪೆಗಳನ್ನು ಈಚಲು ಎಲೆಯಿಂದ ಹೆಣೆದು ಚಾಪೆಯ ಮೇಲೆ ಹಾಕಲಾಗುತ್ತಿದ್ದು. ನನ್ನ ಮಾವ ಈ ಕೆಲಸದಿಂದ ಸ್ವಲ್ಪ ಬಿಡುವಿಗಾಗಿ ಹೊರಗೆ ಹೋದಾಗ ಅಲ್ಲಿ ನನ್ನದೆ ದರ್ಬಾರು, ಹೊರಗೆಂದರೆಲ್ಲಿ ಗೊತ್ತೆ? ಪೂರ್ತಿಯಾ ಊರ ಹೊರಗೆ ಕಂಟ್ಟಿ ದಾರು ತಯಾರು ಮಾರು ಸಾಕು."[೨]

ಕುರಿ ಕಾಯುವ ಕುರುಬರು, ಸತ್ತ ಕುರಿಗಳನ್ನು ಎಸೆಯದೆ ಛಿದ್ರವಾಗಿ ಮಾವನಿಗೆ ತಂದೋಪ್ಪಿಸಿ ಎಷ್ಟು ಸಾಧ್ಯವೊ ಅಷ್ಟು ಹಣ ವಸೂಲು ಮಾಡಿಕೊಂಡು ಹೋಗುತ್ತಿದ್ದರು. ಮೊದ ಮೊದಲು ಸತ್ತ ಕುರಿಯನ್ನು ಬಿಟ್ಟಿಯಾಗಿಯೂ ಕೊಟ್ಟು, ಅದರ ಚರ್ಮದ ಹಣವಷ್ಟೇ ತೆಗೆದುಕೊಂಡು ಹೋಗುತ್ತಿದ್ದರು, ಸತ್ತ ಕುರಿಯ ಮಾಂಸ ಮಾರಿ ಹಣ ಸಂಪಾದನೆ ಮಾಡುತ್ತಿದ್ದಾನೆ ಎಂಬುದನ್ನು ಅರಿತು ಅವರು ಸತ್ತ ಕುರಿಯನ್ನು ಹಣಕ್ಕೆ ಮಾರಲು ಪ್ರಾರಂಭಿಸಿದರು. ಮಾವ ಹಣಕೊಡುವುದಿಲ್ಲ ಎಂದರೆ ಮಾವನಿಗೆ ಪ್ರತಿಸ್ಪರ್ಧಿಯಾಗಿ ವೆಂಕಪ್ಪನು ಇದೇ ಕೆಲಸ ಮಾಡುತ್ತಿದ್ದ.'[೨] ದಲಿತರು ಸಮಾಜದಲ್ಲಿ ತಾವು ಜೀವನ ನಡೆಸುವುದಕ್ಕೆ ಯಾವುದಾದರೂ ಒಂದು ಕೆಲಸ ಮಾಡುತ್ತಿದ್ದರು. ಮಾಲಗಿತ್ತಿಯವರು ತಮ್ಮ ಮಾವನು ಸತ್ತ ಕುರಿಗಳನ್ನು ಕೊಂಡು ಅವುಗಳ ಮಾಂಸವನ್ನು ಮಾರುವುದರ ಮೂಲಕ ಜೀವನ ನಡೆಸುತ್ತಿದ್ದರು. ಮಾವನು ಸತ್ತ ಕುರಿ ಚರ್ಮಕ್ಕೆ ಮಾತ್ರ ಹಣ ಕೊಡುತ್ತಿರುವುದು ಜನ ತಿಳಿದಾಗ ಕುರಿಯ ಮಾಂಸಕ್ಕೆ ಹಣಕೊಡದಾದ್ದಾರೆ ಪ್ರತಿಸ್ಪರ್ಧಿಯಾಗಿ ಊರಲ್ಲಿ ವೆಂಕಟಪ್ಪ ಎಂಬುವರು ಇದೇ ಕೆಲಸವನ್ನು ಮಾಡುತ್ತಿದ್ದರು. ತನ್ನ ಮಾವನ ಜೊತೆಗೆ ಮಾಲಗಿತ್ತಿಯವರು ಕೆಲಸಕ್ಕೆ ಸಹಾಯನಾಗಿ ಮಾಂಸದ ಗುಪ್ಪೆಗಳನ್ನು ಮಾರುತ್ತಿದ್ದನು.

ಈ ರೀತಿಯಾಗಿ ಸಮಾಜದಲ್ಲಿ ಬದುಕುವುದನ್ನು ಆತ್ಮಕಥನದಲ್ಲಿ ಬಿಂಬಿಸಿದ್ದಾರೆ. ಹಾಗೆಯೆ ಸಮಾಜದಲ್ಲಿ ದಲಿತರನ್ನು ಹಾಗೂ ತಾವು ಸಾಕಿದ ನಾಯಿಗಳನ್ನು ಶೋಷಣೆ ಮಾಡುವ ಸ್ಥಿತಿಯು ಹಂಡ್ಯಾನ ಲಾಳಿ ಕತ್ತರಿಸಿದ ಪ್ರಸಂಗದಲ್ಲಿ ವಿಶ್ಲೇಷಿಸಿದ್ದಾರೆ.

"ಮರಳಿ ಹೋಗುವಾಗ ದಾರಿಯಲ್ಲಿ ಹಂಡ್ಯ ಕಾಣಲಿಲ್ಲ, ಇನ್ನೊಮ್ಮೆ ನೀರು ತುಂಬಿಕೊಂಡು ಹೋಗುವಾಗ, ಊರ ಕಸಗುಡಿಸಲು ಹೋದ ಹೆಂಗಸರಲ್ಲಿ ಅಕ್ಕ ದ್ಯಾಮವ್ವ ನಾಯಿಯ ಹಗ್ಗ ಕಟ್ಟಿಕೊಂಡು ಎಳೆದೊಯ್ಯುತ್ತಿದ್ದಳು. ಆ ನಾಯಿ ಬೇರೆ ಯಾವುದೂ ಆಗಿರಲಿಲ್ಲ ಹಾಂಡ್ಯಾನೇ ಆಗಿತ್ತು! ಕೇರಿಯಲ್ಲಿ ಅಕ್ಕ ದ್ಯಾಮವ್ವ ಹೇಳತೊಡಗಿದ್ದಳು;

'ಆ..... ವಾರ ಸಾಹುಕಾರ ಮಗ ಇದ್ದನಲ್ಲಾ ಗ್ಯಾ ಅವನ ಗೆಜ್ಜಾಗ ಹುಳಾ ಬೀಳಾ, ಹೀಗಾಗೆ ಓಸಿಗೆ ಗಂಡನೊಳ್ಳಿದಿಲ್ಲ ಏನು ತಾನು ಎಲ್ಲೆಂದರಲ್ಲೆ ತಗ್ಗನ್ಯಾಗ ಬೀಳಂಗಿಲ್ಲಾ? ಹೇಳಿ ಕೇಳಿ ನಾಯಿ, ತಮ್ಮ ನಾಯಿ ಮ್ಯಾಲೆ ಹತ್ತಸದ ಇದ್ರ, ನಾಯಿಗಿ ಮನ್ಯಾಗ ಕಟ್ಟಿಹಾಕಬೇಕು. ಹಂತವ್ರು ಹೊರಾಗ ಯಾಕ ಬಿಡಬೇಕು?... ಹೌದು, ನಾಯಿ ಅಂದ್ರ ನಾಯಿ ಐತಿ, ನಾನು ಇಂಥಾ ಕೆಳಜಾತಿಯವರಿಗೆ ಸೇರಿದವನು, ಅದರ ಮ್ಯಾಲೆ ಹತ್ತಬಾರದು ಅದು ಮ್ಯಾಲಿನ ಜಾತಿಯವರು ಸಾಕಿದ್ದು ಅಂತ ಅಂದಕ್ಕೇನ ತಿಳಿತದಾ? ಮಾತ ತಿಳೆಂಗಿದ್ರ ನಾವರ ಹೇಳೇವು. ಹೋಗಿ ಹೋಗಿ ಮೂಕ ಪ್ರಾಣಿ"[೩] ಮಾಲಗತ್ತಿಯವರು ತಮ್ಮ ಊರಲ್ಲಿ ಮೂಕ ಪ್ರಾಣಿಗಳಾದ ನಾಯಿಗಳು ತಮ್ಮ ದೈಹಿಕ ಸಂಪರ್ಕ ಬೆಳೆಸಿದಕ್ಕೆ ದಲಿತರು ಸಾಕಿದ ನಾಯಿಯಾಗಿದಕ್ಕೆ ಹಂಡ್ಯಾ ಎಂಬ ನಾಯಿಯನ್ನು ಸಾಹುಕಾರರು ಕೊಲ್ಲುವುದು ನಿಕೃಷ್ಟಕರವಾದ ಸ್ಥಿತಿಯಾಗಿದೆ. ಇಲ್ಲಿ ಸಮಾಜದಲ್ಲಿ ದಲಿತರು ಕೆಳಸ್ತರದಲ್ಲಿ ಜೀವನ ಮಾಡುವ ಪರಿಸ್ಥಿತಿಯನ್ನು ಪ್ರಾಣಿಗಳಿಗೂ ಸಹ ದಲಿತರು ಸಾಕಿದಕ್ಕೆ ಅಸಮಾನತೆ ಕಾಣುವ ಸಮಾಜದ ಅನಿಷ್ಟ ಪದ್ಧತಿಯನ್ನು ಲೇಖಕರು ಚಿತ್ರಿಸಿದ್ದಾರೆ.

"ನನ್ನ ಕೇರಿ ನನ್ನ ಓದು" ಪ್ರಸಂಗದಲ್ಲಿ ತನ್ನ ಕೇರಿಯಲ್ಲಿ ಹಗಲು ಹೊತ್ತಿನಲ್ಲಿ ಒಂದು ರೀತಿಯ ವಾತವರಣ, ರಾತ್ರಿಯಾದರೆ ಹಬ್ಬವೆಂಬಂತೆ ಜನರು ಕತ್ತಲಲ್ಲಿ ಓಡಾಡುತ್ತಿದ್ದನ್ನು ಹಾಗೂ ಅನೈತಿಕ ಚಟುವಟಿಕೆಗಳನ್ನು ಕುರಿತು, ಮತ್ತು ಮೇಲ್ವರ್ಗದ ಗಂಡಸರು ದಲಿತರ ಹೆಣ್ಣು ಮಕ್ಕಳನ್ನು ಬಂದು ಸೇರುವ ದಲಿತ ಹೆಂಗಸರು ಬೀಡಿ ಸೇದುವ ಇಂತಹ ಅಸಹ್ಯಕರವಾದ ಚಟುವಟಿಕೆಗಳನ್ನು ಕುರಿತಂತೆ ಆತ್ಮಕಥನದಲ್ಲಿ ವಿಶ್ಲೇಷಿಸಿದ್ದಾರೆ.

"ಹಳ್ಳಿಯ ಹೆಂಗಸರು ಸೇದುತ್ತಾರೆಂದರೆ ನನಗೇನೂ ಆಶ್ಚರ್ಯವಿಲ್ಲ. ಆದರೆ ಬಾಲ್ಯದ ದಿನಗಳಲ್ಲಿ ಇಂತಹ ಹೆಂಗಸರನ್ನು ಕಂಡರೆ ತದೇಕಚಿತ್ತದಿಂದ ಕಣ್ಣರಳಿಸಿ ಬಾಯಿತೆರೆದು ಅವರನ್ನೆ ನೋಡುತ್ತಿದ್ದೆ"[೪] ಅಂದರೆ ಸಮಾಜದಲ್ಲಿ ಗಂಡಸರ ರೀತಿಯಲ್ಲಿ ಹೆಂಗಸರು ದುಶ್ಚಟಗಳಿಗೆ ಬಲಿಯಾಗಿರುವುದನ್ನು ಬರೀ ಹಳ್ಳಿಯಲ್ಲಿ ಮಾತ್ರ ನೋಡಿದ್ದೆ ಎಂದು ವಿವರಿಸಿದ್ದಾರೆ. ಇದನ್ನು

ಹೇಳುವಾಗ ನಗರದ ಹೆಂಗಸರಲ್ಲಿ ಇಂತಹ ಕೆಟ್ಟ ದುಷ್ಟಟಗಳನ್ನು ಪ್ರತಿಷ್ಠಿತ ಮನೆತನದಲ್ಲಿ ಕಂಡಾಗ ತನ್ನ ಬಾಲ್ಯದಲ್ಲಿ ಹಳ್ಳಿಯಲ್ಲಿ ತಮ್ಮ ಕೇರಿಯ ಒಬ್ಬ ಹೆಂಗಸು ಬೀಡಿ, ಸೇದುವ ಪ್ರವೃತ್ತಿಯನ್ನು ಹೊಂದಿದ್ದಳು ಎಂಬುದಾಗಿ ಸಮಾಜದ ಜೀವನವನ್ನು ತಿಳಿದಿದ್ದಾರೆ. "ನನ್ನ ಕೇರಿಯ ಒಬ್ಬೊಬ್ಬರದು ಒಂದೊಂದು ಕತೆ ಎಲ್ಲಮ್ಮದೇವಿಯ ಪಾದಗಳನ್ನು ಕೊರಳಲ್ಲಿ ಕಟ್ಟಿಕೊಂಡು ಬದುಕುವವರು ಕೆಲವರು, ಗಡ್ಡಬಿಟ್ಟಿದಕ್ಕೆ ಬಂದು ನೆಲೆಯೂರಿದವರು ಇನ್ನೂ ಕೆಲವರು"[೫] ಹೇಗೆ ಸಮಾಜದಲ್ಲಿ ದಲಿತರು ತಮ್ಮ ಧಾರ್ಮಿಕ ನಂಬಿಕೆಗಳಲ್ಲಿ ನಂಬಿಕೆ ಇಟ್ಟು ಮೌಢ್ಯತೆಯಿಂದ ದೇವರಿಗೆ ಗಡ್ಡಬೀಡುವುದು, ಹೆಂಗಸರು ಎಲ್ಲಮ್ಮ ಭಕ್ತಿಯಿಂದ ಕೊರಳಲ್ಲಿ ಮುತ್ತುಗಳನ್ನು ಕಟ್ಟಿಕೊಂಡು, 'ಜೋಗುತಿ, ಜೋಗಪ್ಪಗಳು, ಸೀರೆಯುಟ್ಟು, ಜೋಗಪ್ಪಗಳು ಹೀಗೇ ವೈವಿದ್ಯಮಯ ಕಥಾನಕಗಳನ್ನು ಹೊತ್ತವರ ಬೀಡು' ಕಾವಿಬಟ್ಟೆಗಳನ್ನು ಧರಿಸಿ ಜೋಗುಳ ಹಾಕಿಕೊಂಡು ಜೀವನ ಮಾಡುವುದನ್ನು ಚಿತ್ರಿಸಿದ್ದಾರೆ.

'ರಾತ್ರಿಯಾದರೆ ಸಾಕು ಈ ಕೇರಿಗೆ ಜೀವ ಬರುತ್ತಿತ್ತು. ಹಗಲಾದರೆ ಬಿಕೋ ಎನ್ನುತ್ತಿತ್ತು. ಕುಡಿಯುವ, ತೆಕ್ಕೆಗೆ ಬಿದ್ದು ಅಳುವ, ನೇಲ ಬಡಿದು ಶಾಪ ಕೊಡುವ, ಮಣ್ಣು ತೂರುವ ಕಚ್ಚೆ ಹಾಕಿ ಕದನಕ್ಕೆ ನಿಲ್ಲುವ, ಕಚಾ-ಕಚಿ ಕೇಶಾ ಯುದ್ಧಗಳು ನಡೆಯುತ್ತಿದ್ದು. ಈ ಕೇರಿಯಲ್ಲಿ ಶಾಲೆ ಓದಿದವರು ಎಂದರೆ ಸ್ವಲ್ಪ ನಮ್ಮ ಮನೆಯಲ್ಲಿಯೇ ಹೀಗಾ ಈ ಕೇರಿಯನ್ನು "ಮಾಲಗತ್ತಿಯವರ ಕೇರಿ" ಎಂದು ಗುರುತಿಸುವುದು ಸಹಜ.[೬] ಬಡತನ, ಅನರಕ್ಷತೆಯಿಂದ ಬಳಲುತ್ತಿದ್ದ ದಲಿತರು ತಮ್ಮ ಮೌಢ್ಯತೆಯ ಜೊತೆಗೆ ಅನೈತಿಕ ಚಟುವಟಿಕೆಯಾದ ವೇಶ್ಯಾವಾಟಿಕೆ ನಡೆಸುವ ತಮ್ಮ ಕೇರಿಯ ಹೆಂಗಸಿನ ಹತ್ತಿರ ಮೇಲ್ವರ್ಗದ ಗಂಡು ರಾತ್ರಿ ಹೊತ್ತು ಬಲ್ಬುಗಳನ್ನು ಹಾರಿಸುವುದುಯಂತ ತಮ್ಮ ಕಾಮತೃಷೆಯನ್ನು ತೀರಿಸಿಕೊಟ್ಟಿವೆ.[೬] ಈ ಮೂಲಕ ದಲಿತರನ್ನು ಶೋಷಣೆ ಮಾಡುವ ಮೂಲಕ ಅಸಮಾನತೆಯಿದೆ ಸಮಾಜದಲ್ಲಿ ನೋಡುತ್ತಿರುವ ಚಿತ್ರಿಸಿದ್ದಾರೆ.

"ಒಕಳಿ ಎಂಬ ಕಲಾಚಿತ್ರ" ಪ್ರಸಂಗದಲ್ಲಿ ದಲಿತ ಹೆಂಗಸರನ್ನು ಅಮಾನವಿಯವಾಗಿ ಮೇಲ್ವರ್ಗದವರು ದೇವರು, ಧಾರ್ಮಿಕತೆ ಹಿನ್ನೆಲೆಯಲ್ಲಿ ಶ್ರಾವಣ ಮಾಸದಲ್ಲಿ ಒಕುಳಿ ಆಡುವ ಕ್ರಿಡೆಯಲ್ಲಿ ದಲಿತ ಹೆಂಗಸರು ಭಾಗವಹಿಸುವಂತೆ ಮಾಡಿ ತಮ್ಮ ಮನರಂಜನೆಗೋಸ್ಕರ ಅರೆಬೆತ್ತಲೆಯಾಗಿಸುವ, ತನ್ನ ಕೇರಿಯ ಜನ ಅವಮಾನಿತವಾಗಿ ಬಲಿಯಾಗುತ್ತಿದ್ದ ವಿಚಿತ್ರವಾದ ಘಟನೆಗಳನ್ನು ಆತ್ಮಕಥನದಲ್ಲಿ ಚಿತ್ರಿಸಿದ್ದಾರೆ. ದಲಿತರಾಗಿದ್ದ ಮಾಲಗತ್ತಿಯವರು ತಾವು ವ್ಯಾಸಂಗ ಮಾಡುತ್ತಿದ್ದಾಗ ಬ್ರಾಹ್ಮಣರ ಹುಡುಗಿಯನ್ನು ಪ್ರೀತಿಸುತ್ತಿದ್ದರು. ಇದನ್ನು ದಲಿತ ಜಾತಿಯವನೆಂದು ತಿರಸ್ಕರಿಸುತ್ತಿದ್ದರು. ಪ್ರೇಯಸಿಯ ಸಾಮಾಜಿಕ ಮತ್ತು ಕೌಟುಂಬಿಕ ಘನತೆಗಾಗಿ ಮತ್ತು ಸಮುದಾಯದ ಘನತೆಗೋಸ್ಕರ ತನ್ನ ಪ್ರೀತಿಯನ್ನೇ ತ್ಯಾಗ ಮಾಡುವ ಜಾತಿಯತೆ ಬಗ್ಗೆ ಅಸಮಾದಾನ ವ್ಯಕ್ತ ಪಡಿಸಿರುವುದು ಸಮಾಜದಲ್ಲಿ ದಲಿತರೆಂದರೆ ಮನುಷ್ಯರಲ್ಲವೆ ಎಂಬುದು ಪ್ರಶ್ನೆಯ ಮಾತು ತಮ್ಮ ಆತ್ಮಕಥನದಲ್ಲಿ ತನ್ನ ಪ್ರೀತಿಯ ಅಂತರಂಗಕ್ಕೆ ಜಾತಿಯು ಅಡ್ಡ ಬಂದಿರುವುದನ್ನು

ಅಭಿವ್ಯಕ್ತಿಸಿದ್ದಾರೆ. ಅರವಿಂದ ಮಾಲಗತ್ತಿಯವರು ಸಿನಿಮಾ ನಟ ಡಾ. ರಾಜ್‌ಕುಮಾರನ ಅಭಿಮಾನಿಯಾಗಿದ್ದ. ಅವರು ಹಾಡಿದ ರಾಘವೇಂದ್ರನ ಭಕ್ತಿಗೀತೆಗಳಿಗೆ ಮಾರು ಹೋಗಿ ರಾಘವೇಂದ್ರ ಭಕ್ತನಾಗಿ, ರಾಘವೇಂದ್ರನ ಅನುಯಾಯಿಗಳಾಗಿದ್ದನ್ನು ಹೇಳಿಕೊಂಡಿದ್ದಾರೆ.

ಅಸ್ಪೃಶ್ಯತೆಯಿಂದ ಸಮಾಜದಲ್ಲಿ ಅನುಭವಿಸಿದ ನೋವನ್ನು ಆತ್ಮಕಥೆಯಲ್ಲಿ ದಾಖಲಿಸಿದ್ದಾರೆ. ರಾಘವೇಂದ್ರನ ಭಕ್ತನಾಗಿದ್ದರಿಂದ ಊರಲ್ಲಿನ ಮಠಕ್ಕೆ ರಾಘವೇಂದ್ರನ ಭಾವ ಚಿತ್ರವನ್ನು ಬರೆಸಿ. ಅದರಲ್ಲಿ ಮಾಲಗತ್ತಿ ಎಂದು ಹೆಸರು ಬರೆದು ಕೊಟ್ಟಿದ್ದರು. ಹರಿಜನರಾಗಿದ್ದಕ್ಕಾಗಿ ಮಠದೊಳಗೆ ದಲಿತರ ಹೆಸರಿನೊಂದಿಗೆ ಇದ್ದ ಫೋಟೋವನ್ನು ಮೇಲ್ವರ್ಗದವರು ತೆಗೆದು ಹಾಕುತ್ತಾರೆ. ಹೀಗೆ ಲೇಖಕರು ಸಮಾಜದಲ್ಲಿ ದಲಿತರಾಗಿ ಅನುಭವಿಸಿದ ಅವಮಾನ, ಜಾತಿನಿಂದನೆಯಿಂದ ಸಮಾಜದಲ್ಲಿ ದಲಿತ ಸಮುದಾಯವನ್ನು ಅಸ್ಪೃಶ್ಯತೆಯಿಂದ ನಡೆಸಿಕೊಂಡಂತಹ ಸಾಮಾಜಿಕ ಜೀವನವನ್ನು ಚಿತ್ರಿಸಿದ್ದಾರೆ.

ಊರು-ಕೇರಿ

ಸಿದ್ಧಲಿಂಗಯ್ಯನವರು ತಮ್ಮ ಆತ್ಮ ಕಥನದಲ್ಲಿ ತನ್ನ ಕುಟುಂಬ ಬದುಕಿನ ಸ್ಥಿತಿಯನ್ನು ವಿವರಿಸಿದ್ದಾರೆ. ತಮ್ಮ ಊರಲ್ಲಿ ತಾವು ಹರಿಜನರು ಆದ ಕಾರಣಕ್ಕಾಗಿ ಹರಿಜನರನ್ನು ಸಮಾಜದಲ್ಲಿ ಅಸ್ಪೃಶ್ಯರು ಎಂದು ಕೀಳಾಗಿ ಕಾಣುವ ಮೇಲು ಜಾತಿಯ ಅಮಾನವಿಯ ಹಿಂಸೆಗಳನ್ನು, ತಾನು ಶಾಲೆಗೆ ಹೋಗುತ್ತಿದ್ದಾಗ ಶಾಲೆ ಹಾಗೂ ಹಾಸ್ಟೆಲ್‌ನಲ್ಲಿ ದಲಿತರಾಗಿದ್ದ, ತಾನು ಸಮಾಜದಲ್ಲಿ ಅವಮಾನಗಳಿಗೆ ಒಳಪಟ್ಟಂತಹ ಸಮಾಜದ ಸ್ಥಿತಿಯನ್ನು ವಿವರಿಸಿದ್ದಾರೆ.

'ನನ್ನ ತಂದೆಗೆ ನನ್ನನ್ನು ಕಂಡರೆ ಬಹಳ ಪ್ರೀತಿ, ಕೆಲವು ಸಲ ಹೊರಗೆ ಹೋದಾಗ ನನ್ನನ್ನು ಕರೆದುಕೊಂಡು ಹೋಗುತ್ತಿದ್ದರು. ತಂದೆಗೆ ಬೇರೆ ಬೇರೆ ಜಾತಿಯ ಗೆಳೆಯರಿದ್ದರು. ಸವರ್ಣೀಯ ಕೇರಿಗೆ ಹೋಗಿ ಆ ಗೆಳೆಯರ ಮನೆ ಮುಂದೆ ನಿಲ್ಲುತ್ತಿದ್ದರು. ಒಮ್ಮೊಮ್ಮೆ ಅವರು ಪಕ್ಕದ ಕಲ್ಲಿನ ಮೇಲೆ ಕೂರಿಸಿ ನನಗೆ ಏನಾದರೂ ತಿನ್ನಲು ಕೊಡುತ್ತಿದ್ದರು. ತಂದೆ ಕೆಲವು ಸಲ ಊರ ಹೋಟೆಲಿಗೂ ಕರೆದುಕೊಂಡು ಹೋಗುತ್ತಿದ್ದರು. ಹೋಟೆಲ್‌ನವರು ಇತರರಿಗಿಂತ ದೂರದಲ್ಲಿ ನಮ್ಮಿಬ್ಬರನ್ನು ಕೂರಿಸುತ್ತಿದ್ದರು. ಅವರು ಕೊಡುತ್ತಿದ್ದ ಇಡ್ಲಿಯನ್ನು ತಿನ್ನಲ ಪರಮಾನಂದವಾಗುತ್ತಿತ್ತು. ಇಡ್ಲಿಯ ರೂಪ, ಮೃದುತ್ವ ರುಚಿಯಲ್ಲಿ ಮುಳುಗಿ ಹೋಗಿರುತ್ತಿದ್ದ ನಮಗೆ ಬೇರೆ ವಿಚಾರಗಳು ಅನವಶ್ಯಕವಾಗಿದ್ದವು'[೭] ಸಮಾಜದಲ್ಲಿ ದಲಿತರಾಗಿದ್ದ ಲೇಖಕರಿಗೆ ಊರಿನ ಮೇಲ್ವರ್ಗದವರು ಮನೆಯ ಹತ್ತಿರ ಹೋದಾಗ, ಹೊಟೇಲ್‌ಗಳಲ್ಲಿ ಪ್ರತ್ಯೇಕವಾಗಿ ಕೂರಿಸಿ ಊಟ ನೀಡುತ್ತಿರುವಂತಹ ಘಟನೆಗಳು ಜಾತಿಯ ಹೆಸರಿಂದ ಸಮಾಜದಲ್ಲಿ ಅಪಮಾನವಾಗುವಂತಹ ಸಾಮಾಜಿಕ ಸಂಗತಿಗಳನ್ನು ವಿವರಿಸಿದ್ದಾರೆ.

ಹೀಗೆ ತಮ್ಮ ಊರಿನಲ್ಲಿ ಮೂಢನಂಬಿಕೆಗಳಿಂದ ಜನರು ದೇವತೆ, ದೆವ್ವಗಳು ಎಂದು ಬದುಕುತ್ತಿದ್ದ ಸಮಾಜಿಕ ಆಯಾಮವನ್ನು ನೋಡಬಹುದು. ಊರಲ್ಲಿ ದೇವತೆಗಳು ಬರುತ್ತಿದ್ದದ್ದು ಹೆಚ್ಚಿನದಾಗಿ ಹರಿಜನರ ಹೆಂಗಸರ ಮೈಮೇಲೆ .ಇಂತಹ ದೇವತೆಗಳು ಮೈದುಂಬಿದಾಗ ಊರಲ್ಲಿ ಜನ ಭಯ ಭಕ್ತಿಯಿಂದ ದೇವರು ತಮಗೆ ಒಳ್ಳೆಯದು ಮಾಡುವುದಿಲ್ಲವೆಂದು. ತಮ್ಮ ಕೋರಿಕೆಗಳನ್ನು ಹಿಡೇರಿಸಿಕೊಳ್ಳಲು ಸತ್ತು ಹೋಗಿರುವ ತಮ್ಮ ಸಂಬಂಧಿಗಳು. ಯಾರಾದರೂ ಒಬ್ಬರಲ್ಲಿ ದೆವ್ವವಾಗಿ ಮೈಗೆ ಸೇರಿಕೊಳ್ಳುತ್ತದೆ ಎಂಬ ಮೌಢ್ಯತೆಯು ಇರುವುದನ್ನು ಕಾಣಬಹುದು.

ನಮಗೆ ಒಬ್ಬ ದೇವರಿದ್ದಾನೆ. ನಮಗೊಬ್ಬ ಗುರುಗಳಿದ್ದಾರೆ ಎಂದು ತಿಳಿದದ್ದು ಆಗಲೇ ಮನೆಯಿಂದ ಮೇಲಿಕ್ಕಿದ್ದ ಇಪ್ಪೆಮರದ ಕೆಳಗೆ ಗುರುಗಳು ಬಂದು ನಿಂತಿದ್ದಾರೆ ಎಂದು ದೊಡ್ಡಪ್ಪ ಅಜ್ಜಿ, ತಂದೆ, ತಾಯಿ ಎಲ್ಲರೂ ಹೋಗಿ ಅವರಿಗೆ ನಮಸ್ಕರಿಸಿ, ಕಾಣಿಕೆ ಅರ್ಪಿಸಿದರು. ಅವರು ಮಂಟೆಸ್ವಾಮಿಯ ಶಿಷ್ಯ ಪರಂಪರೆ, ಮಂಟೆಸ್ವಾಮಿ ನಮ್ಮ ಮನೆಯದೇವರು ನಾವೆಲ್ಲ ಆ ದೇವರ ಒಕ್ಕಲಿನವರು ಆ ಗುರುಗಳು ಬಂದರೆ ಸಾಕ್ಷಾತ್ ಮಂಟೆಸ್ವಾಮಿಯೇ ಬಂದಂತೆ, ಮಾಗಡಿ ಸುತ್ತ ಮುತ್ತ ಈ ಸಂಪ್ರದಾಯ ವಿರಳ. ಇದು ಮಂಡ್ಯ, ಮೈಸೂರು ಜಿಲ್ಲೆಗಳಲ್ಲಿ ಹೆಚ್ಚು ನಮ್ಮ ಪೂರ್ವಿಕರು ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಆತಕೂರಿನಿಂದ ಇಲ್ಲಿಗೆ ವಲಸೆ ಬಂದವರಂತೆ. ಈ ಗುರುಗಳು ಆ ಭಾಗದವರೇ ಇಷ್ಟೊಂದು ದೂರ ಬಂದದ್ದು ನಮ್ಮ ಭಾಗ್ಯ ನಮ್ಮ ದೇವರು ಹೊಲೆಯರವನೆಂದು ಹೇಳುತ್ತಾರೆ. ಆದರೆ ಈ ಗುರುಗಳು ಸವರ್ಣೀಯರು ಆದ್ದರಿಂದಲೇ ಏನೋ ಹೊಲೆಯರ ಕೇರಿಗೆ ಹೆಜ್ಜೆ ಇಡಲಿಲ್ಲ. ಸದ್ಯ ಇಪ್ಪೆ ಮರದ ಕೆಳಕ್ಕಾದರೂ ಬಂದರಲ್ಲಿ ಆ ದಿನವೆಲ್ಲ ತಾಯಿಯು ತನ್ನ ಜೊತೆಗಾತಿಯರು ಶಿವನಹಳ್ಳಿ ಕೆರೆಯಲ್ಲಿ ಗೋಟೆಗಡ್ಡೆಯನ್ನು ಸಂಗ್ರಹಿಸುತ್ತಿದ್ದ. ಬರುವ ದಾರಿಯಲ್ಲಿ ರಾಜಾಜಿನಗರದಲ್ಲಿ ಅಣೆ ಸೊಪ್ಪು, ಬೆರಕೆ ಸೊಪ್ಪು, ಬಹುವಾಗಿ ಬೆಳೆಯುತ್ತಿತ್ತು. ಅದನ್ನು ಕಿತ್ತು ತರುತ್ತಿದ್ದರು. ಇದರಿಂದ ರಾತ್ರಿ ಅಡುಗೆ ಮಾಡಿ ತನ್ನ ಕುಟುಂಬದ ಊಟ ಮಾಡುತ್ತಿದ್ದನ್ನು ವಿವರಿಸಿದ್ದಾರೆ. ತಂದೆಯ ಜೊತೆಗೆ ತಾಯಿಯು ಶ್ರೀರಾಂಪುರದಲ್ಲಿ ಕೆಲಸಕ್ಕೆ ಸೇರಿಕೊಂಡು ತಮ್ಮ ಕುಟುಂಬಕ್ಕೆ ಸಹಾಯಕರಾಗಿ ದುಡಿಯುತ್ತಿದ್ದ ತಾಯಿಯ ದುಡುಮೆ ಹಾಗೂ ಇದರಿಂದ ಕುಟುಂಬಕ್ಕೆ ಅನುಕೂಲವಾಗುವಂತೆ ಪರಿಸ್ಥಿತಿಯನ್ನು ವಿವರಿಸಿದ್ದಾರೆ.

'ಶ್ರೀರಾಂಪುರದ ದಲಿತ ವಿದ್ಯಾರ್ಥಿನಿಲಯದಲ್ಲಿ ತಾಯಿ ಕಸಗುಡಿಸುವ ಕೆಲಸಕ್ಕೆ ಸೇರಿಕೊಂಡಳು. ಅದರ ಹೆಸರು ಆರ್.ಗೋಪಾಲ ಸ್ವಾಮಿ ಅಯ್ಯರ್ ವಿದ್ಯಾರ್ಥಿ ನಿಲಯ, ಟಿ.ವೆಂಕಟಯ್ಯ ಎಂಬುವವರು ಅದರ ಮೇಲ್ವಿಚಾರಕರು ವಿದ್ಯಾರ್ಥಿಗಳಿಗೆ ಊಟ ಬಡಿಸಿ ಆದ ಮೇಲೆ ಕೆಲಸಗಾರರಿಗೂ ಊಟ ಕೊಡುತ್ತಿದ್ದರು. ಅವರು ಕೊಡುತ್ತಿದ್ದ ಮುದ್ದೆ ಸಾರನ್ನು ನನ್ನ ತಾಯಿ ಮಧ್ಯಾಹ್ನ, ರಾತ್ರಿ ಮನೆಗೆ ತರುತ್ತಿದ್ದಳು. ಇದರಿಂದ ನಮ್ಮ ಅನ್ನದ ಸಮಸ್ಯೆ ನಿವಾರಣೆ

ಆಯಿತು.'[೮] ಈ ರೀತಿಯಾಗಿ ಸಿದ್ಧಲಿಂಗಯ್ಯನವರು ತಮ್ಮ ಕುಟುಂಬದ ನೈಜವಾದ ಸ್ಥಿತಿಯನ್ನು ಊರು, ಕೇರಿ ಆತ್ಮ ಕಥನದಲ್ಲಿ ವಿವರಿಸಿದ್ದಾರೆ.

ಊರಲ್ಲಿ ಹರಿಶ್ಚಂದ್ರನ ನಾಟಕ ಆಡುತ್ತಿದ್ದರು. ಅದರಲ್ಲಿ ಇವನೆ (ಸಿದ್ಧಲಿಂಗಯ್ಯನ ಮಾವ) ಸತ್ಯಹರಿಶ್ಚಂದ್ರ, ಪಾತ್ರವನ್ನು ಎಷ್ಟು ಅಭಿನಯಿಸುತ್ತಿದ್ದನೆಂದರೆ, ಅದನ್ನು ನೋಡಿದ ಊರ ಹೆಂಗಸರು ಬಿಕ್ಕಿ ಬಿಕ್ಕಿ ಅಳುತ್ತಿದ್ದರು. ಹೀಗೆ ಸಮಾಜಿಕದಲ್ಲಿ ಪೌರಾಣಿಕ ನಾಟಕಗಳನ್ನು ಆಡುವ ಮೂಲಕ ತಮ್ಮ ಮನಸ್ಸನ್ನು ಅಗುರ ಮಾಡಿಕೊಳ್ಳುತ್ತಿದ್ದ ಜನರ ಸಾಮಾಜಿಕತೆಯನ್ನು ಚಿತ್ರಿಸಿದ್ದಾರೆ.

ಲೇಖಕರು ತಮ್ಮ ಹಳ್ಳಿಯ ಸಾಮಾಜಿಕ ಜೀವನದ ಅಂಶಗಳನ್ನು ತಿಳಿಸುವುದರ ಜೊತೆಗೆ. ತನ್ನ ಕುಟುಂಬವು ಬೆಂಗಳೂರಿನ ಶ್ರೀರಾಂಪುರದಲ್ಲಿ ಕೂಲಿಮಾಡಿಕೊಂಡು ಜೀವನ ನಡೆಸುತ್ತಿದ್ದರು. ಅಲ್ಲಿ ಕೆಲವು ತಮ್ಮ ಕೇರಿಯ ಸಾಮಾಜಿಕ ನಡವಳಿಕೆಗಳನ್ನು ವಿವರಿಸಿದ್ದಾರೆ. 'ಈ ಕೇರಿಯಲ್ಲಿ ಸದಾ ಕುಡುಕರ ಹಾವಳಿ, ಸಂಜೆ ಆಯಿತೆಂದರೆ ಕುಡುಕರು ಕೂಗುವುದು, ಕುಣಿಯುವುದು, ಜಗಳಕ್ಕೆ ಕಾಲುಕೆರೆಯುವುದರಿಂದ ಜನರ ಗಮನ ಸೆಳೆಯುತ್ತಿದ್ದರು. ಕೆಲವರು ತಮಗೆ ತಿಳಿದಂತೆ ಹಾಡುತ್ತಿದ್ದರು. ಕುಡಿದ ಸಮಯದಲ್ಲಿ ಅವರಿಗೆ ಹೆಂಡತಿ ಮಕ್ಕಳ ಮೇಲಿನ ಪ್ರೀತಿ ಅಧಿಕವಾಗುತ್ತಿತ್ತು. ಕೆಲವರು ಚೇಷ್ಟೆಯಲ್ಲಿ ತೊಡಗಲು ಹಾತೊರೆಯುತ್ತಿದ್ದರು. ಕುಡುಕರು ತಬ್ಬಿಕೊಳ್ಳಲು ಹೋದರೆ ಅವರ ಹೆಂಡತಿಯರು ಕುಡುಕ ಗಂಡನ ಮುಖಕ್ಕೆ ಬಲವಾಗಿ ತಿವಿಯುತ್ತಿದ್ದರು. ಇನ್ನು ಕೆಲವರು ತಮ್ಮ ಮಕ್ಕಳ ಮೇಲಿನ ವ್ಯಾಮೋಹ ಉಮ್ಮಳಿಸಿದ್ದರಿಂದ ಅವರನ್ನು ಬಾಚಿ ಮುದ್ದಿಸಿ ಕುಣಿದಾಡುತ್ತಿದ್ದರು. ತಮ್ಮ ಜೇಬಿನಿಂದ ಹಣವನ್ನು ತೆಗೆದು ಹೆಂಡತಿ ಮಕ್ಕಳಿಗೆ ಧಾರಳವಾಗಿ ಕೊಡುತ್ತಿದ್ದರು.'[೯]

ನಮಗೆ ಪುಣ್ಯ ಲಭಿಸಿದ ಸಂತೋಷ ನಮಗೆ ಆಶೀರ್ವಾದ ಮಾಡಲು ಒಬ್ಬ ಗುರುಗಳಿದ್ದಾರೆ ಎಂಬ ಹೆಮ್ಮೆ, ನಮ್ಮಲ್ಲಿ ಯಾರಾದರೂ ತಪ್ಪು ಮಾಡಿದರೆ ಆರೋಪಕ್ಕೆ ಒಳಗಾದರೆ ಮಂಟೇಸ್ವಾಮಿ ಅಣೆ ನಾನು ಅದನ್ನು ಮಾಡಿಲ್ಲ ಎಂದು ಪ್ರಮಾಣ ಮಾಡುತ್ತಿದ್ದರು. ಹೀಗೆ ತಮ್ಮ ಸಮುದಾಯ ಕುಲದೇವರು ಆಗದಿದ್ದರಿಂದ ಹರಿಜನರು ಮಂಟಿಸ್ವಾಮಿಯ ಒಕ್ಕಲಿಗರು ಆವರಣ ಮಂಟೇಸ್ವಾಮಿಗಳು ತಮ್ಮ ಕೇರಿಯ ಒಳಗಡೆ ಬರದೆ ಹೊರಗೆ ಇದ್ದು ದಲಿತರಿಂದ ಕಾಣಿಕೆಗಳನ್ನು ಪಡೆದು ಆಶೀರ್ವಾದ ಮಾಡಿದ್ದರು. ದೇವರುಗಳ ಧಾರ್ಮಿಕತೆಯಲ್ಲಿ ತಾರತಮ್ಯವಿರುವುದನ್ನು ಸಮಾಜದಲ್ಲಿ ಇದೆ. ಪಕ್ಕದ ಊರಲ್ಲಿ ಒಬ್ಬನ ಮೇಲೆ ಒಂದು ದೇವತೆ ಮೈ ತುಂಬುತ್ತಿತ್ತು. ಜನ ಅದನ್ನು ಕುರಿದೇವ್ರು ಎನ್ನುತ್ತಿದ್ದರು. ಯಾಕೆಂದರೆ ಆ ದೇವರು ಯಾವುದಾದರೂ ಒಂದು ಕುರಿಯನ್ನು ಬಲಿಕೊಡಬೇಕೆಂದು ಕೇಳುತ್ತಿದ್ದರಿಂದ ಲೇಖಕರ ಮಾವನು ದೇವರು ಬಂದಿದ್ದ ಪೂಜಾರಪ್ಪ ಬಂದಾಗ. ಈ ಕುರಿ ಬೇಡ ಬೇರೆ ಕುರಿ ಬೇಕೆಂದು ಹಠಮಾಡುವಾಗ ದೇವರ ಸತ್ಯ ಗೊತ್ತಾದಾಗ ಹಿಂದೆ ಕುರಿಗಳನ್ನು ಕಳೆದುಕೊಂಡ ಜನರ ಪೂಜಾರಪ್ಪನನ್ನು ಹಣ್ಣುಗಾಯಿ ಆಗುವ ಹಾಗೆ ಒಡೆಯುವುಂತಹ ಪ್ರಸಂಗ ಸಮಾಜದಲ್ಲಿ ಏನು ಜ್ಞಾನ ತಿಳಿಯದ ಹರಿಜನರನ್ನು

ತಿಳಿದಂತಹ ವ್ಯಕ್ತಿಗಳು ಸುಲಿ'ಗಿಲಗೆ ಮಾಡುವುದನ್ನು ಚಿತ್ರಿಸಿದ್ದಾರೆ. ಮಂಚನಬಲೆಯಲ್ಲಿ ನಾಟಕಗಳನ್ನು ಊರು ಜನರು ಪ್ರದರ್ಶನ ಮಾಡುತ್ತಿದ್ದ ಸಾಮಾಜಿಕ ಆಟಗಳ ಬಗ್ಗೆ ತಿಳಿಸಿರುವುದನ್ನು ನೋಡಬಹುದು.

ಶ್ರೀರಾಂಪುರದಲ್ಲಿ ತಮ್ಮಜನಗಳು ಶ್ರಮಪಟ್ಟು ದುಡಿದು ಕುಡಿತಕ್ಕೆ ಒಳಗಾಗಿ ತಮ್ಮ ಮಾನವನ್ನು ತಾವೆ ಹರಾಜು ಹಾಕಿಕೊಳ್ಳುವ ಹಾಗೂ ಬೀದಿಯಲ್ಲಿ ತಮ್ಮ ಹೆಂಡತಿಯರೊಂದಿಗೆ ದೇಹ ಸಂಪರ್ಕ ಬೆಳೆಸಲು ಹಾತೋರಿಯುವ ಚಿತ್ರಣಗಳನ್ನು ಸಮಾಜದ ಸ್ಥಿತಿಯನ್ನು ವ್ಯಂಗ್ಯವಾಗಿ ಚಿತ್ರಿಸಿದ್ದಾರೆ. ಹಾಗೆಯೇ ಅದೇ ಕೇರಿಯ ಹೆಂಗಸು ಕುಡಿತಕ್ಕೆ ಒಳ್ಳಗಾಗಿ, ಅತಿ ಹೆಚ್ಚಿದಾಗ ಕುಡಿದು ಮೈಯಲ್ಲಿ ಪ್ರಜ್ಞೆ ಇಲ್ಲದೆ ಬಿದ್ದಾಗ ಕೇರಿಯಲ್ಲಿ ಚಿಕ್ಕವರಿಂದ ಹಿಡಿದು ಅರವತ್ತು ವರ್ಷದ ಮುದಕರು ಅವಳನ್ನು ಅನುಭವಿಸುವಂತಹ ಅಸಹ್ಯಕರವಾದ ಸಾಮಾಜಿಕ ಬದುಕನ್ನು ನೋಡಬಹುದು. ಹೀಗೆ ದೇವತೆಗಳ ಕಾಟ ಪ್ರಸಂಗದಲ್ಲಿ ಇದ್ದಕ್ಕಿದ್ದಂತೆ ಕೇರಿಯಲ್ಲಿ ಕಾಲ ಕಾಣಿಸಿಕೊಂಡಾಗ ಒಂದು ದಿನ ಸಂಜೆ ಬಿಳಿ ಸೀರೆ, ರವಿಕೆ ತೊಟ್ಟು ಹಣೆಯ ತುಂಬ ಕುಂಕುಮ ಇಟ್ಟುಕೊಂಡು ಹೆಂಗಸೊಬ್ಬಳು ಮೂಲೆಯಲ್ಲಿ ಕುಳಿತಿದ್ದಳಂತೆ, ಆ ಮನೆಯವರಿಗಾಗಲೀ, ಅಲ್ಲಿದ್ದ ಇತರರಿಗೆ ಅವಳ ಪರಿಚಯವಿರಲ್ಲಿ ಆಕೆ ಮಂಗ ಮಾಯಾವಾದಳು ಇಂತಹ ಅನಿಷ್ಟ ಪದ್ಧತಿಗಳನ್ನು ತಮ್ಮ ಸಮುದಾಯದಲ್ಲಿ ನಡೆಸಿಕೊಂಡು ಬಂದು, ಮೌಢ್ಯತೆಯಿಂದ ಕೂಡಿದ್ದ ತಮ್ಮ ಜನರು ಈ ವಿಷಯದ ಬಗ್ಗೆ, ದೆವ್ವ, ಪಿಶಾಚಿಗಳ ನಂಬಿಕೆಗಳನ್ನು ಆಚರಿಸಿಕೊಂಡು ಹೋಗುವ ಸಾಮಾಜಿಕವಾಗಿ ನಂಬಿದವರನ್ನು ತನ್ನ ಆತ್ಮ ಕಥನದಲ್ಲಿ ಚಿತ್ರಿಸಿದ್ದಾರೆ. ಹೀಗೆ ಆತ್ಮಕಥನದಲ್ಲಿ ತಣಿಶಾಸ್ತ್ರ, ಊಟಕ್ಕೆ ಕುಳಿತಿದ್ದ ದೆವ್ವ, ಹಾಸ್ಟೆಲ್‌ನಲ್ಲಿದ್ದ ದೆವ್ವವನ್ನು ಮಾರುಕುನ್ನ ವಿಹಾರಿಸಿದದು ಕೂದಲನ್ನು ಹಿಡಿದು ಕತ್ತರಿಸಿ ತನ್ನ ಗುಲಾಮನನ್ನಾಗಿ ಮಾಡಿಕೊಂಡು, ಅದರ ಮೂಲಕವೆ ಮನೆಕಟ್ಟುವ ಗಟ್ಟಿಯ ಕೆಲಸ ಮಾಡಿಸಿಕೊಂಡು ಜೀವನ ನಡೆಸುತ್ತಿದ್ದ ಎಂಬುದನ್ನು ವಿವರಿಸಿದ್ದಾರೆ.

ಸಮಾಜದಲ್ಲಿ ದೇವರು ಇದ್ದಾನೆ. ಇಲ್ಲ, ಎಂಬುದರ ಬಗ್ಗೆ ಶಾಸನದ ಕಾರ್ಮಿಕರಿಗೂ, ಸಿದ್ದಲಿಂಗಯ್ಯನವರಿಗೂ ವಾದ ವಿವಾದಗಳು ಆಗಿದ್ದನ್ನು ವಿವರಿಸಿದ್ದಾರೆ. ಲೇಖಕರು ನಾಸ್ತಿಕನಾಗಿದ್ದು, ಕಾರ್ಮಿಕರು ಕಟ್ಟು ಆಸ್ತಿಕರು, ಬವ್ಯಂಗ್ಯವಾಗಿ ಒಂದು ಬಾರಿ ಅವರ ಕುಟುಂಬದವರು ತಿರುಪತಿಗೆ ಹೋದಾಗ ಸಾಲಿನಲ್ಲಿ ದೇವರ ದರ್ಶನಕ್ಕೆ ನಿಂತಿದ್ದಾಗ ಸಾಲಿನಲ್ಲಿ ಹಿಂದೆ ಇದ್ದವನ್ನು ಯಜಮಾನನ ಜೋಬಿಗೆ ಕೈ ಹಾಕಿದನು ಹಣ ಕದಿಯಲು ಯತ್ನಿಸುತ್ತಿದ್ದ. ತಡ ಇಲ್ಲ ಹಣಕದ್ದವನನ್ನು ಹಿಡಿದು ತನ್ನ ದುಡ್ಡನ್ನು ಕಾಪಾಡಿಕೊಂಡು, ಹಣ ಕದ್ದವನಿಗೆ ದೇವರು ಶಿಕ್ಷಿಸುತ್ತಾನೆ ಎಂದು ಹೇಳಿದ್ದು. ಅಸ್ತಿಕನಾಗಿ ಆದರೂ ಯಾವುದೆ ಒಂದು ಕಡೆ ಭಯ, ಭಕ್ತಿ ಇರುವುದರಿಂದ ದೇವರಲ್ಲಿ ನಂಬಿಕೆ ಇಟ್ಟುಕೊಂಡು ಜೀವನ ನಡೆಸುವುದು. ಸಮಾಜದಲ್ಲಿ ಕಂಡು ಬರುತ್ತದೆ. ಒಟ್ಟಾರೆಯಾಗಿ ಹರಿಜನರು ತಮ್ಮ ಅನೇಕಕಡೆಯಿಂದ ಸಮಾಜದಲ್ಲಿ ಮೌಢ್ಯತೆ,

ಅಸ್ಪೃಶ್ಯತೆಯಿಂದ, ಹರಿಜನರು ಮೇಲ್ವರ್ಗದವರ ಮನೆಗೆ ಹೊದರೆ ಹೊರಗಡೆ ನಿಂತುಕೊಂಡು ಅವರು ತಿಂದು–ಉಂಡು ಉಳಿದ ಅನ್ನವನ್ನು ಪಡೆದು ತಿನ್ನುವುದು. ಸಮಾಜದಲ್ಲಿ ಇವರನ್ನು ಅವಣನವಿಯ ದೃಷ್ಟಿಯಿಂದ ನೋಡುವುದನ್ನು, ಸಾಮಾಜಿಕ ಜೀವನದ ಬಗ್ಗೆ ತಮ್ಮ ಆತ್ಮ ಕಥನದಲ್ಲಿ ವಿಶ್ಲೇಷಿಸಿದ್ದಾರೆ.

ಮಣೆಗಾರ

ತುಂಬಾಡಿ ರಾಮಯ್ಯನವರು ಮಣೆಗಾರ ಆತ್ಮಕಥನದಲ್ಲಿ ತನ್ನ ಕುಟುಂಬ ಮತ್ತು ತಮ್ಮ ಸಮುದಾಯವಾದ ಮಣೆಗಾರ (ಹರಿಜನ) ಸಮಾಜದಲ್ಲಿ ಜೀವಿಸುತ್ತಿದ್ದ ಬಗ್ಗೆ ತಮ್ಮ ಸಮುದಾಯದ ಜನಗಳ ಪೋಷಣೆ ಮಾಡುವಂತಹ ಸಮಾಜ ಜೀವನದ ಬಗ್ಗೆ ವಿವರಿಸಿದ್ದಾರೆ.

'ನಮ್ಮ ಮಣೆಗಾರರ ಕುಲಗುರುಗಳಾದ ಆದಿಜಾಂಬವ ಮುನಿಗಳು ತಮ್ಮ ಪರಿವಾರದೊಂದಿಗೆ ಕುದುರೆ ಮೇಲೆ ಬಂದು ಕಟ್ಟೆ ಮನೆಯ ಯಜಮಾನರ ಮನೆಯಲ್ಲಿ ಬಿಡಾರ ಹೂಡುತ್ತಿದ್ದರು. ಈ ಕಟ್ಟೆ ಮನೆಗೆ ಒಳಪಡುವ ಎಲ್ಲಾ ಊರುಗಳು ಹಟ್ಟಿಗಳ ಯಜಮಾನರುಗಳು ಆದಿಜಾಂಬ ಮುನಿಗಳಿಗೆ ಕಪ್ಪ–ಕಾಣಿಗಳನ್ನು ಕೊಟ್ಟು ಒಪ್ಪಿಸಿ ಬರುತ್ತಿದ್ದರು. ಕ್ರಮೇಣ ನಮ್ಮ ಜಾತಿಯವರಿಗೆ ಬಂದು ಹಣಕಾಸಿನ ಊಟಕ್ಕೂ ಕಷ್ಟಪಡುವಂತಾದ ಮೇಲೆ ಕಪ್ಪ ಕಾಣಿಕೆಗಳನ್ನು ಕೊಡುವುದನ್ನು ನಿಲ್ಲಿಸಿದರು.'[೧೦] ತುಂಬಾಡಿ ಹಟ್ಟಿಯಲ್ಲಿ ಹರಿಜನರು ಸಮಾಜದ ಪ್ರತಿಯೊಂದು ಜಾತಿಯವರಿಗೂ ದೇವರುಗಳು ಇದ್ದ ಹಾಗೆ, ಆದಿಜಾಂಬವ ದೇವರಿಗೆ ಹೆಡೆಕೊಡುತ್ತ, ಭಯ ಭಕ್ತಿಯಿಂದ ಪೂಜಿಸುವ ಮೂಲಕ ಕಪ್ಪ ಕಾಣಿಗಳನ್ನು ಕೊಡುತ್ತಿರುವುದು ಹಾಗೂ ದಕ್ಕಲರು ಹಾಗೂ ಮಣೆಗಾರರು ಇಂದಿಗೂ ಈ ಸಂಪ್ರದಾಯವನ್ನು ತಮ್ಮ ಕಡೆ ಆಚರಿಸುವುದನ್ನು ಕಾಣಬಹುದು ಎಂದು ವಿವರಿಸಿದ್ದಾರೆ.

ತುಂಬಾಡಿ ರಾಮಯ್ಯನವರು ಮಣೆಗಾರ ಆತ್ಮಕಥನದ "ಜಾತಿ ಕಟ್ಟುಗಳು" ಪ್ರಸಂಗದಲ್ಲಿ ಹರಿಜನರನ್ನು ಮೇಲ್ವರ್ಗದ ಜನರು ಹಾಗೂ ದಲಿತರಲ್ಲಿ ಅಕ್ಷರಸ್ಥರಾದ ಹೊಲೆಯ ಜಾತಿಯವರು ಜಾತಿನಿಂದನೆ ಮಾಡುತ್ತಾ, ಅಸಮಾನತೆಯಿಂದ ನೋಡುವುದರ ಜೊತೆಗೆ ಅಪಮಾನಗಳನ್ನು ಮಾಡುವಂತಹ ಸಮಾಜದಲ್ಲಿ ಅಸಯಕತೆಯನ್ನು ವಿವರಿಸಿದ್ದಾರೆ.

'ನಮ್ಮ ಹಳ್ಳಿಯದ್ದ ಜೈನರ ಪಾರ್ಶ್ವನಾಥಪ್ಪ ಮತ್ತು ಜೋತಮ್ಮನವರ ಮನೆಯಲ್ಲಿದ್ದ ಅಂಗಡಿಗಳಿಗೆ ನಾವು ಸಾಮಾನು ಕೊಳ್ಳಲು ಹೋದರೆ, ಅವರು ತೊಣಚು ಹತ್ತಿದ ಹಸು ಎಗರಾಡುವಂತೆ, ನಮ್ಮನ್ನು ನೋಡಿದ ಕೂಡಲೆ ಎಣಗಾಡುತ್ತಿದ್ದರು. ಎಂದು ಓಡಾಡಲಾರದಷ್ಟು ಸ್ಥೂಲದೇಹಿಯಾಗಿದ್ದ ಜ್ಯೋತಮ್ಮನವರ ತಾಯಿ ಸಿರಿದೇವಮ್ಮನವರು. ಒಂದು ಉದ್ದನೆ ಬಿದಿರುಕೋಲಿಗೆ ತಟ್ಟೆಯನ್ನು ಸಿಕ್ಕಿಸಿ ಕುಂತಲ್ಲಿಂದಲೇ ಕಿಟಕಿಯಲ್ಲಿ ನಿಂತಿದ್ದ ನಮಗೆ ವ್ಯಾಪಾರ ಕೊಡುತ್ತಿದ್ದರು. ಅವರ ಮಕ್ಕಳು ನಮ್ಮ ಜೊತೆಯಲ್ಲಿ ಆಟವಾಡುತ್ತಿದ್ದರೆ. ಕೂಡಲೆ ಅವರನ್ನು

ಎಳೆದುಕೊಂಡು ಹೋಗಿ ಕೆನ್ನೆಗೆ ನಾಲ್ಕು ಬಿಗಿದು, ಅವರ ಕೈಕಾಲು ತೊಳೆದು ಮನೆಯೊಳಗೆ ಕರೆದುಕೊಳ್ಳುತ್ತಿದ್ದರು. ಇದೆಲ್ಲ ಅರ್ಥವಾಗದ ನಾವು ಬೆಪ್ಪಾಗಿ ನೋಡುತ್ತಾ ನಿಂತಿರುತ್ತಿದ್ದೆವಲ್ಲ.[೧೧]

ಏನು ತಿಳಿಯದ ಚಿಕ್ಕ ಹುಡುಗರಲ್ಲಿ ದಲಿತರೆಂದು ಮನಸ್ಸಿಗೆ ನೋವುಂಟು ಮಾಡಿದ ಮೇಲ್ವರ್ಗದವರ ದರ್ಪದ ಬಗ್ಗೆ ವಿವರಿಸಿದ್ದಾರೆ. ಯುಗಾದಿ, ಮಹಾನವಮಿ, ಬಾಬಯ್ಯ ಜಾತ್ರೆ, ಆಂಜನೇಯ ಮತ್ತು ಶೆಟ್ಟಿಹಳ್ಳಿ ಮಾರಮ್ಮನ ಜಾತ್ರೆಗಳಾಗಿದ್ದ. ಇವುಗಳ ದಲಿತರು ಮಹಾನವಮಿ ಹಬ್ಬವನ್ನು. ಬೇರೆಲ್ಲಿ ಹಬ್ಬಗಳನ್ನು ಆಚರಿಸುತ್ತಿದ್ದ ಕುರಿತಂತೆ 'ನಾನು ಹೈಸ್ಕೂಲಿಗೆ ಸೇರುವ ಮುಂಚೆ ಇವರ ಮನೆಗೆ ಪ್ರತಿ ವರ್ಷವೂ ಮಾರ್ನೊಮಿ ಹಬ್ಬಕ್ಕೆ ಊಟಕ್ಕೆ ಹೋಗುತ್ತಿದ್ದೆ ಇವರ ಮನೆಯಲ್ಲಿ ಹಬ್ಬದ ದಿನದಂದು ಎಲ್ಲಾ ಜಾತಿಯವರು ಊಟವಾದ ಮೇಲೆ, ನಮ್ಮವರಿಗೆ ಕೊನೆಯಲ್ಲಿ ಊಟ ಹಾಕುತ್ತಿದ್ದರು. ಇದಕ್ಕಾಗಿಯೇ ಕೆಲವು ಸಾರಿ ಅರ್ಧ ರಾತ್ರಿಯವರೆಗೂ ನಾವು ಕಾಯಬೇಕಾಗಿತ್ತು. ನಾನು ಹೈಸ್ಕೂಲಿಗೆ ಹೋದಾಗ ಚಿಕ್ಕ ನರಸೇಯಪ್ಪನವರ ಮಗ ನರಸರಾಜ ನನ್ನ ಜೊತೆಯಲ್ಲಿ ಓದುತ್ತಿದ್ದದಿಂದ, ನಾನು ಮುಜುಗರ ಪಟ್ಟಕೊಂಡು ಅವರ ಮನೆಗೆ ಊಟಕ್ಕೆ ಹೋಗುವುದನ್ನೆ ನಿಲ್ಲಿಸಿಬಿಟ್ಟ.'[೧೨] ರಾಮಯ್ಯನವರು ತಮ್ಮ ಊರಲ್ಲಿ ಮಾರ್ನೊಮಿ ಹಬ್ಬದಂದು ಮೇಲ್ವರ್ಗದ ನರಸೀಯಪ್ಪನವರು ಮನೆಗೆ ಕೇರಿಯ ಎಲ್ಲರೂ ಊಟಕ್ಕೆ ಹೋಗುವಾಗ, ಹರಿಜನರ ಮೇಲ್ವರ್ಗದ ಎಲ್ಲಾ ಜಾತಿಯರು ಊಟ ಮಾಡಿದ ನಂತರ ಮಣೆಗಾರರು ಕೊನೆಯಲ್ಲಿ ಊಟ ಮಾಡುವ ಸಂಪ್ರದಾಯ ಸಮಾಜದಲ್ಲೂ ದಲಿತರಿಗೆ ಉತ್ತಮವಾದ ಸ್ಥಾನ–ಮಾನಗಳ ಇಲ್ಲದಿರುವುದನ್ನು ಕಂಡು ತಾನು ಹೈಸ್ಕೂಲಿನಲ್ಲಿ ಹೋದಾಗ ಅಂಗಡಿಯ ಯಜಮಾನಿಯು ದಲಿತರನ್ನು ಕೆಳ ಜಾತಿಯವರು, ದನದ ಮಾಂಸ ತಿನ್ನುವ ಜಾತಿ ಎಂದು ಕಿಟಕಿಯಿಂದ ಒಂದು ಕೋಲಿಗೆ ವಸ್ತುಗಳನ್ನು ನೇತುಹಾಕಿ ಹರಿಜನರ ಕೈಗೆ ಕೊಡುತ್ತಿರುವುದನ್ನು ನೋಡಿದರೆ ಸ್ವಾತಂತ್ರ್ಯ ಬಂದರೂ ನಮ್ಮಲ್ಲಿಯೇ ಮೇಲ್ವರ್ಗದ ಜನ ಅಸ್ಪೃಶ್ಯತೆಯನ್ನು ಮಾಡುವಂತಹ ಸವರ್ಣಿಯರ ಸಂಗತಿಗಳು ಹಾಗೂ ಏನು ತಿಳಿಯದ ಮಕ್ಕಳ ಒಂದು ಕಡೆ ಆಟ ಹಾಡುತ್ತಿರುವರನ್ನೇ ಮೇಲ್ವರ್ಗದ ತಮ್ಮ ಮಕ್ಕಳಿಗೆ ಒಡೆದು ಕರೆದುಕೊಂಡು ಹೋಗುವಂತ ಸಮಾಜಿಕ ಅಸಮಾನತೆಯಿಂದ, ಅವಮಾನ, ಅಮಾನಷವಾಗಿ ದಲಿತರನ್ನು ಶೋಷಣೆ ಮಾಡುತ್ತಿದ್ದರು.

ಹಾಗೆಯೆ ದಲಿತ ಕೇರಿಯಲ್ಲಿ ಹೊಲೆಯರ ನಡುವಳಿಕೆಯು ತಾನು ಅಕ್ಷರಸ್ಥರಾಗಿದ್ದು, ಹರಿಜನರಿಗೆ ಒಂದು ಬಾವಿ, ಹೊಲೆಯರಿಗೆ ಒಂದು ಬಾವಿ ಇತ್ತು. ಇಲ್ಲಿ ಹೊಲೆಯರ ಬಾವಿಗೆ ಹರಿಜನರು ನೀರು ತುಂಬಿಕೊಳ್ಳಲು ಅವಕಾಶವಿಲ್ಲ. ಹೊಲೆಯರೆ ಆಗಲಿ ಹರಿಜನರ ಬಾವಿಯಲ್ಲಿ ನೀರು ಸೇದುವ ಹಾಗೆ ಇರಲಿಲ್ಲ. ಆದರೆ ಹೊಲೆಯರ ಹೆಂಗಸರು ಹರಿಜನರನ್ನು ಕೂಲಿ ಕರೆಯಲು ಬಂದು ಹೋದಾಗ ಸಗಣಿ ನೀರು ಮುಟ್ಟಿ ತಮ್ಮ ಮನೆಗೆ ಹೋಗುತ್ತಿದ್ದರು. ಇಂತಹ ಅಕ್ಷರಸ್ಥರಾದ ಜಾತಿ, ಅಸ್ಪೃಶ್ಯತೆ ಎಂಬ ಮನೋಭಾವದಿಂದ ಹರಿಜನರನ್ನು ಸಮಾಜದಲ್ಲಿ ಅಸಮಾನತೆಯಿಂದ ನೋಡುತ್ತಿದ್ದರು.

ವ್ಯಾಸಂಗ ಮಾಡುವ ತನ್ನ ಸ್ನೇಹಿತನ ಮನೆಯಲ್ಲಿ ಈ ರೀತಿಯ ಅಪಮಾನಗಳನ್ನು ಪಟ್ಟ ಸಮಾಜದಲ್ಲಿ ದಲಿತರ ಜೀವನಾನುಪ್ರಮವೆನ್ನೇ ವಿವರಿಸಿದ್ದಾರೆ. ಇದೇ ಪ್ರಸಂಗದಲ್ಲಿ ಊರಿನ ಪ್ರತಿಯೊಂದು ಕೆಲಸ ಕಾರ್ಯಾಗಳನ್ನು ಹರಿಜನರ ಮೂಲಕ ಮಾಡಿಸಿ, ದೇವರ ಕಾರ್ಯಗಳನ್ನು ಮಾಡಿದರು. ದೇವಸ್ಥಾನಕ್ಕೆ ಒಳಗಡೆ ಪ್ರವೇಶವನ್ನು ದಲಿತರಿಗೆ ಕೊಡುವದಿರುವುದು ಅಪಮಾನದ ಸಂಗತಿಗಳನ್ನು ವಿವರಿಸಿದ್ದಾರೆ.

"ಬೇಸಿಗೆ ಕಾಲದಲ್ಲಿ ನಮ್ಮೂರಿನ ಇಡೀ ಜನ ಬಿಸಿಲಿನ ಧಗೆ ತಾಳಲಾರದೆ ಮನೆ ಹೊರಗಡೆ ಮಲಗುತ್ತಿದ್ದರು. ತುಂಬಾಡಿ ಕೆರೆ ತುಂಬಿತೆಂದರೆ ಊರಿನ ಸುತ್ತಮುತ್ತ ಇದ್ದ ಗದ್ದೆತಿಪ್ಪೆ ಗುಂಡಿಗಳೆಲ್ಲಾ ನೀರು ತುಂಬಿ, ಊರಲ್ಲಿ ಸೊಳ್ಳೆಗಳ ಕಾಟ ಜಾಸ್ತಿಯಾಗುತ್ತಿತ್ತು. ಈ ಸೊಳ್ಳೆಗಳ ಕಾಟದ ಜೊತೆಗೆ ನಾಯಿಗಳ ಕಾಟವೂ ಹೇಳತೀರದು. ದೊಣ್ಣೆ ಪಕ್ಕದಲ್ಲಿಟ್ಟುಕೊಂಡು ನಾವೇಷ್ಟೇ ಎಚ್ಚರಿಕೆಯಿಂದ ಮಲಗಿದ್ದರೂ, ಅದ್ಯಾವ ಮಾಯದಲ್ಲೋ ನಾವು ಹೊದ್ದಿದ್ದ ದುಪ್ಪಟ್ಟದೊಳಗೆ ತೂರಿ ಮಲಗಿಬಿಡುತ್ತಿದ್ದವು. ಈ ಹೊತ್ತಿನಲ್ಲೆ ನಾವು ನಮ್ಮ ದೊಡ್ಡಪ್ಪ ನಾಗಣ್ಣನ ಹತ್ತಿರ ಕೂತು ಕತೆ ಕೇಳುತ್ತಿದ್ದರು. ದೊಡ್ಡಪ್ಪ ಕಥೆಗಳನ್ನು ಹುಮ್ಮಸ್ಸಿನಿಂದ ಕೆಳಗಟ್ಟ ಹೇಳಬೇಕಾಗಿದ್ದರೆ. ಅವನು ಏಳೂರಿಗೊಂದೇ ಇದ್ದ ಮುಗ್ಗೇನ ಹಳ್ಳಿ ಹೆಂಡದಂಗಡಿಗೆ ಹೋಗಿಬಂದಿದ್ದರೆ ಮಾತ್ರ ಕಥೆಗಳನ್ನು ನಾವೆಲ್ಲ ರೆಪ್ಪೆ ಮುಚ್ಚದೆ ಕೇಳುವಂತೆ ಹೇಳಿ ನಮ್ಮನೇಲ್ಲಾ ತನ್ನ ಕಥೆಗಳ ಮಾಯ ಲೋಕಕ್ಕೆ ಕೊಂಡೊಯ್ಯುತ್ತಿದ್ದ. ಹೆಂಡವಿಲ್ಲದೆ ಕತೆಯ ಒಂದು ಶಬ್ದವೂ ಅವನ ಬಾಯಿಂದ ಹೊರಡುತ್ತಿರಲಿಲ್ಲ.'[೧೩] ದಲಿತರು ತಮ್ಮ ಸಾಮಾಜಿಕ ಜೀವನದಲ್ಲಿ ಹಬ್ಬಗಳನ್ನು ಆಚರಿಸುವ ಹಾಗೆ ಬೇನೆಗೆಯಲ್ಲಿ ಕಾಯಕ ಮಾಡಿಕೊಂಡು ಬಂದು, ರಾತ್ರಿಯಲ್ಲಿ ಮಲಗುವಾಗ ಯಾವುದಾದರೂ ಪ್ರಸಂಗವನ್ನು ಕುರಿತಂತೆ ಜಾನಪದ ಕತೆಗಳನ್ನು ತನ್ನ ಸಮುದಾಯದ ಹಿರಿಯರು ಹೇಳುತ್ತಿದ್ದರು. ಇಂತಹ ಕತೆಗಳನ್ನು ಹೇಳಬೇಕಾದರೆ ಸೆಂದಿ ಕುಡಿದು ಹೇಳುವಂತಹ ಕಲಿಕೆಯನ್ನು ಕಲಿತಿದ್ದರು. ಇಂತಹ ಕಥೆಗಳು ಎಂದರೆ ಊರಿಗೆ ಕಳ್ಳರು ಬಂದು ಕಳ್ಳತನ ಮಾಡಿ ಸಿಕ್ಕಿಬಿದ್ದ ಎಂಬ ಕಟ್ಟು ಕಥೆಗಳನ್ನು ಹೇಳುತ್ತಿದ್ದರು.

ಆತ್ಮ ಕಥನದಲ್ಲಿ ದಲಿತರು ತಮ್ಮ ದುಡಿಮೆಯ ಜೊತೆಗೆ ಇನ್ನೊಂದು ಕೆಲಸವೆಂದರೆ 'ಕಳ್ಳ ಭಟ್ಟಿ ಸಾರಾಯಿ' ಮಾಡುತ್ತಿರುವ ಸಮಾಜದಲ್ಲಿನ ಕಾನೂನು ಬಾಹಿರಕಾರ್ಯಗಳನ್ನು ವಿವರಿಸಿದ್ದಾರೆ. 'ಒಂದು ಸಲ ನಮ್ಮ ಹೊಲದ ಪಕ್ಕದಲ್ಲಿಯೇ ಇದ್ದ ಅಗಸರ ಕ್ಯಾತಪ್ಪನವರು ಬಣ್ಣವಿಯ ಪಕ್ಕದಲ್ಲಿ ರಾತ್ರಿಯೆಲ್ಲ ಅಡಿಗೆ ಮಾಡಿದಂತೆ ದೊಡ್ಡ ಒಲೆಯೊಂದರಲ್ಲಿ ಬೆಂಕಿಯಾಡುತ್ತಿತ್ತು. ಅದರ ಪಕ್ಕದಲ್ಲೇ ಮಣ್ಣಿನ ಮೂರು ಮಡಿಕೆಗಳು ಉರುಳಾಡುತ್ತಾ ಬಿದ್ದಿದನ್ನು ಕಂಡೆ, ಇವೆಲ್ಲವೂ ಕದ್ದು ಭಟ್ಟಿ ಸಾರಾಯ ಮಾಡುತ್ತಿರುವವರ ಕೆಲಸವೆಂದು ನನಗೆ ಆನಂತರದಲ್ಲಿ ತಿಳಿಯಿತು.'[೧೪] ಹೀಗೆ ತಮ್ಮ ಊರಲ್ಲಿ ಬರೀ ಹರಿಜನರೇ ಅಲ್ಲಿ ಅಗಸರ ಕ್ಯಾತಪ್ಪ, ಹಾಗೂ ಬುಡ ತಿಮ್ಮಯ್ಯ, ತಳವಾರ ಕ್ಯಾತಪ್ಪ, ಪ್ರತಿಯೊಬ್ಬರು ಸೇರಿ ಕಳ್ಳಭಟ್ಟಿ ತಯಾರಿಸಿ ಸಮಾಜದಲ್ಲಿ ಕದ್ದು ಮುಚ್ಚಿ

ಕುಡಿಯುವಂತಹ ಇವರಿಗೆ ತಮ್ಮೂರಲ್ಲಿ ಪಂಚಾಯತಿ ಕಟ್ಟೆಯಿಂದ ಶಿಕ್ಷೆ ಒಳಪಡಿಸುವುದು ಇದ್ದುದ್ದನ್ನು ಸಮಾಜಿಕ ಹಿನ್ನೆಲೆಯಲ್ಲಿ ಕಾಣಬಹುದು. ಊರೆಲ್ಲ ತಮ್ಮ ಸಂಪ್ರದಾಯಿಗಳಿಗೆ ವಿರುದ್ಧವಾದಂತಹ ಅನೈತಿಕ ಚಟುವಟಿಕೆಗಳನ್ನು ಮಾಡಿದವರೆ ನೂರು ರೂಪಾಯಿ ದಂಡ ವಿಧಿಸಿ, ಅವರನ್ನು ಊರಿಂದ ಹೊರ ಹಾಕುವುದು ಸಮಾಜದಲ್ಲಿ ಇಂತಹ ನ್ಯಾಯಾಂಗ ಪದ್ಧತಿಯಾಗಿದೆ.

ದಲಿತ ಹೆಂಗಸರು ಸಮಾಜದಲ್ಲಿ ಸೋಬಾನೆಯ ಪದಗಳು ಹಾಡುತ್ತಾ ಊರಲ್ಲಿ ಯಾವುದಾದರೂ ಕಾರ್ಯಕ್ರಮಗಳು ಜರುಗಿದಾಗ ಲೇಖಕರ ದೊಡ್ಡಪ್ಪನಿಗೆ ಇಬ್ಬರು ಹೆಂಡತಿಯರು ಇವರು ತಮ್ಮ ಹಳ್ಳಿಯ ಸುತ್ತಲೂ ಹೆಸರುವಾಸಿಯಾಗಿದ್ದ ಹಳ್ಳಿಯಲ್ಲಿ ಯಾವುದೇ ಕಾರ್ಯಗಳು ನಡೆದರೆ ಯಾರದೇ ಮದುವೆ ಅಥವಾ ಮೈನೆರದ ಹುಡುಗಿಯರಿಗೆ ಒಸುಗೆ ಹಾಕುವುದಿದ್ದರೆ, ಅಲ್ಲಿ ಇವರಿಬ್ಬರ ಕಂಚಿನ ಕಂಠದಿಂದ ಹೊರಡುತ್ತಿದ್ದ ಸೋಬಾನೆ ಮತ್ತು ಒಸುಗೆ ಪದಗಳೇ ಮಂಗಳವಾದ್ಯಗಳಂತೆ ಕೇಳಿಬರುತ್ತಿತ್ತು. ಇವರಿಗೆ ಶ್ರುತಿ ಇಡಲು ಒಬ್ಬರು ಮತ್ತು ಬಾಯಿ ತುಂಬ ಎಲೆ–ಅಡಿಕೆ ಸಿಕ್ಕರೆ ಸಾಕು, ರಾತ್ರಿಯಲ್ಲಾ ಹಾಡಿದರೂ ಇವರ ಧ್ವನಿಗೆ ಆಯಾಸವೆಂಬುದೇ ಇರುತ್ತಿರಲಿಲ್ಲ, ಕರಿಯಮ್ಮ ಸೋಬಾನೆ, ಬಸಣೆ ಮತ್ತು ತತ್ವಪದಗಳ ಹಾಡುಗಾರ್ತಿಯಾಗಿದ್ದಂತೆ ನಮ್ಮ ಹಟ್ಟಿಗೆ ಗೈನಾಕಾಲಜಿ ಸ್ಪೆಲಿಸ್ಟ್ ಕೂಡ ಆಗಿದ್ದರು."[೧೫] ತುಂಬಾಡಿ ರಾಮಯ್ಯನವರ ತಮ್ಮ ಸಮುದಾಯ ಸಾಮಾಜಿಕ ಬದುಕಿನಲ್ಲಿ ಜಾನಪದ ಅಂಶಗಳಾದ ಸೋಬಾನೆ, ತತ್ವಪದಗಳನ್ನು ಹಾಡುವ ಮೂಲಕ ಇದರಿಂದ ಅವರ ಒಂದೊತ್ತಿನ ಊಟ ಬಾಯಿಗೆ ಎಲೆ ಅಡಿಕೆ ಕೊಟ್ಟರೆ ತಮ್ಮ ಸೇವೆಯನ್ನೇ ಮಾಡುತ್ತಾ ಬದುಕುವ ಹಾಗೂ ಊರಿನಲ್ಲಿ ಯಾರಾದರೂ ದಲಿತ ಮನೆಯಲ್ಲಿ ಹೆರಿಗೆಯಾಗಲಿ ಅಥವಾ ಬಸುರಿ ಬಾಣಾಂತಿಯವರಿಗೆ ಸಣ್ಣ ಪುಟ್ಟ ಕಾಯಿಲೆಗಳಾದರೆ ಇವರೆ ಚಿಕಿತ್ಸೆ ಕೊಡುತ್ತಿದ್ದನ್ನು ಆತ್ಮ ಕಥನದಲ್ಲಿ ತಿಳಿಸಿದ್ದಾರೆ.

ತುಂಬಾಡಿ ರಾಮಯ್ಯನವರು ತಮ್ಮ ಆತ್ಮಕಥನದಲ್ಲಿ ಹಳ್ಳಿಯಲ್ಲಿ ನಡೆಯುವ ಹಬ್ಬ–ಹರಿದಿನಗಳಲ್ಲಿ ಮಾರಿ ಹಬ್ಬದ ಸಂದರ್ಭದಲ್ಲಿ ಹರಿಜನರು ಊರಿಗೆ ಒಳ್ಳೆಯದಾಗಲಿ ಎಂದು ಭಕ್ತಿಯಿಂದ ಸರಗೂ ಹಾಗುವುದು. ಊರಿನ ಚಾಕ್ರಿಯನ್ನು ಮಾಡುವುದು ಪ್ರಮುಖ ಕೆಲಸಗಳನ್ನು ಮಣೆಗಾರರೆ ಮಾಡಿದರೂ ಅವರನ್ನು ಸಮಾಜದ ಕೆಳಸ್ಥಾನದಲ್ಲಿ ಇಟ್ಟು. ಅಸ್ಪೃಶ್ಯತೆಯಿಂದ ಜಾತಿನಿಂದನೆ ಮಾಡುವಂತಹ ಅಸಕರವಾದ ಸ್ಥಿತಿಯಲ್ಲಿ ದಲಿತರನ್ನು ಶೋಷಣೆ ಮಾಡುವಂತಹ ಸಾಮಾಜಿಕ ಬದುಕಿನ ಬಗ್ಗೆ ಚಿತ್ರಿಸಿದ್ದಾರೆ.

ಸಮಾಜದಲ್ಲಿ ಇಂದಿಗೂ ಹರಿಜನರನ್ನು ಊರಲ್ಲಿರುವ ದೇವಸ್ಥಾನಗಳ ಒಳಗಡೆ ಪ್ರವೇಶವಿಲ್ಲದಿರುವುದು ನೋಡುತ್ತೇವೆ. ಅಂತಹದೆ ಸ್ಥಿತಿಯನ್ನು ತುಂಬಾಡಿ ರಾಮಯ್ಯನವರು ಆತ್ಮಕಥನದಲ್ಲಿ ಹರಿಜನರನ್ನು ನಿಂದನೆ ಮಾಡುವ ಮೂಲಕ ದೇವಸ್ಥಾನಗಳಲ್ಲಿ ಒಳಗಡೆ ಬಿಟ್ಟುಕೊಳ್ಳದಿರುವುದನ್ನು ಚಿತ್ರಿಸಿದ್ದಾರೆ.

ನಮ್ಮೂರ ಗುಡಿಯನ್ನು ಕಟ್ಟಿದೋರು ಯಾರಣ್ಣ?
ಕಟ್ಟಿದಾ ನಮ್ಮ ನ್ನೆಲ್ಲಾ ಹೊಲೆ ಮಾದಿಗ್ರಂತಾರೆ
ನಾವೆ ಕಟ್ಟಿದ ಗುಡಿಗೆ ನಾವೆ ಹೋಗಾಂಗಿಲ್ಲ
ಯಾಕೆಂತ ಕೇಳಿದರೆ ನೀವು ಹೊಲೆ ಮಾದಿಗ್ರಂತಾರೆ!

ತಮ್ಮ ಊರಲ್ಲಿ ದೇವಸ್ಥಾನಗಳನ್ನು ಹರಿಜನರ ಕಟ್ಟುತ್ತಾರೆ. ಆದರೆ ದೇವಸ್ಥಾನದ ಒಳಕ್ಕೆ ಹೊಲೆ ಮಾದಿಗರು ಹೋಗುವ ಹಾಗಿಲ್ಲ ಯಾಕೆಂದರೆ ಇವರು ಕೆಳ ಜಾತಿಯವರು ಜನ ದನತಿನ್ನೋವ ಜಾತಿ ಎಂದು ದೇವಸ್ಥಾನದ ಒಳಕ್ಕೆ ಪ್ರವೇಶವಿಲ್ಲ ಎಂದು ಸಾಮಾನ್ಯವಾಗಿ ಹೇಳುವುದು, ಇಂತಹ ಸ್ಥಿತಿಯಲ್ಲಿದ್ದ ಹರಿಜನರು ತಾವು ಸಮಾಜದಲ್ಲಿ ಅನುಭವಿಸಿದ ಕಷ್ಟಗಳನ್ನು ಈ ರೀತಿಯಾಗಿ ಹೇಳಿದ್ದಾರೆ.

'ನಮ್ಮ ಊರಿನ ಮಧ್ಯದಲ್ಲಿರುವ ಆಂಜನೆಯನ ದೇವಸ್ಥಾನ (ಇದನ್ನು ದೊಡ್ಡ ಗುಡಿ ಎಂದು ಕರೆಯುತ್ತಾರೆ) ಶಿಥಿಲವಾಗಿ ಬೀಳುವ ಸ್ಥಿತಿಯಲ್ಲಿತ್ತು. ಅದನ್ನು ಕಿತ್ತು ಅದೆ ಜಾಗದಲ್ಲಿ ಹೊಸ ದೇವಸ್ಥಾನ ಕಟ್ಟಲು ಊರಿನ ಜನ ತಿರ್ಮಾನಿಸಿದ್ದರು. ನಮ್ಮೂರಿನವರೇ ಆದ ಕಂಟ್ರಾಕ್ಟರ್ ದೊಡ್ಡಣ್ಣನವರಿಗೆ ದೇವಸ್ಥಾನ ಕಟ್ಟುವ ಜವಾಬ್ದಾರಿ ವಹಿಸಿದ್ದರು. ಹಳೆ ದೇವಸ್ಥಾನವನ್ನು ಕೆಡವಿ ಗರ್ಭಗುಡಿಯಿಂದ ಹೊಸದಾಗಿ ಕಟ್ಟಲು ಕೆಲಸ ಪ್ರಾರಂಬಿಸಬೇಕಾಗಿತ್ತು. ಆಗ ನಾನು ಕೊರಟಗೇರಿಯಲ್ಲಿ ಪಿ.ಯು.ಸಿ. ಓದುತ್ತಿದ್ದೆ. ನನಗೆ ಬೇಸಿಗೆ ರಜೆ ಇದ್ದುದರಿಂದ ದೊಡ್ಡಣ್ಣನವರ ಹತ್ತಿರ ದೇವಸ್ಥಾನ ಕಟ್ಟುವ ಕೆಲಸಕ್ಕೆ ಸೇರಿದೆ. ಹಳೇ ದೇವಸ್ಥಾನದ ಗೋಡೆಯ ಕಲ್ಲುಗಳನ್ನು ಕಿಳುವ ಕೆಲಸವನ್ನು ನನಗೆ ವಹಿಸಿದ್ದರು. ಆ ಕೆಲಸವನ್ನು ಒಬ್ಬನೇ ಮಾಡಬಹುದಾಗಿದ್ದರಿಂದ, ದೊಡ್ಡಣ್ಣನವರು ನನ್ನೊಬ್ಬನನ್ನೇ ನೇಮಿಸಿದರು.'[೧೬] ಇಂತಹ ಊರಿನ ಚಾಕರಿಯನ್ನು ದಲಿತರು ಮಾಡುತ್ತಿದ್ದ, ಹಳೆಯ ದೇವಸ್ಥಾನಗಳನ್ನು ಕಿಳುವುದು, ಇದನ್ನು ಕಟ್ಟಲು ಕಲ್ಲು ಎತ್ತಿಕೊಡುವ ಕೆಲಸಗಳನ್ನು ಹರಿಜನರ ಮಾಡಿದರು. ದೇವಸ್ಥಾನ ಕಟ್ಟುವುದು ಮುಗಿದ ನಂತರ ದೇವಸ್ಥಾನದ ಒಳಗಡೆ ಪ್ರವೇಶ ಹರಿಜನರು ಇಲ್ಲದಿರುವುದು ಸಮಾಜದಲ್ಲಿ ದಲಿತರನ್ನು ಅಸ್ಪೃಶ್ಯತೆಯಿಂದ ಮತ್ತು ಅಸಮಾನತೆ ದೃಷ್ಠಿಯ ಮೂಲಕ ನೋಡುವುದನ್ನು ವಿವರಿಸಿದ್ದಾರೆ.

ಕೇರಿಯಿಂದ ತೇರಿಗೆ

ಯಲ್ಲಪ್ಪ ಕೆಕೆಪುರವರು ಆತ್ಮಕತೆಯಲ್ಲಿ ತಮ್ಮ ಕುಟುಂಬವು ಬದುಕಿದ್ದ ಹಾಗೂ ಸಮಾಜದಲ್ಲಿ ಮಾದಿಗ ಜನಾಂಗವನ್ನು ಮೇಲ್ವರ್ಗದ ಜನರು ತಮ್ಮ ದಬ್ಬಾಳಿಕ, ಶ್ರೀಮಂತಿಕೆಯಿಂದ, ಶೋಷಣೆ ಮಾಡುವಂತಹ ಸ್ಥಿತಿಯನ್ನು, ಬಡತನದಿಂದ ದಲಿತರ ಸಾಹುಕಾರರ ಹೊಲ ಮನೆಯಲ್ಲಿ ಮಾಡಿದರು. ಅಸಮಾನತೆ, ಅಪಮಾನಗಳನ್ನು ಮಾಡುತ್ತಿದ್ದನ್ನು ಬಾಲ್ಯದಲ್ಲಿ ಕಂಡಂತಹ ಅನುಭವಗಳನ್ನು ದಾಖಲಿಸಿದ್ದಾರೆ.

'ನನ್ನೂರಲ್ಲಿ ವಿಚಿತ್ರವಾಗಿದ ಶೋಷಣೆಯಿತ್ತು. ಸಾಲಕೊಟ್ಟು ಶೂಲಕ್ಕೇರಿಸುವ ಪರಿಯಿತ್ತು. ಆದರೆ ಮದುವೆಗೆ ಮಾಡಿದ ಸಾಲ, ಹಬ್ಬ ಇತ್ಯಾದಿಗಳಿಗೆ ಸಾಲ ಮಾಡಿದರೆ ಧಣಿಯ ಮನೆಯಲ್ಲಿ ಸಾಲತಿರುವತನಕ ಗಂಡು ಮತ್ತು ಹೆಣ್ಣಾಳು ಖಾಯಂ ಆಗಿ ದುಡಿಯಬೇಕು. ಬೆಳಿಗ್ಗೆ, ಅಂಗಳ ಕಸಗೂಡಿಸಿ, ಸಗಣಿ ಗಂಟ ಎಲ್ಲಾ ಹೊತ್ತಾಕಿ ಹೊಲದಿಂದ ಸೊಪ್ಪೆ, ಹುಲ್ಲು, ಕಟ್ಟಿಗೆ ತಂದು ಹಾಕಬೇಕು. ಕೈಕಾಲು ತೊಳೆದುಕೊಂಡು ತಂಗಳು ತಿನ್ನಬೇಕು. ಹೊಲಗದ್ದೆ ತೋಟದಲ್ಲಿ ಇಬ್ಬರೂ ದುಡಿದು ಮಧ್ಯಾಹ್ನ, ಸಂಜೆ ಧಣಿ ಕೊಟ್ಟಿದ್ದನ್ನು ಉಣ್ಣಬೇಕು, ಸಂಜೆ ದಣಿ ಮನೆಯಲ್ಲಿ ಕಸ, ಮುಸುರೆ, ದನ, ಕರ, ಕಟ್ಟು, ಬೀಸುವ ಕೆಲಸದಲ್ಲಿ ಪಾಲ್ಗೊಂಡು ಮತ್ತು ಧಣಿಕೊಡುವ ಊಟ, ತಿನ್ನಬೇಕು, ರೂಪಾಯಿ ಮಾತ್ರ ಹಬ್ಬ ಹುಣ್ಣಿಮೆ ದಿನ ಸಿಹಿ ಅಡುಗೆಯ ಜೊತೆಗೆ ಹಳೆ ಸೀರೆ, ಕುಬ್ಬಸ, ಅಂಗಿ, ಪಂಚೆ ಪಡೆಯುವುದರ ಜೊತೆಗೆ ವರ್ಷಕೊಮ್ಮೆ ಇಬ್ಬರಿಗೂ ಬಟ್ಟೆ ತರುವ ಸಂಪ್ರದಾಯವಿತ್ತು. ಕೊಟ್ಟ ಸಾಲಕ್ಕೆ ಇಬ್ಬರೂ ಹಣ ಸಂದಾಯ ಮಾಡಬಹುದು. ಕೊಟ್ಟ ಸಾಲಕ್ಕೆ ಬಡ್ಡಿ.'[೧೭] ಅತಿ ಘೋರವಾದ ಬಡತನದಿಂದ ದಲಿತರು ಉಳ್ಳವರಿಂದ ಸಾಲ ಪಡೆದು ಸಾಲ ತೀರಿಸುವುದಕ್ಕೆ ಸಾಹುಕಾರರ ಮನೆಯಲ್ಲಿ ಕುಟುಂಬದಲ್ಲಿ ಕೂಲಿ ಮಾಡುವ ಮೂಲಕ ಸಾಲ ತಿರುವತನಕ ಗುಲಾಮರಾಗಿ ದುಡಿಯಬೇಕು. ಕಷ್ಟಪಟ್ಟು ಬೆವರು ಸುರಿಸಿ ದುಡಿದ ಇವರಿಗೆ ಧಣಿಗಳ ಮನೆಯಲ್ಲಿನ ತಂಗಳನ್ನವನ್ನು ನೀಡುತ್ತಿದ್ದು ಹಾಗೂ ಹಳೆಯ ಸೀರೆ, ಕುಬ್ಬಸ, ಅಂಗಿ, ಪಂಜೆಗಳನ್ನು ದಲಿತರಿಗೆ ಕೊಡುತ್ತಿದ್ದ. ಅನಕ್ಷರತೆ, ಮೌಢ್ಯತೆಯಿಂದ ಸಮಾಜದ ಪರಿಜ್ಞಾನವಿಲ್ಲದ ದಲಿತರನ್ನು ಕಡಿಮೆ ಕೂಲಿ ಕೊಡುವುದರ ಮೂಲಕ ಶೋಷಣೆ ಮಾಡುವಂತಹದ್ದು ಸಮಾಜದಲ್ಲಿ ಕಂಡುಬರುತ್ತದೆ.

ದಲಿತರು ಊರಿನಲ್ಲಿ ಮಾದಿಗತನಕ್ಕೆ ಯಾವುದಾದರೂ ಮನೆಯನ್ನು ಗೊತ್ತುಪಡಿಸಿಕೊಂಡು. ಅವರ ಕಣದಲ್ಲಿ ಕಾಳು ತುಳಿಸುವುದು, ಇದರಲ್ಲಿ ಉಳಿದ ನೆಲದಲ್ಲಿನ ಕಾಳನ್ನು ದಲಿತರು ಪಡೆಯುತ್ತಿದ್ದರು. ಇದರ ಫಲವಾಗಿ ದಲಿತರಿಗೆ ಹೊಸ, ಚಪ್ಪಲಿ, ಬಾರಿಕೋಲು, ಮೀಣಿ ಬಾರುಗಳವು. ಕಡ್ಲೆ ಬಾನೆ ಮಾಡಿಕೊಡುತ್ತಿದ್ದರು. ಸಾವುಕಾರರು ಸತ್ತ ದನಗಳನ್ನು ಕೊಡುತ್ತಿದ್ದರು ಇದರಿಂದ ದಲಿತರು ಕೆಳಸ್ತರದಲ್ಲಿ ಇದ್ದುಕೊಂಡು ಸಮಾಜದಲ್ಲಿ ಅಪಮಾನಗಳಂದ ಬದುಕುತ್ತಿದ್ದರು.

ದಲಿತರು ಊರುಗಳಲ್ಲಿ (ಕಷ್ಟ) ಕೆಲಸವನ್ನು (ಕ್ಷೌರ) ಮಾಡುತ್ತಿರಲ್ಲ ಅಸ್ಪೃಶ್ಯತೆಯಿಂದ ಮೇಲ್ವರ್ಗದವರಿಗೆ ಮಾತ್ರ ಹಜಾಮ ವೃತ್ತಿಯವರು ಕ್ಷೌರವನ್ನು ಮಾಡುತ್ತಿದ್ದರು. ಮಾದಿಗರ ತಮ್ಮ ಮನೆಯಲ್ಲಿ ತಂದೆಯು ಮಕ್ಕಳಿಗೆ ತಲೆ ನುಣ್ಣಗೆ ಬೋಳಿಸುತ್ತಾ ತಮ್ಮ ಕೆಲಸವನ್ನು ತಾವೆ ಮಾಡಿಕೊಳ್ಳುತ್ತಿರುವಂತಹ ಸಾಮಾಜಿಕ ಬದುಕನ್ನು ದಾಖಲಿಸಿದ್ದಾರೆ. ಲೇಖಕ ಶಾಲೆಗೆ ಸೇರಿದಾಗ ಶಿಕ್ಷಕರು ವಿದ್ಯಾರ್ಥಿಗಳನ್ನು ತಾರತಮ್ಯವನ್ನು ಮಾಡುವಂತಹ ಸಾಮಾಜಿಕ ಅಸಮಾನತೆಯ ವಿರುದ್ಧ ಪ್ರತಿಪಾದಿಸಿರುವುದನ್ನು 'ಶಾಲೆಗೆ ನನ್ನ ಎಳೆದುಕೊಂಡು ಬಿಟ್ಟುಬಂದ ಶಾಲೆಯೆಂದರೆ ನನಗೆ ಬಂಧಿಖಾನೆಯಾಗಿತ್ತು. ನನ್ನ ಕೇರಿಯವರು ಅಲ್ಲಿ ಇರಲಿಲ್ಲ. ಎಲ್ಲಾ ಅಪರಿಚಿತರೇ.

ಸುವಾಸನೆಯಿಂದ ಉಸಿರುಗಟ್ಟುತ್ತಿತ್ತು. ನನ್ನನ್ನು ಯಾರು ಮುಟ್ಟಿಸಿಕೊಳ್ಳುತ್ತಿರಲಿಲ್ಲ. ನಿರಡಿಕೆ ಯಾದರೆ, ಬೊಗಸೆಗೆ ಮೇಲಿಂದ ನೀರು ಎತ್ತಿ ಹಾಕುತ್ತಿದ್ದರು. ನನ್ನನ್ನು ಚಿಪ್ಪಾಂಜಿಯಂತೆ ನೋಡುತ್ತಿದ್ದರು. ಎಲ್ಲಾರೂ ಕಟ್ಟಿಗೆ ಮಣೆ ಮೇಲೆ ಕುಂತಿರುತ್ತಿದ್ದರು. ನಾ ಮಾತ್ರ ದೂರದ ನೆಲದ ಮೇಲೆ ಕುಂತಿರುತ್ತಿದ್ದೆ. ಒಬ್ಬನೆ ಆಡಬೇಕು, ಜೈಲೆನಿಸಿತು, ಮನೆಯಲ್ಲಿದ್ದಂತೆ ಇರಲು ಆಗದೆ, ವಿಲವಿಲ ಬಿದ್ದಾಡುತ್ತಿದ್ದೆ. ಅಕ್ಷರ ತಿದ್ದುವ, ಬರೆಯುವ ಕೆಲಸ ನನಗೆ ಆಗದ ಕೆಲಸವೆನಿಸಿತು. ಚಿತ್ತದಿಂದ ಸ್ಲೇಟಿನಿಂದ ಬೆರಳುಗಳ ಗಣ್ಣಿಗೆ ಹೊಡೆಯುತ್ತಿದ್ದರು. ಬಗ್ಗಿಸಿ ನಿಲ್ಲಿಸುತ್ತಿದ್ದರು ನರಕವೆಂದರೆ... ಇದೇ ಏನೋ ಅನಿಸಿತು.'[೧೮] ಬಾಲ್ಯದಲ್ಲಿ ಸಮಾಜದ ತಿಳುವಳಿಕೆ ಗೊತ್ತಿಲ್ಲ. ವಿದ್ಯಾರ್ಥಿಗಳನ್ನು ಶಾಲೆಯಲ್ಲಿ ಶಿಕ್ಷಕರು ಅಸಮಾನತೆಯಿಂದ, ಎಲ್ಲಾ ವಿದ್ಯಾರ್ಥಿಗಳಿಂದ ಪ್ರತ್ಯೇಕವಾಗಿ ಬರಿ ನೆಲದ ಮೇಲೆ ಮಾದಿಗ ಜಾತಿಯ ವಿದ್ಯಾರ್ಥಿಯನ್ನು ಕುಡ್ರಿಸುವುದು ಹಾಗೂ ದಲಿತರಿಗೆ ಬೊಗಸೆಯಲ್ಲಿ ಕುಡಿಯಲು ನೀರು ಹಾಕುವಂತಹ. ದಲಿತರ ಮನುಷ್ಯರಾದ್ದರು ಅವರನ್ನು ಮುಟ್ಟದೆ ಕೋಲಿನ ಮುಖಾಂತರ ಮುಟ್ಟುವುದನ್ನು ವಿದ್ಯಾವಂತರಾದರೂ ಇಂತಹ ಶಾಲೆಯಲ್ಲಿ ವಾತಾವರಣದ ಬಗ್ಗೆ ತಿಳಿಸಿದ್ದಾರೆ.

'ಯುಗಾದಿ ಹಬ್ಬವಾದ ಎರಡು ವಾರಗಳಾದ ನಂತರ ಬರುವ ದೊಡ್ಡ ಹಬ್ಬವೆಂದರೆ ಹಂಪೆ ಹುಣ್ಣಿಮೆ... ಜಾತ್ರೆ ನನ್ನಳ್ಳಿಯ ಪಕ್ಕದೂರದ ರಾಂಪುರದಲ್ಲಿ ಪ್ರತಿವರ್ಷಕೊಮ್ಮೆ ಈ ಜಾತ್ರೆ ಜರುಗುತ್ತಿತ್ತು. ಇದು ಸುತ್ತ ಏಳು ಹಳ್ಳಿಗೆ ಪ್ರಸಿದ್ದ ಪಡೆದಿತ್ತು. ತೇರು ಎಳೆದ ದಿನದಿಂದ ವಾರ ಗಟ್ಟಲೆ ಜನ ದೊಡ್ಡ ಜಾತ್ರೆಯಾಗುತ್ತಿತ್ತು. ಜಾತ್ರೆಗೆ ಮೊದಲೆ ಸರ್ಕಸ್, ನಾಟಕ ಕಂಪನಿ, ಸಿನಿಮಾ ಟೆಂಟ್, ಹಾಕುತ್ತಿದ್ದರು. ಸ್ವರ್ಗ ಲೋಕ ಇಳಿಯುತ್ತಿತ್ತು. ಜಾತ್ರೆಗೆ ಮನೆಯ ಹೆಣ್ಣು ಮಕ್ಕಳನ್ನು ಕಡ್ಡಾಯವಾಗಿ ಕರೆತರುವ ಸಂಪ್ರದಾಯ ಕಡ್ಡಾಯ ವಾಡಿಕೆ. ತೆರಿನ ಕೆಲಸ ನೋಡಿದರೆ ಪಾಪ ಪರಿಹಾರ ದರಿದ್ರ ದೂರ ವಾಗಬಹುದೆಂಬ ನಂಬಿಕೆ.'[೧೯] ಊರಲ್ಲಿ ಹಬ್ಬವಾಯಿತು ಎಂದರೆ ಅದಕ್ಕೆ ಪೂರ್ವ ತಯಾರಿ ಮಾಡುವುದು ಸರ್ವೆಸಾಮಾನ್ಯ ಜಾತ್ರಿ ಹಬ್ಬಗಳಲ್ಲಿ ಮನೆಯ ಹೆಣ್ಣು ಮಕ್ಕಳನ್ನು ಕರೆದುಕೊಂಡು ಬಂದು ಕುಟುಂಬದವರೆಲ್ಲ ಜಾತ್ರೆ ಮಾಡುವುದರಿಂದ ಸಂಬಂಧಿಕರೆಲ್ಲರನ್ನು ನೋಡಿದ ಹಾಗೆ ಆಗುತ್ತ ಮತ್ತು ಕಷ್ಟ ಸುಖಗಳನ್ನು ಹಂಚಿಕೊಳ್ಳುವುದರ ಜೊತೆಗೆ ಜಾತ್ರೆಯಲ್ಲಿ ಸರ್ಕಸ್, ಸಿನಿಮಾ, ಮುಂತಾದ ಮನರಂಜನೆಯ ಕಾರ್ಯಕ್ರಮಗಳನ್ನು ವಿಕ್ಷಿಸುತ್ತಾ ಮನಶಾಂತಿ ಪಡೆಯುತ್ತಿದ್ದಸು ಸಮಾಜಿಕ ಬದುಕಿನಲ್ಲಿರುವುದು ನೋಡಬಹುದು.

ಊರಲ್ಲಿ ಹಬ್ಬಗಳನ್ನು ಆಚರಿಸುತ್ತಾ ತಮ್ಮ ಮನಸ್ಸಿಗೆ ನೆಮ್ಮದಿ ಪಡೆಯುತ್ತಿರುವಂತ ಅಂಶಗಳನ್ನೊಳಗೊಂಡಂತೆ. ಊರಲ್ಲಿ ಯಾವುದಾದರೂ ಗಲಾಟೆ, ಕಳ್ಳತನ ಆದಂತಹ ಸಂದರ್ಭದಲ್ಲಿ ಊರಿನ ಪಂಚಾಯಿತಿಯ ಮೂಲಕ ನ್ಯಾಯ ತಿರ್ಮಾನಗಳನ್ನು ಮಾಡುವ ಪದ್ದತಿಯ ಇದ್ದುದನ್ನು ಕಾಣಬಹುದು. ಜೋಳ ಕಳುವಾದವು ಊರು-ಕೇರಿಯಲ್ಲಿ ಮನೆ, ಬಿಡದಲೆ

ಹುಡುಕುತ್ತಾ ಬಂದರು ನಮ್ಮ ಮನೆಯಲ್ಲಿ ಚೀಲ, ವಾಡೇವು, ಅಡ ಅಲಗಡಿಗೆ, ಗುಮ್ಮೆ ಹಗೆವು ಡಿಕ್ಕೆ ಕಣಜಗಳಲ್ಲಿ ಹುಡು ಅದರ ಶ್ರೀಮಂತಿಕೆಯ ಜೊತೆಗೆ ಅಪ್ಪನಲ್ಲಿ ವಿನಯವಂತಿಕೆಯು ಇತ್ತೂ ಕೈ ಬಾಯಿ, ಕಚ್ಚೆ ಹುದ್ದವಿದ್ದರೆ ಈ ಜಗತ್ತನ್ನೆ ನಾಜಯಿಸಿ ಬರುವೆ ಮರುಗೀ ಈ ಊರಿನ ಗೌಡ, ಕುಲಕರ್ಣಿ ಶಾನಬೋಗರನ್ನೇ ಮೆಚ್ಚಿನ ಬಲ್ಲೆನೆಂದು ಅಪ್ಪನ ಹತ್ತಿರ ಹೇಳುತ್ತಿದ್ದರು. ಕಳ್ಳತನವಾದ ಜೋಳ ಹಳ್ಳದ ಪೊದೆಯಲ್ಲಿ ಬಚ್ಚಿಟ್ಟವರು ಸಿಕ್ಕ ಬಿದ್ದರು! ಊರಾ ಚಾವಡಿ ಕಂಬಕ್ಕೆ ಸಾಲಗಿ ದನ, ಕರು, ಎತ್ತೂ ಎಮ್ಮೆಗಳನ್ನು ಕಟ್ಟಿದಂತೆ ಕಟ್ಟಿ ಬಾರ್ಕೋಲು, ನಗಸುತ್ತ ಬಂಡಿಗೂಟ ಮುರಿಯುವ ತನಕ ಬಡಿದರು, ರಕ್ತ ತಲೆಗಳಲ್ಲಿ ಬೆನ್ನ ಹಿಂದೆ ಚಿಮ್ಮಿ ಬಂತು. ಅಳುವ ರೋದು ಅಕ್ರಂದನ ಮುಗಿಲು ಮುಟ್ಟಿತು. ಉಳ್ಳವರು, ಎತ್ತವರು, ಕಳ್ಳತನ ಮಾಡಿದ್ದು ತಪ್ಪು, ಜೈಲಿಗೆ ಕಳುಹಿಸಬೇಕಾಗಿರುವುದನ್ನು ಊರಿನ ಧಣಿಗಳಿಗೆ ಪಟ್ಟು ಹಿಡಿದರು. ಅಪ್ಪ ಪಂಚಾಯಿತಿಯಲ್ಲಿ ಧಣಿಗಳ ಮನಗೆದ್ದ ತಾನು ಜೈಸಿಕೊಂಡು ಕಳ್ಳರಿಗೆ ಜೈಲು ಶಿಕ್ಷೆ ತಪ್ಪಿಸಿದ.[೨೦]

ಕೆಕೆಪುರದಲ್ಲಿ ಸಮಾಜಕ್ಕೆ ವಿರುದ್ದವಾದಂತಹ ಚಟುವಟಿಕೆಗಳಾದ ಕೆಟ್ಟತನ ಜಗಳಗಳು ಮಾಡಿದವರಿಗೆ ತಪ್ಪದಸ್ಥ ವ್ಯಕ್ತಿಗಳಿಗೆ ಕಂಬಕ್ಕೆ ಕಟ್ಟಿ ಹಾಕಿ ಒಡೆದು ಜೈಲಿಗೆ ಕಳುಹಿಸುವಂತಹ ತಿರ್ಮಾನಗಳನ್ನು ಕೈಗೊಳ್ಳುತ್ತಿದ್ದರು. ಇಂತಹ ಸಂದರ್ಭದಲ್ಲಿ ಸಾಹುಕಾರನೆನಸಿ ಕೊಂಡಿದ್ದ ದಲಿತರು ಯಲ್ಲಪ್ಪನವರು ಧಣಿಗಳ ಊರ ಮುಖಂಡರ ಮನಸ್ಸು ಗೆಲ್ಲುವುದರ ಮೂಲಕ ತಪ್ಪಿತಸ್ಥರಿಗೆ ಜೈಲು ಶಿಕ್ಷೆಯಿಂದ ಮುಕ್ತಿಗೊಳಿಸುತ್ತಿದ್ದಂತಹ ವ್ಯಕ್ತಿತ್ವವನ್ನು ಇಂದಿನವರು ಬಡವರಾಗಿ ಹುಟ್ಟಿ ಬೆಳೆದು ಕಷ್ಟ, ಸುಖಗಳ ಅರಿವು ಇದ್ದರಿಂದ ದಲಿತರಲ್ಲಿ ಮಾನವಿಯ ಮೌಲ್ಯಗಳು ಇರುವುದನ್ನು ಕಾಣಬಹುದು. ಮಾದಿಗ ಜಾತಿಯ ಸಮುದಾಯದವರು ಗಂಟಿಗಾರರ ಹೊಲಕ್ಕೆ ಕೆಲಸಕ್ಕೆ ಹೋದಾಗ ಊಟ ಮಾಡಿದ ನಂತರ ಕೈ ತೊಳೆಯಲು ಹಳಕ್ಕೆ ಕೈ ತೊಳೆದುಕೊಂಡು ಬರುವಂತಹ ಅಮಾನವಿಯತೆಯಿಂದ ದಲಿತರನ್ನು ದಮನ ಮಾಡುವಂತ ಮೇಲ್ವರ್ಗದವರ ಸಮಾಜಕ್ಕೆ ಬದುಕಿನ ಅಂಶಗಳನ್ನು ಹಾಗೂ ಶಾಲೆಯಲ್ಲಿ ದಲಿತ ವಿದ್ಯಾರ್ಥಿಗಳನ್ನು ಪ್ರಾರ್ಥನೆ, ಮಾಡುವಾಗಿ ಪ್ರತ್ಯೇಕ ಸಾಲಿನಲ್ಲಿ ನಿಲ್ಲಿಸಿ ಅಸಮಾನತೆಯಿಂದ, ತಾರತಮ್ಯ ಮಾಡುತ್ತಿದ್ದನ್ನು ನೋಡಿ ಇದರಿಂದ ಶಾಲೆ ಹೋಗದಿರಲು ಲೇಖಕರು ಹಿಂದೇಟು ಹಾಕುತ್ತಿದ್ದರು ಎಂದು ಕಂಡುಕೊಳ್ಳಬಹುದು.

ಅಡಿ ಟಿಪ್ಪಣಿಗಳು

೧. ಅರವಿಂದ ಮಾಲಗತ್ತಿ, ಗೌಮೆಂಟ್ ಬ್ರಾಹ್ಮಣ ಪುಟ,ಸಂ, ೨೦,೨೧

೨. ಅರವಿಂದ ಮಾಲಗತ್ತಿ, ಪುಸ್ತಕ, ಪು.ಸಂ. ೨೪

೩. ಅರವಿಂದ ಮಾಲಗತ್ತಿ, ಪುಸ್ತಕ, ಪು, ಸಂ, ೪೫

೪. ಅರವಿಂದ ಮಾಲಗತ್ತಿ, ಪುಸ್ತಕ, ಪು, ಸಂ, ೪೬

೫. ಅರವಿಂದ ಮಾಲಗತ್ತಿ, ಪುಸ್ತಕ, ಪು, ಸಂ, ೪೭

೬. ಅರವಿಂದ ಮಾಲಗತ್ತಿ, ಪುಸ್ತಕ, ಪು, ಸಂ, ೪೭

೭. ಸಿದ್ಧಲಿಂಗಯ್ಯ, ಊರು ಕೇರಿ, ಪುಟ, ಸಂ, ೦೯

೮. ಸಿದ್ಧಲಿಂಗಯ್ಯ, ಊರು ಕೇರಿ, ಪುಸ್ತಕ, ಪು, ಸಂ, ೩೫

೯. ಸಿದ್ಧಲಿಂಗಯ್ಯ, ಊರು ಕೇರಿ, ಪುಸ್ತಕ, ಪು, ಸಂ, ೨೧

೧೦. ತುಂಬಾಡಿ ರಾಮಯ್ಯ, ಮಣೆಗಾರ, ಪು, ಸಂ, ೧೦

೧೧. ತುಂಬಾಡಿ ರಾಮಯ್ಯ, ಮಣೆಗಾರ, ಪುಸ್ತಕ, ಪು,ಸಂ, ೨೪

೧೨. ತುಂಬಾಡಿ ರಾಮಯ್ಯ, ಮಣೆಗಾರ, ಪುಸ್ತಕ, ಪು,ಸಂ, ೨೬, ೩೭

೧೩. ತುಂಬಾಡಿ ರಾಮಯ್ಯ, ಮಣೆಗಾರ, ಪುಸ್ತಕ, ಪು,ಸಂ, ೩೫

೧೪. ತುಂಬಾಡಿ ರಾಮಯ್ಯ, ಮಣೆಗಾರ, ಪುಸ್ತಕ, ಪು,ಸಂ, ೩೬

೧೫. ತುಂಬಾಡಿ ರಾಮಯ್ಯ, ಮಣೆಗಾರ, ಪುಸ್ತಕ, ಪು,ಸಂ, ೫೯

೧೬. ಅದೇ ಪುಸ್ತಕ, ಪು,ಸಂ, ೬೨

೧೭. ಯಲ್ಲಪ್ಪ ಕೆರೆಪುರ(ಡಾ) ಕೇರಿಯಿಂದ ತೊರಿಗೆ, ಪು, ಸಂ, ೯೭

೧೮. ಅದೇ ಪುಸ್ತಕ,ಪು.ಸಂ, ೧೩

೧೯. ತುಂಬಾಡಿ ರಾಮಯ್ಯ, ಮಣೆಗಾರ, ಪುಸ್ತಕ, ಪು,ಸಂ, ೨೯

೨೦. ಅದೇ ಪುಸ್ತಕ, ಪು,ಸಂ, ೪೪

ಅಧ್ಯಾಯ ನಾಲ್ಕು

ಸಾಂಸ್ಕೃತಿಕ ಆಯಾಮ

ಅಧ್ಯಾಯ ನಾಲ್ಕು

ಸಾಂಸ್ಕೃತಿಕ ಆಯಾಮ

ಭಾರತದಲ್ಲಿ ಹಿಂದೂ ಧರ್ಮದಲ್ಲಿ ಬರುವಂತಹ ಪ್ರತಿಯೊಂದು ಸಮುದಾಯದಲ್ಲಿ ತಮ್ಮದೇ ಆದ ಸಂಸ್ಕೃತಿಯ ಆಚರಿಸುವುದನ್ನು ಕಾಣಬಹುದು. ಸಂಸ್ಕೃತಿ ಎಂದರೆ ಆಚಾರ-ವಿಚಾರ, ರೂಢಿ ಸಂಪ್ರದಾಯ, ಕಲೆ, ಭಾಷೆ, ಸಾಹಿತ್ಯ, ಇವುಗಳನ್ನು ಸಂಸ್ಕೃತಿ ಎನ್ನುವರು. ಸಂಸ್ಕೃತಿಯು ನಿಂತ ನೀರಲ್ಲ. ಕಾಲದಿಂದ ಕಾಲಕ್ಕೆ ಬದಲಾಗುತ್ತ ಹೋಗುತ್ತದೆ. ಸಂಸ್ಕೃತಿಯನ್ನು ಕುರಿತಂತೆ ದಲಿತ ಆತ್ಮಕಥನಗಳಲ್ಲಿ ಲೇಖಕರು ತಮ್ಮ ಸಮುದಾಯದ ಸಾಂಸ್ಕೃತಿಕ ಬದುಕಿನ ಅಂಶಗಳನ್ನು ಕಟ್ಟಿಕೊಟ್ಟಿರುವುದನ್ನು ಕಾಣಬಹುದು. ದಲಿತ ಆತ್ಮಕತೆಗಳಾದ ಗೌರ್ಮೆಂಟ್, ಬ್ರಾಹ್ಮಣ, ಊರುಕೇರಿ, ಮಣೆಗಾರ, ಕೇರಿಯಿಂದ ತೇರಿಗೆ ಇವುಗಳಲ್ಲಿ ದಲಿತ ಸಂಸ್ಕೃತಿಯ ಗುರುತಿಸುವುದು ಈ ಅಧ್ಯಯನದಲ್ಲಿ ಪ್ರಯತ್ನಿಸಿರುವೆ.

ಗೌರ್ಮೆಂಟ್ ಬ್ರಾಹ್ಮಣ ಆತ್ಮಕಥನದಲ್ಲಿ ಅರವಿಂದ ಮಾಲಗತ್ತಿಯವರು ತಮ್ಮ ಊರಿನ ಸಂಪ್ರದಾಯಗಳನ್ನು ಮತ್ತು ದಲಿತ ಸಂಸ್ಕೃತಿಯನ್ನು ಬಿಂಬಿಸಿರುವುದನ್ನು ಈ ರೀತಿಯಾಗಿ ವಿವರಿಸಿದ್ದಾರೆ. 'ದಲಿತ ಕೇರಿಗೂ ಊರ ಸಂಪ್ರದಾಯಗಳಿಗೂ ಆಶ್ಚರ್ಯಕರವಾದ ರೀತಿಯಲ್ಲಿ ಸಂಬಂಧಗಳಿವೆ. ಈ ಸಂಬಂಧಗಳು ದಲಿತರಿಗೆ ಮಾರಕವಾಗಿಯೂ ದಲಿತೇತರಿಗೆ ಪೂರಕವಾಗಿಯೂ ಕೆಲಸ ಮಾಡುತ್ತವೆ. ಊರಿನ ಪ್ರತಿಯೊಂದು ಕೆಲಸ ಕಾರ್ಯಗಳಲ್ಲಿ ದಲಿತರಿಗೆ ಅವಕಾಶ ಕೊಡಲಾಗಿದೆ ಎನ್ನುವ ನೆಪದಲ್ಲಿ ಅವರ ಬದುಕನ್ನು ಅಡಕೊತ್ತಿನಲ್ಲಿಟ್ಟು ಅಡಕೆಯಂತೆ ಕತ್ತರಿಸುತ್ತಾರೆ. ಈಗ ಕೆಳ ದರ್ಜೆಯಲ್ಲಿ ನೌಕರರಾಗಿ ಭರ್ತಿಯಾದಂತೆ ಹಿಂದೆ ಸಂಪ್ರದಾಯ ಕೆಲಸಗಳಿಗೆ ಭರ್ತಿಯಾಗುತ್ತಿದ್ದರು. ಅಂತಹ ಮನ ಕದಕುವ ಸಂಪ್ರದಾಯವೊಂದನ್ನು ಇಲ್ಲಿ ನಿವೇದಿಸುವೆ.

ನನ್ನ ಕೇರಿಯ ಹೆಂಗಸರಿಗೆ ಶ್ರಾವಣ ಮಾಸದ ಓಕಳಿ ಎಂದರೆ ಕೆಲವರಿಗೆ ಬಲು ಹಿಗ್ಗು ಕೆಲವರಿಗೆ ಕುಗ್ಗು ಸುತ್ತಮುತ್ತಲಿನ ಊರುಗಳಲ್ಲಿ ಬಿದರಕುಂದಿಯ ಓಕಳಿ ಎಂದರೆ ಪ್ರಸಿದ್ಧವಾದದ್ದು. ಈ ಸಂಪ್ರದಾಯದಲ್ಲಿ ಪಾಲ್ಗೊಳ್ಳುವವರು ನಮ್ಮ ಕೇರಿಯ ಹೆಂಗಸರೇ ಆಗಿದ್ದರು.

ಸಂಪ್ರದಾಯ ನಡುವಳಿ ಹೀಗಿದೆ, ದಲಿತ ಹೆಂಗಸರು ಕುಪ್ಪಸವನ್ನು ಕಳೆದು, ಅಂಡಗಚ್ಚೆ ಹಾಕಿದ ಸೀರೆಯನ್ನು ಉಟ್ಟಿರಬೇಕು. ಅಂದರೆ ನಡದ ಭಾಗಕ್ಕೆ ಮಾತ್ರ ಸೀರೆ ಸುತ್ತಿದ್ದು, ಸೆರಗು ತಲೆ ಮೇಲೆ ಬರುತ್ತದೆ. ಇವರ ಕೈಯಲ್ಲಿ ನೀಳವಾದ ಮಾರುದ್ದದ್ದ ಲಕ್ಕಿಯ ಹತ್ತಾರು ಜಬರಿಗಳಿರುತ್ತವೆ. ಇವರ ವಿರುದ್ಧ ಇನ್ನೊಂದು ಬಣ, ಇದರಲ್ಲಿ ದಲಿತೇತರ ಹಾಗೂ ಬ್ರಾಹ್ಮಣೇತರರಿಂದ ಕೂಡಿದ ಗಂಡಸರು ಮಾತ್ರ ಇರುತ್ತಿದ್ದ. ಅಂಡುಗಚ್ಚೆ ಹಾಕಿದ ಧೋತಿಯನ್ನು ತೊಡುತ್ತಾರೆ. ಕೈಯಲ್ಲಿ ದ್ಯಾಳದಿಂದ ಅಥವಾ ಸೆರೆಯಿಂದ ಲೇಪಿತವಾದ ಜೋಳಿಗೆ ಇರುತ್ತದೆ. ಈ ಗಂಡಸರಲ್ಲಿ ಸಾಮಾನ್ಯವಾಗಿ ಊರ ಪ್ರಮುಖ ಪುಂಡರೇ ಹೆಚ್ಚು. ದೇವಾಲಯದ ಎದುರು ಸಾಮಾನ್ಯವಾಗಿ ಈಗಲೂ ಕೆಲವಡೆ ಹಾಳುಬಿದ್ದ ಹೊಂಡಗಳನ್ನು ಗಮನಿಸಬಹುದು. ಈ ಹೊಂಡಗಳ ಸುತ್ತಮುತ್ತಲೂ ಕ್ರೀಡೆಯಾಗಿ ನಡೆಯುವುದು ಓಕುಳಿ. ಗಂಡಸರು ಅರಿಸಿಣ ಕುಂಕುಮಗಳಿಂದ ಕೂಡಿದ ಹೊಂಡದ ನೀರು ಜೋಳಿಗೆಯಲ್ಲಿ ತಂದು ಹೆಂಗಸರಿಗೆ ಹೊಡೆಯುತ್ತಾರೆ. ಕೈಯಲ್ಲಿ ನೀಳವಾದ ಜಬರಿಯನ್ನ ಹಿಡಿದು ನಿಂತು ಹೆಂಗಸರು ಈ ನೀರಿನ ಹೊಡೆತದಿಂದ ತಪ್ಪಿಸಿಕೊಂಡು ಜಬರಿಯಿಂದ ಗಂಡುಗಳಿಗೆ ಹೊಡೆಯಬೇಕು. ಇದೊಂದು ಬಗೆಯ ಸಂಪ್ರದಾಯಿಕ ಕ್ರೀಡೆ'[7] ಎಂಬ ದಲಿತರು ಮತ್ತು ಮೇಲ್ವರ್ಗದವರು ಓಕುಳಿ ಹಬ್ಬದಲ್ಲಿ ಸಂಸ್ಕೃತಿಯನ್ನು ಆಚರಿಸುತ್ತಿದ್ದ ಎಂಬುದನ್ನು ತಿಳಿಸಿದ್ದಾರೆ. ಹಾಗೂ ದಲಿತರು ತಮ್ಮ ಕೇರಿಯಲ್ಲಿ ಮೌಢ್ಯದಿಂದ ಕೆಟ್ಟ ಸಂಪ್ರದಾಯಗಳನ್ನು ಆಚರಿಸಿಗೊಂಡು ಬರುತ್ತಿದ್ದನ್ನು ಕುರಿತಂತೆ ಲೇಖಕರು ಆತ್ಮಕಥೆಯಲ್ಲಿ ತನ್ನ ಕೇರಿಯ ದಲಿತರು ವೃತ್ತಿ ಸಂಪ್ರದಾಯಗಳನ್ನು ಮಾಡುತ್ತಿದ್ದನ್ನು ಹೀಗೆ ಹೇಳಿದ್ದಾರೆ. 'ನನ್ನ ಕೇರಿಯಲ್ಲಿ ಒಬ್ಬೊಬ್ಬರದು ಒಂದೊಂದು ಕತೆ, ಎಲ್ಲಮ್ಮ ದೇವಿಯ ಪಾದಗಳನ್ನು ಕೊರಳಲ್ಲಿ ಕಟ್ಟಿಕೊಂಡು ಬದುಕುವವರು ಕೆಲವರು. ಗಂಡ ಬಿಟ್ಟಿದ್ದಕ್ಕೆ ಬಂದು ನೆಲೆಯೂರಿದವರು ಇನ್ನೂ ಕೆಲವರು. ಪರಂಪರೆಯ ವೃತ್ತಿಯನ್ನು ಮುಂದುವರೆಸಿಕೊಂಡು ಹೋಗುವವರು ಇನ್ನೂ ಕೆಲವು ಹೀಗೆ ಬಾಲ ಬೆಳೆಯುತ್ತದೆ. ಇದರೊಂದಿಗೆ ಜೋಗುತಿ, ಜೋಗಪ್ಪಗಳು, ಸೀರೆಯುಟ್ಟು ಜೋಗಪ್ಪಗಳು, ಹೀಗೆ ವೈವಿಧ್ಯಮಯ ಕಥನಕಗಳನ್ನು ಹೊತ್ತವರ ಬೀಡು. ಇವರಲ್ಲಿಯ ಕಲೆ ಎನ್ನುವುದು ದೇವಿಯ ಹೆಸರಿನಿಂದ ಹೊರಬಿದ್ದರೂ ಕಲೆಗಿಂತ ಭಿನ್ನವಾದುದ್ದಕ್ಕೆ ಊರ ಜನರ ಕಣ್ಣು ಅಲ್ಲಿ ಅರಸುತ್ತಿದ್ದರು ಎಂದು ದಲಿತರು ತಮ್ಮ ಸಮುದಾಯಗಳಲ್ಲಿ ದೇವರುಗಳಲ್ಲಿ ಇದ್ದ ನಂಬಿಕೆಗಳ ಬಗ್ಗೆ ಅತ್ಮಕಥೆಯಲ್ಲಿ ಬರೆದಿದ್ದಾರೆ.

ತಮ್ಮ ಊರುಗಳಲ್ಲಿ ನಡೆಯುವ ಹಬ್ಬಗಳಲ್ಲಿ ಸಂಪ್ರದಾಯಗಳನ್ನು ಆಚರಿಸುತ್ತಿದ್ದ ದಲಿತರು ಮತ್ತು ದಲಿತೇತರಗಳಲ್ಲಿ ಯಾರಾದರೂ ಮನೆಯಲ್ಲಿ ಸತ್ತಾಗ ಹೆಣದ ಮೇಲೆ ಹಣ ಚೆಲ್ಲುತ್ತಿದ್ದರು.

ಈ ಹಣವನ್ನು ದಲಿತರು ಅರಿಸಿಕೆಗಿಂತ ತಮ್ಮ ಹೊಟ್ಟೆ ಹಸಿವು ನಿಗಿಸಿಕೊಳ್ಳುವಂತಹ ಸಾಮಾಜಿಕ ಸಂಸ್ಕೃತಿಯನ್ನು ಕುರಿತಂತೆ 'ಅವತ್ತು ಡವೀರ ಶೈವರ ಮನೆಯಲ್ಲಿ ಯಾರೋ ಸತ್ತಿದ್ದರು. ಹೆಣ ಬ್ಯಾಂಡ್ ಬಾಜಾಣದೊಂದಿಗೆ ಸ್ಮಶಾನಕ್ಕೆ ತೆಗೆದುಕೊಂಡು ಹೋಗುವಾಗ ಹೆಣದ ಮೇಲೆ ಹಣ ತೂರುವುದೊಂದು ಸಂಪ್ರದಾಯ. ಅದು ಅವರಿಗೆ ಪ್ರತಿಷ್ಠೆಯ ಹೆಗ್ಗುರುತು ಆಗಿರಬೇಕು. ಯಾರ ಮನೆಯಲ್ಲಿ ಸತ್ತಿದ್ದಾರೆ. ಯಾರು ಸಂಪ್ರದಾಯವನ್ನು ಪಾಲಿಸುತ್ತಾರೆ ಎನ್ನುವುದನ್ನು ನನ್ನಜ್ಜಿಯಾವ ಮೂಲಗಳಿಂದ ತಿಳಿದುಕೊಳ್ಳುತ್ತಿದ್ದರೋ ನಾನರಿಯೆ. ಇಂಥ ಆದಾಯ ಬರುವ ಮೂಲಗಳನ್ನು ನಮಗೆ ಹುಡುಕಿಕೊಡುತ್ತಿದ್ದರು. ಹೆಣ ತೆಗೆದುಕೊಂಡು ಹೋಗುವಾಗ ಅವರು ನಮ್ಮನ್ನು ಅಷ್ಟೇ ಜಾಗರುಕತೆಯಿಂದ ಗಮನಿಸುತ್ತಿದ್ದರೆಂದು ತೋರುತ್ತದೆ. ನಾವು ಬಂದಿರುವುದನ್ನು ಖಚಿತಪಡಿಸಿಕೊಂಡೇ ಹೆಣವನ್ನು ತೂರಿರುವ ಹಣ ನೆಲಕ್ಕೆ ಬಿದ್ದ ಮೇಲೆ ಕಚ್ಚಾಡಿ ಎತ್ತಿಕೊಳ್ಳುವುದು ದಲಿತರ ಕೆಲಸ.'[೩] ತಮ್ಮ ಊರಲ್ಲಿ ದಲಿತೇತರು ಸಂಪ್ರದಾಯದಂತೆ ಹೆಣದ ಮೇಲೆ ಹಣ ತೂರುವುದನ್ನು ದಲಿತರ ಹಣವನ್ನು ಆರಿಸಿಕೊಳ್ಳುವಾಗ ಒಂದು ರೀತಿಯ ಸಂಸ್ಕೃತಿಯೆನ್ನುರಿದು ಹೇಳಬಹುದು. ಹೇಗೆ ದಲಿತರ ದಲಿತೇತರ ಸಂಸ್ಕೃತಿಯ ಬಗ್ಗೆ ಆತ್ಮಕಥನದಲ್ಲಿ ಕಂಡುಬರುತ್ತದೆ.

ಊರು-ಕೇರಿ

ಸಿದ್ಧಲಿಂಗಯವರು ತಮ್ಮ ಆತ್ಮಕಥನದಲ್ಲಿ ಇವರು ಬಾಲ್ಯದಿಂದ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿ ಕೆಲಸಕ್ಕೆ ಸೇರುವವರೆಗಿನ ಕಾಲಾವಧಿ ಇದೆ. ಇದರಲ್ಲಿ ತಾನು ದಲಿತನಾಗಿ ಸಮಾಜದಲ್ಲಿ ಅನುಭವಿಸಿದ ನೋವು ಕಷ್ಟ, ಕುಟುಂಬದ ಬಡತನ, ಸಾಮಾಜಿಕ ಅಸಮಾನತೆಗಳನ್ನು ವಿವರಿಸುವುದೊಂದಿಗೆ ದಲಿತ ಸಮುದಾಯದ ಸಾಂಸ್ಕೃತಿಕ ಜೀವನವನ್ನು ಆತ್ಮಕಥೆಯಲ್ಲಿ ಬರದಿರುವುದು ಕಾಣಬಹುದು. ತಮ್ಮ ಹುಟ್ಟೂರು ಅನಂತರ ಬೆಂಗಳೂರು ನಗರದ ಶ್ರೀರಾಮಪುರದಲ್ಲಿ ಜೀವನ ನಡೆಸಿದಂತಹ ದಲಿತರ ಸಂಸ್ಕೃತಿಯನ್ನು ವಿವರಿಸಿದ್ದಾರೆ. 'ನಮಗೆ ಒಬ್ಬ ದೇವರಿದ್ದಾನೆ, ನಮಗೊಬ್ಬ ಗುರುಗಳಿದ್ದಾರೆ ಎಂದು ತಿಳಿದದ್ದು ಆಗಲೇ ಮನೆಯಿಂದ ಮೇಲಕ್ಕಿದ್ದ ಇಪ್ಪೆ ಮರದ ಕೆಳಗೆ ಗುರುಗಳು ಬಂದು ನಿಂತಿದ್ದಾರೆ ಎಂದು ದೊಡ್ಡಪ್ಪ, ಅಜ್ಜಿ, ತಂದೆ, ತಾಯಿ, ಎಲ್ಲರೂ ಹೋಗಿ ಅವರಿಗೆ ನಮಸ್ಕರಿಸಿ, ಕಾಣಿಕೆ ಅರ್ಪಿಸಿದರು. ಅವರು ಮಂಟೆಸ್ವಾಮಿಯ ಶಿಷ್ಯ ಪರಂಪರೆ, ಮಂಟೆಸ್ವಾಮಿ ನಮ್ಮ ಮನೆ ದೇವರು. ನಾವೆಲ್ಲ ಆ ದೇವರ ಒಕ್ಕಲು, ಈ ಗುರುಗಳು ಬಂದರೆ ಸಾಕ್ಷಾತ್ ಮಂಟೇಸ್ವಾಮಿಯೇ ಬಂದಂತೆ, ಮಾಗಡಿ ಸುತ್ತಮುತ್ತ ಈ ಸಂಪ್ರದಾಯ ವಿರಳ. ಇದು ಮಂಡ್ಯ, ಮೈಸೂರು ಜಿಲ್ಲೆಗಳಲ್ಲಿ ಹೆಚ್ಚು. ನಮ್ಮ ಪೂರ್ವಿಕರು ಮಂಡ್ಯ ಜಿಲ್ಲೆಯ ಮದ್ದುರೂ ತಾಲ್ಲೂಕಿನ ಅಡಕೂರಿನಿಂದ ಇಲ್ಲಿಗೆ ವಲಸೆ ಬಂದವರಂತೆ ಈ ಗುರುಗಳು ಈ ಭಾಗದವರು'[೪] ತಮ್ಮ ಮನೆ ದೇವರು ಮಂಟೇಸ್ವಾಮಿ, ದಲಿತರಾದರು ಮಂಟೇಸ್ವಾಮಿ ಒಕ್ಕಲಿಗರಾಗಿ ಪೂಜೆ ಮಾಡುತ್ತಿದ್ದ ಸಂಪ್ರದಾಯವನ್ನು ವಿವರಿಸಿದ್ದಾರೆ. ಜೊತೆಗೆ ದಲಿತರು ಊರಲ್ಲಿ ಜಾತ್ರೆಗಳನ್ನು ಆಚರಿಸುತ್ತಿದ್ದಾಗ ದಲಿತರು ಬಗೆಗಿನ ಕೆಲವು

ಆಚಾರ-ವಿಚಾರಗಳ ಬಗ್ಗೆ ಹೀಗೆ ವಿವರಿಸಿದ್ದಾರೆ. 'ಇಲ್ಲಿಯ ಗ್ರಾಮದೇವತೆಯ ಹಬ್ಬ ಸ್ವಾರಸ್ಯಕರ. ಹಬ್ಬದಲ್ಲಿ ದೇವರು ಮೈದುಂಬಿ ಬಹಳ ದೂರ ಓಡುತ್ತಿದ್ದು ಜನರೂ ಅದರ ಹಿಂದೆ ಓಡುತ್ತಿದ್ದರು. ದೇವರು ಓಡಿ ಓಡಿ ಸುಸ್ತಾದ ಮೇಲೆ ಗಕ್ಕನೆ ನಿಂತು ಬಿಡುತ್ತಿತ್ತು. ಜನರು ನಿಂತು ಬಿಡುತ್ತಿದ್ದರು. ಯಜಮಾನ ಈತ ಒಬ್ಬ ಸಣಕಲ ಮುದುಕ ದೇವರನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದ. ಯಜಮಾನ (ದೇವರನ್ನು ಕುರಿತು) ; ಇಷ್ಟು ದಿನ ಎಲ್ಲೋಗಿದ್ದೆ, ದೇವತೆ ನಿಮ್ಮೂರೊಂದೆನ ನನಗೆ ಇರೋದು, ಮೂರು ಲೋಕಾನು ನೋಡ್ಕೋಬೇಕಲ್ಲ, ಯಜಮಾನ; ನಾವಿಷ್ಟು ಕಷ್ಟಪಡ್ತಾ ಇದ್ದೀವಿ ಗೊತ್ತಾ, ದೇವತೆ; ನಾನೇನು ಸುಖವಾಗಿದ್ದೀನಾ. ಈ ರೀತಿ ದೈವ ಮತ್ತು ಮನುಷ್ಯರ ನಡುವೆ ಸಂಭಾಷಣೆ ಮುಂದುವರೆಯುತ್ತಿತ್ತು. ನಂತರ ದೇವತೆ ಕುಣಿಯಲು ತೊಡಗುತ್ತಿತ್ತು. ಜನರು ಕುಣಿಯುತ್ತಿದ್ದರು, ವಾದ್ಯಗಳ ಅಬ್ಬರದಲ್ಲಿ ಯಾರ ಮಾತು ಯಾರಿಗೂ ಕೇಳಿಸುತ್ತಿರಲಿಲ್ಲ'[೫] ಎಂಬುದಾಗಿ ದಲಿತರು ಅನಕ್ಷರತೆ, ಮೌಢ್ಯತೆಯಿಂದ ಕಷ್ಟಗಳನ್ನು ದೇವರಲ್ಲಿ ಹರಕೆ ಹೊತ್ತುಕೊಳ್ಳುವಂತಹ ಸಂಸ್ಕೃತಿಯನ್ನು ಆಚರಿಸುತ್ತಿದ್ದದ್ದು ಕಂಡುಬರುತ್ತದೆ. ಹಾಗೂ ಸಮಾಜದಲ್ಲ ಅಸಹಯಕರವಾದ ರೀತಿಯ ಘಟನೆಗಳನ್ನು ನಡೆಯುತ್ತಿದ್ದವು. ಯಾರಾದರೂ ಮನೆಯಲ್ಲಿ ಕಳ್ಳತನವಾದರೆ ಕಳ್ಳರನ್ನು ಪತ್ತೆಹಚ್ಚಲು ಶಾಸ್ತ್ರ ಕೇಳಿಸುವುದು, ಮಾಟಮಂತ್ರಗಳಂತಹ ಸಂಪ್ರದಾಯಗಳನ್ನು ಕುರಿತಂತೆ ಲೇಖಕರು ಹೀಗೆ ಹೇಳಿದ್ದಾರೆ. 'ಒಂದು ರಾತ್ರಿ ನಮ್ಮ ಬೀದಿಯಲ್ಲಿ ಜನರ ಗುಂಪು ರಭಸವಾಗಿ ಓಡುತ್ತಿತ್ತು. ಮಾತುಗಳು ಅಷ್ಟಾಗಿ ಕೇಳಿಬರುತ್ತಿರಲಿಲ್ಲ. ಜನ ಹಾಗೆ ಬರುತ್ತಿರಲಿಲ್ಲ. ಜನ ಹಾಗೆ ಮೌನವಾಗಿ ಚಲಿಸುವುದನ್ನು ನಾನು ನೋಡಿ ಇರಲಿಲ್ಲ. ಕುತೂಹಲದಿಂದ ನಾನು ಗುಂಪು ಸೇರಿಕೊಂಡೆ. ಅದೊಂದು ಆಚರಣೆ, ಅದರ ಹೆಸರು ತಣಿಶಾಸ್ತ್ರ. ಒಂದು ಮನೆಯಲ್ಲಿ ಹತ್ತು ರೂಪಾಯಿ ಕಳವು ಆಗಿತ್ತು. ಕಳ್ಳ ಯಾರು ಎಂದು ಪತ್ತೆ ಮಾಡಲಾಗಲಿಲ್ಲ. ಆದ್ದರಿಂದ ಮನೆಯವರು ತಣಿಗೆ ಶಾಸ್ತ್ರದ ಮೊರೆಹೊಕ್ಕರು. ಕಳುವಾದ ಮನೆಯಲ್ಲಿ ಲೂಟಿ ಮಾಡುವ ಹಿತ್ತಾಳೆಯ ತಣಿಗೆಯನ್ನಿಟ್ಟು ಪೂಜಿಸಿ ಒಬ್ಬ ವ್ಯಕ್ತಿ ಅದರೊಳಕ್ಕೆ ಎರಡು ಕೈಗಳನ್ನು ಇಟ್ಟು ನಿಂತರೆ ಆ ತಣಿಗೆ ಚಲಿಸಲಾರಂಬಿಸುತ್ತದೆ. ಅದರ ಹಿಂದೆಯೆ ಆ ತಟ್ಟೆಯಲ್ಲಿ ಕೈಯಿಟ್ಟವನು ಚಲಿಸುತ್ತಾ, ಅದರ ಚಲನೆ ಕ್ರಮೇಣ ವೇಗವಾಗುತ್ತದೆ. ಜನ ತಣೆಯನ್ನು ಹಿಂಬಾಳಿಸುತ್ತಾರೆ. ಆಚರಣೆಗೆ ಬೀದಿಯಲ್ಲಿ ಮನೆ ಮನೆಯ ಮುಂದೆ ಹೋಗುತ್ತಾ ಹಣ ಕದ್ದವರ ಮನೆ ಮುಂದೆ ನಿಲ್ಲುತ್ತದೆ. ಆಗ ಜನ ಕಳ್ಳನನ್ನು ಹಿಡಿಯುತ್ತಾರೆ.'[೬] ಇಂತಹ ಮೂಢನಂಬಿಕೆ ಸಂಪ್ರದಾಯಗಳನ್ನು ದಲಿತರು ಆಚರಣೆ ಮಾಡುತ್ತಿದ್ದರು ಎಂಬುದು ಈ ಆತ್ಮಕತೆಯಲ್ಲಿ ತಿಳಿಯುತ್ತದೆ. ಜೊತೆಗೆ ದಲಿತ ಹೆಂಗಸರ ಮೈಮೇಲೆ ದೆವ್ವ, ಪಿಶಾಚಿಗಳು ಬರುವಂತಹ ಕೆಲವು ಅಂಶಗಳನ್ನು ಸಿದ್ಧಲಿಂಗಯ್ಯನವರು ತಮ್ಮ ಆತ್ಮಕಥನದಲ್ಲಿ ತಿಳಿಸಿದ್ದಾರೆ. ಇಂತಹ ಪ್ರತಿಯೊಂದು ಸಂಪ್ರದಾಯಗಳ ದಲಿತರಲ್ಲಿ ಇದ್ದು ಬಡತನ, ಅಜ್ಞಾನ, ಅನಕ್ಷರತೆಗಳಿಂದ ಎಂದು ಹೇಳಬಹುದು. ಪ್ರಸ್ತುತವಾಗಿ ಈ ಸಂಪ್ರದಾಯಗಳ ಸಮಾಜದಲ್ಲಿ ಇದ್ದವು.

ಮಣೆಗಾರ

ತುಂಬಾಡಿ ರಾಮಯ್ಯನವರು ತಮ್ಮ ಆತ್ಮಕಥೆಯಲ್ಲಿ ಬಾಲ್ಯದಿಂದ ತನ್ನ ಕುಟುಂಬವು ಬಡತನದಿಂದ ಜೀವನ ನಡೆಸಿದ ದಲಿತರಾಗಿ ಅಸ್ಪೃಶ್ಯತೆಯಿಂದ ಸಮಾಜದಲ್ಲಿ ಕೆಳಸ್ತರದಲ್ಲಿ ಬದುಕಿ ಕೂಲಿ, ಮಾಡುವುದು ಮತ್ತು ತನ್ನ ಊರಿನಲ್ಲಿ ಮೇಲ್ವರ್ಗದವ ದಲಿತರನ್ನು ಅಸಮಾನತೆಯಿಂದ, ಶೋಷಣೆ ಮಾಡುತ್ತಿದ್ದನ್ನು ಆತ್ಮಕಥೆಯಲ್ಲಿ ಬರೆದಿದ್ದಾರೆ. ಜೊತೆಗೆ ದಲಿತರು ಊರುಗಳಲ್ಲಿ ತಮ್ಮ ಸಂಪ್ರದಾಯಗಳನ್ನು ಆಚರಿಸುತ್ತಿದ್ದ ದಲಿತರ ಸಾಂಸ್ಕೃತಿಕ ಜೀವನದ ಬಗ್ಗೆ ತನ್ನ ಅನುಭವದ ಮೂಲಕ ಆತ್ಮಕಥೆಯಲ್ಲಿ ದಾಖಲಿಸಿದ್ದು. ದಲಿತ ಧಾರ್ಮಿಕವಾಗಿ ಕುಲದೇವರುಗಳ ಬಗ್ಗೆ ಚಿತ್ರಿಸಿದ್ದಾರೆ. 'ನಮ್ಮ ಮಣೆಗಾರರ ಕುಲಗುರುಗಳಾದ ಆದಿಜಾಂಭವ ಮುನಿಗಳು ತಮ್ಮ ಪರಿವಾರದೊಂದಿಗೆ ಕುದುರೆ ಮೇಲೆ ಬಂದು ಕಟ್ಟೆಮನೆ ಯಜಮಾನರ ಮನೆಯಲ್ಲಿ ಬಿಡಾರ ಹೂಡುತಿತದ್ದರು. ಈ ಕಟ್ಟೆಮನೆಗೆ ಒಳಪಡುವ ಎಲ್ಲಾ ಊರುಗಳ ಹಟ್ಟಿಗಳ ಯಜಮಾನರುಗಳು ಆದಿಜಾಂಬವ ಮುನಿಗಳಿಗೆ ಕಪ್ಪ ಕಾಣಿಕೆಗಳನ್ನು ಒಪ್ಪಿಸಿ ಬರುತ್ತಿದ್ದರು. ಕ್ರಮೇಣ ನಮ್ಮ ಜಾತಿಯವರೆಗೆ ಒಂದು ಹೊತ್ತಿನ ಊಟಕ್ಕೂ ಕಷ್ಟಪಡುವಂತಾದ ಮೇಲೆ ಕಪ್ಪ-ಕಾಣಿಕೆಗಳನ್ನು ಕೊಡುವುದನ್ನು ನಿಲ್ಲಿಸಿದರು.'[೭] ಪ್ರತಿಯೊಬ್ಬ ಸಮುದಾಯದವರು ಒಂದು ದೇವರಿಗೆ ಒಕ್ಕಲು ಇರುವ ತಮ್ಮ ಹಾಗೆಯೆ ಊರಿನ ದಲಿತರು ಆದಿಜಾಂಬವ ಗುರುಗಳಿಗೆ ನಡೆದುಕೊಳ್ಳುತ್ತಿರುವಂತಹ ಧಾರ್ಮಿಕತೆಯ ಬಗ್ಗೆ ವಿವರಿಸಿದ್ದಾರೆ. ಸಮಾಜದಲ್ಲಿ ಪ್ರತಿಯೊಂದು ಊರುಗಳಲ್ಲಿ ಹಬ್ಬ ಜಾತ್ರೆಗಳನ್ನು ಆಚರಿಸುವುದು ಸರ್ವೇ ಸಾಮಾನ್ಯ ಹಾಗೆ ತಮ್ಮ ಹಳ್ಳಿಯಲ್ಲಿ ದಲಿತರು ಮಾಡುವಂತಹ ಪ್ರಮುಖವಾದ ಹಬ್ಬಗಳೆಂದರೆ ಮಾರೆಮ್ಮ, ದುರುಗಮ್ಮ ಇಂತಹ ಹೆಣ್ಣುದೇವತೆಗಳಿಗೆ ಸಂಬಂಧ ಪಟ್ಟಂತ ಧಾರ್ಮಿಕ ಹಬ್ಬಗಳನ್ನು ಆಚರಿಸುತ್ತಾರೆ. ಹಾಗೆ ರಾಮಯ್ಯನವರ ಊರಲ್ಲಿ ಆಚರಿಸುತ್ತಿದ್ದ ಹಬ್ಬದಲ್ಲಿ ಸಾಂಸ್ಕೃತಿಕತೆ ಎಂದರೆ 'ನಮ್ಮ ಊರಿನಲ್ಲಿ ಎಲ್ಲರೂ ಸೇರಿ ಮಾಡುತ್ತಿದ್ದ ಇನ್ನೊಂದು ಹಬ್ಬವೆಂದರೆ, ಶೆಟ್ಟಿಹಳ್ಳಿ ಮಾರೆಮ್ಮ ಮತ್ತು ಹನುಮಂತರಾಯ ದೇವರಿಗೆ ಆರತಿ ಮಾಡುವುದು. ಈ ದಿನಗಳಲ್ಲಿ ನಮ್ಮ ಊರು ತನ್ನೆಲ್ಲ ನೋವುಗಳನ್ನು ಮರೆತು ಸಂತೋಷದಿಂದ ಹಬ್ಬದಲ್ಲಿ ಮೈಮರೆಯುತ್ತಿತ್ತು. ಸೋಮವಾರ ಹಬ್ಬದ ಮೊದಲ ದಿನ ಹನುಮಂತರಾಯ ದೇವರಿಗೆ ಆರತಿ ಮಾಡುವುದು. ಮಂಗಳವಾರ ಹಬ್ಬದ ಎರಡನೇ ದಿನ ಶೆಟ್ಟಿಹಳ್ಳಿ ಮಾರಮ್ಮನಿಗೆ ಆರತಿ ಮತ್ತು ಕೋಣ ಕಡಿಯುವುದು. ಮೂರನೆಯ ದಿನ ಬಾಡಿನೂಟ, ಮಾರೆಮ್ಮನಿಗೆ ಹರಕೆ ಕಟ್ಟಿಕೊಂಡವರು ಕೋಣವನ್ನು ಬಿಟ್ಟಿರುತ್ತದ್ದರು.'[೮] ಈ ಮೇಲಿನಂತೆ ಲೇಖಕರ ಊರಲ್ಲಿ ಶೆಟ್ಟಿಹಳ್ಳಿ ಮಾರೆಮ್ಮ ಜಾತ್ರೆ ಆಚರಿಸುವಾಗ ದಲಿತರು ತಮ್ಮ ಸಂಸ್ಕೃತಿಗೆ ತಕ್ಕಂತೆ ದೇವರುಗಳಿಗೆ ಆರತಿ ಮಾಡುವುದು. ಮಾರೆಮ್ಮನಿಗೆ ಸಂಪ್ರದಾಯದಂತೆ ಕೋಣ ಕಡಿಯುವುದು. ಇದರಿಂದ ಊರಿಗೆ ಒಳ್ಳೆಯದು ಆಗುತ್ತದೆ. ಹೊಲಗಳಲ್ಲಿ ಬೆಳೆ ಚೆನ್ನಾಗಿ ಬರುತ್ತದೆ ಎಂಬ ಮೂಢನಂಬಿಕೆಗಳಿಂದ ಪ್ರಾಣಿಬಲಿ ಮಾಡುವಂತ ಸಂಪ್ರದಾಯವು ದಲಿತರಲ್ಲಿ ಇದೆ ಎಂಬುದನ್ನು ಲೇಖಕರು ಬಿಂಬಿಸಿದ್ದಾರೆ.

ಇದರ ಜೊತೆಗೆ ಅನ್ಯ ಧರ್ಮಿಯರಾದ ಮುಸ್ಲಿಂರು ಆಚರಿಸುತ್ತಿದ್ದ ಬಾಬಯ್ಯನ ಜಾತ್ರೆಯಲ್ಲಿ ದಲಿತರು ಭಾಗವಹಿಸುವ ಮೂಲಕ ಅನ್ಯಧರ್ಮದ ಸಾಂಸ್ಕೃತಿಕತೆಯನ್ನು ತಮ್ಮಲ್ಲಿ ಅಳವಡಿಸಿಕೊಂಡಿರುವುದನ್ನು ಹೀಗೆ ವಿವರಿಸಿದ್ದಾರೆ. 'ಅಲಾವಿ ಗುಂಡಿಗೆ ಗುದ್ದಲಿ ಪೂಜೆ ಮಾಡುವುದರಿಂದ ಬಾಬಯ್ಯನ ಜಾತ್ರೆ ಆರಂಭವಾಗುತ್ತಿತ್ತು. ಬಾಬಯ್ಯನ ಜಾತ್ರೆ ಆರುದಿನಗಳು ನಡೆದು, ಏಳನೇ ದಿವಸ ಸರಗತ್ತು ಇರುತ್ತಿತ್ತು. ಒಂದು ಉದ್ದನೆ ಬಿದಿರುಗಳಕ್ಕೆ ಬಿಳಿಬಟ್ಟೆಯನ್ನು ಸುತ್ತಿ, ತುದಿಯಲ್ಲಿ ಕುಚ್ಚನ್ನು ಬಿಟ್ಟು ಕೆಂಪು ಲಾಡಿದಾರದಿಂದ ಕಟ್ಟುತ್ತಿದ್ದರು. ಇದನ್ನು ಹುಸೇನಿ ದೇವರು ಎಂದು ಕರೆಯುತ್ತಿದ್ದರು. ಬಿದಿರಿನ ಕಡ್ಡಿಗಳಿಂದ ಮಂಟಪವನ್ನು ಕಟ್ಟಿ, ಅದರ ಮಧ್ಯೆ ಬೆಳ್ಳಿಯ ಹಸ್ತಗಳನ್ನು ಕಟ್ಟುತ್ತಿದ್ದರು. ಈ ದೇವರನ್ನು ಜಾತ್ರೆಯ ಕೊನೆಯ ದಿನದವರೆಗೂ (ಏಳನೆ ದಿನದವೆಗೆ) 'ನೆಲೆದೇವರಂತೆ ಪೂಜೆ ಮಾಡುತ್ತಿದ್ದರು.'[೯] ಬಾಬಯ್ಯನ ಜಾತ್ರೆಯಲ್ಲಿ ಹುಸೇನಿ ದೇವರಿಗೆ ಪೂಜೆ ಮಾಡುತ್ತಾ, ಹರಕೆ ಹೊತ್ತುಕೊಂಡವರು ಲಾಡಿ ಕಟ್ಟಿಕೊಂಡು ಏಳುದಿನದವರೆಗೆ ಪೂಜೆ ಮಾಡುವ ಪದ್ಧತಿಯನ್ನು ದಲಿತರು ಅನುಸರಿಸುತ್ತಿದ್ದರು. ಹಾಗೂ ಬಾಬಯ್ಯನ ಜಾತ್ರೆ ಮುಗಿಯುವ ತನಕ ಊರಲ್ಲಿ ಯಾರು ಹಂದಿ ಮಾಂಸವನ್ನು ಮಾಡುವುದಾಗಲಿ, ಹಂದಿಯನ್ನೇ ಊರಿನ ಒಳಕ್ಕೆ ಬಿಟ್ಟುಕೊಳ್ಳುವುದನ್ನು ನಿಷೇಧಿಸಿದ್ದರು. ಹೇಗೆ ದಲಿತರು ಸಾಂಸ್ಕೃತಿಕವಾಗಿ ತಮ್ಮ ಬದುಕನ್ನು ಮಾಡುತ್ತಿದ್ದರು ಎಂಬುದನ್ನು ಈ ಆತ್ಮಕತೆಯಲ್ಲಿ ದಲಿತ ಸಂಸ್ಕೃತಿಯನ್ನು ಗುರುತಿಸಬಹುದು.

ಈ ರೀತಿಯಾಗಿ ದಲಿತ ತಮ್ಮ ಊರುಗಳಲ್ಲಿ ಹಬ್ಬಗಳನ್ನು ಆಚರಿಸುವಾಗ ಸಂಪ್ರದಾಯಗಳನ್ನು ಅನುಸರಿಸುತ್ತಿದ್ದನ್ನು ಹಾಗೂ ಸಮಾಜದಲ್ಲಿ ಊರ ಚಾಕರಿ ಮಾಡುವುದು ಮಣೆಗಾರರು ಆಗಿದ್ದರು. ತಮಟೆ ಬಡಿಯುವುದು ಇವರ ಇನ್ನೊಂದು ಸಂಸ್ಕೃತಿಯ ಸಂಕೇತವಾಗಿದೆ. ಇದಲ್ಲದೆ ಊರಲ್ಲಿ ಮಾರಮ್ಮ ಜಾತ್ರೆಯಲ್ಲಿ ಕೋಣ ಕಡಿದಾಗ, ಸರುಗು ಹಾಕುವುದು ದಲಿತ ಆಯಾಗಾರಿಕೆ ಇದನ್ನು 'ಮಣೆಗಾರರೆ ಮಾಡಬೇಕು ಎಂಬುದು ಹಿಂದಿನ ಕಾಲದಿಂದಲೂ ಊರುಗಳಲ್ಲಿ ನಿಯಮ. ಇದರಂತೆ ದಲಿತರಲ್ಲಿ ಯಾರಾದರೂ ಒಬ್ಬ ವ್ಯಕ್ತಿ ಅರೆಬೆತ್ತಲೆಯಲ್ಲಿ ಊರಿನ ಸುತ್ತ ಸೆರಗು ಹಾಕಬೇಕು. ಹೀಗೆ ದಲಿತರು ತಮ್ಮ ಪೂರ್ವಿಕರ ಸಂಪ್ರದಾಯಗಳನ್ನು ಚಾಚುತಪ್ಪದೆ ಪಾಲಿಸುತ್ತಿದ್ದ ತನ್ನ ಹಳ್ಳಿಯಲ್ಲಿನ ಧಾರ್ಮಿಕತೆಯ ಸಂಪ್ರದಾಯಗಳನ್ನು ಆತ್ಮಕಥೆಯಲ್ಲಿ ವಿವರಿಸಿದ್ದಾರೆ.

ಕೇರಿಯಿಂದ ತೇರಿಗೆ

ಸಾಹಿತ್ಯ ರಚನೆ ಮಾಡುವ ಪ್ರತಿಯೊಬ್ಬ ಲೇಖಕರು, ಕಥೆ, ಕಾದಂಬರಿಗಳಲ್ಲಿ ತಮ್ಮ ಪರಿಸರದ ಸಂಸ್ಕೃತಿಯ ಅಂಶಗಳನ್ನು ಸಾಹಿತ್ಯದಲ್ಲಿ ಅಭಿವ್ಯಕ್ತಿ ಪಡಿಸುತ್ತಾರೆ. ಆತ್ಮಕಥೆಯು ಒಬ್ಬ ವ್ಯಕ್ತಿಯು ವೈಯಕ್ತಿಕ ಬದುಕಿನ ಚಿತ್ರಣವಲ್ಲದೆ ಒಂದು ಸಮಾಜದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕದ ಬಗ್ಗೆ ಬರೆದಿದ್ದನ್ನು ನೋಡಬಹುದು. ಯಲ್ಲಪ್ಪ ಕೆಕೆಪುರ ಇವರು ತಮ್ಮ

ಆತ್ಮಕಥೆಯಲ್ಲಿ ಬಳ್ಳಾರಿ ಸುತ್ತಮುತ್ತಲಿನ ದಲಿತ ಸಂಸ್ಕೃತಿಯನ್ನು ಕುರಿತು ಕೇರಿಯಿಂದ ತೇರಿಗೆ ಆತ್ಮಕಥನದಲ್ಲಿ ಹಬ್ಬ ಹರಿದಿನಗಳಲ್ಲಿ ಬರದಿರುವುದು ಕಂಡುಬರುತ್ತದೆ. ಸಮಾಜದಲ್ಲಿ ಸಂಪ್ರದಾಯಗಳನ್ನು ಕುರಿತಂತೆ ಹೀಗೆ ಹೇಳಿದ್ದಾರೆ. 'ಮೊದಲನೆಯ ದಿನ ನಮ್ಮೂರ ವೀರಭದ್ರೇಶ್ವರನ ಜಲ್ಲಿ ತರಲು ದೊಣ್ಣೆಗ್ಹೋಗಿ ಬೆಳಗಿನ ಜಾವ, ಗರ್ಭಗುಡಿಯೊಳಕ್ಕೆ ಹೋಗಿ ದೇವ್ರು ಮೈಬಿಡುವುದಕ್ಕಿಂತ ಮುಂಚಿತವಾಗಿ ಕಾರಣಿಕೆ ಕೇಳಲು ದೇವ್ರು ದೇವ್ರು ಹೊತ್ತ ಪೂಜಾರಿಗೆ ಪೂಜಾರಿ ದೇವ್ರು ಹೊತ್ತೂ ಹಿಂದೆ ಮುಂದೆ ತೊನೆದಾಡುತ್ತಾ ಹಲ್ಲು ಕಟಿ ಕಟಿ ಕಡಿಯುತ್ತಾ...... ಹೆಬ್ಬಾವಿನಂತೆ ಭುಸುಗುಟ್ಟುವ ಪರಿಯಂತೂ ನಿಬ್ಬೆರಗನ್ನುಂಟು ಮಾಡುವುದು. ಗಾಳಿ ಬೀಸುವ ಶಬ್ಧವನ್ನು ಬಿಟ್ಟು ಮತ್ತ್ಯಾವ ಶಬ್ಧ ಕೇಳ್ಸದಷ್ಟು ಜನ ಬಾಯಲ್ಲಿ ಅಕ್ಕಿಕಾಳು ಹಾಕಿ ನಿಂತಿರುತ್ತಾರೆ. ಏ ಬಿಳಿ ಎತ್ತು ಓಡುತ್ತೆ, ಕೆಂಗೆಟ್ಟು ನಿಲ್ಲುತ್ತೆ. ಕರಿಯೆತ್ತು ಮಲಗುತ್ತೆ... ದಾರಿ ಬಿಡ್ಯಾಲೋ ಎಂದು ದೇವ್ರು ಐದಾರು ಜನರನ್ನು ನೂಕಿಕೊಂಡು ಗರ್ಭದಗುಡಿ ಪ್ರವೇಶಿಸಿದ್ದೇ ತಡ ಮಂಗಳಾರತಿ ಪದ... ಆರತಿ, ಕರ್ಪೂರ, ಬೆಳಗಿ ಕಲ್ಲುಸಕ್ಕರೆ, ಎಸೆದರೆ ಮಂಗಳ ಮಸ್ತು' ಎಂದು ಹಿರಿಯರು ಒಗಟಿನಂತೆ ಕಾರಣಿಕೆ ಹೇಳಿದ್ದನ್ನು ವಿವಿಧ ರೀತಿಯಲ್ಲಿ ತರ್ಕಿಸುತ್ತಾ.... ಮಳೆ ಬೆಳೆಗೆ ಅನ್ವಯಿಸುತ್ತಾ .... ಅವರವರ ಮನೆ ಸೇರುತ್ತಿದ್ದ'[೧೦] ಹೀಗೆ ತಮ್ಮ ಊರಲ್ಲಿನ ವೀರಭದ್ರೇಶ್ವರ ಜಾತ್ರೆಯಲ್ಲಿ ಅನುಸರಿಸುತ್ತಿದ್ದ ಸಂಪ್ರದಾಯಗಳನ್ನು ವಿವರಿಸಿದ್ದಾರೆ. ದಲಿತ ಯಾವುದಾದರೂ ರೋಗರುಜಿನಗಳಿಗೆ ತುತ್ತಾದಾಗ ದೇವರಲ್ಲಿ ಹರಕೆ ಕಟ್ಟಿಕೊಂಡು, ಎತ್ತು ಹಸುಗಳನ್ನು ಪೂಜಿಸುತ್ತಿದ್ದನ್ನು ಲೇಖಕರು ಆತ್ಮಕಥೆಯಲ್ಲಿ ಹೇಳಿರುವುದನ್ನು ನೋಡಬಹುದು. 'ಆಕಳುವಿನಲ್ಲಿ ೩೩ ಕೋಟಿ ದೇವಾನುದೇವತೆಗಳು ಇರುವುರೆಂದು ಅಪ್ಪ ಮನೆಯಲ್ಲಿ ಹೇಳುತ್ತಿದ್ದನಲ್ಲದೆ ಬಟ್ಟೆ ಬರೆಗಳನ್ನು ಮೊದಲು ಆಕಳದ ಬೆನ್ನಿನ ಮೇಲೆ ಹಾಕಿ ನಮಸ್ಕರಿಸಿ, ನಂತರವೇ ಮನೆಯಲ್ಲಿ ತೊಡುವ ಸಂಪ್ರದಾಯವಿತ್ತು[೧೧] ಎಂದು ದಲಿತ ಸಂಸ್ಕಾತಿಕ ಪದ್ಧತಿಯಾದ ಆಚಾರ-ವಿಚಾರಗಳನ್ನು ತಿಳಿಸಿದ್ದಾರೆ.

ಧಾರ್ಮಿಕ ಆಚರಣೆಗಳಲ್ಲಿ ದೇವರಿಗೆ ಪೂಜೆ ಮಾಡುವುದು ಹರಕೆ ಕಟ್ಟಿಕೊಂಡು ಹರಕೆ ಒಪ್ಪಿಸುವಂತೆ ಪದ್ಧತಿಗಳ ಜೊತೆಗೆ, ದಲಿತರು ತಮ್ಮ ಬಡತನ, ಅನಕ್ಷರತೆಯಿಂದ ಅವೈಜ್ಞಾನಿಕ ಪದ್ಧತಿಗಳನ್ನು ಆಚರಿಸುತ್ತಿದ್ದರು ಎಂಬುದನ್ನು ಆತ್ಮಕಥನದಲ್ಲಿ ದಾಖಲಿಸಿದ್ದಾರೆ. ಅಂತಹ ಅನಿಷ್ಠ ಪದ್ಧತಿಯೆಂದರೆ ಬಸವಿ ಪದ್ಧತಿ, ಮುತ್ತು ಕಟ್ಟಿಸುವುದನ್ನು ದಲಿತ ಸಂಪ್ರದಾಯವೆಂದು ಹೀಗೆ ವಿವರಿಸಿದ್ದಾರೆ. 'ನನ್ನಕ್ಕ ಎಲ್ಲಕ್ಕನಿಗೆ 'ದೇವ್ರು' ಕಟ್ಟಿಸಲು... ಮನೆತನಕ ಬಿಡಲು ಅಪ್ಪ ಭರದಿಂದ ಸಿದ್ಧತೆ ನಡೆಸಿದ ಅಪ್ಪನ ನಿರ್ಣಯವೇ ಹಾಗೆ. ಯಾರ ಮಾತು ಕೇಳುತ್ತಿರಲಿಲ್ಲ. ತನ್ನ ಸ್ವಂತ ಪ್ರತಿಷ್ಠೆಯ ಜೊತೆಗೆ, ಮನೆತನ ಹಾಳಾಗಬಾರದೆಂಬ ಘನ ಉದ್ದೇಶವಿತ್ತು. ಇದು ಒಳ್ಳೆಯದೆಂದು ಭಾವಿಸಿದ್ದ ಏಕ ಮುಖ ನಿರ್ಣಯ. ಮನೆ ಮುಂದೆ ದೊಡ್ಡ ಚಪ್ಪರ ಹಾಕಿಸಿದ, ಸುತ್ತ ಏಳು ಹಳ್ಳಿಗೆ ಹೇಳಿ ಕಳುಹಿಸಿದ. ಮನೆಯಲ್ಲಿ ಗಡ್ಡದ ಓತವನ್ನು ದೇವ್ರಿಗೆ ಬಿಟ್ಟು, ಅಕ್ಕಿ, ಬೇಳೆ, ಬೆಲ್ಲ.

ಗೋಧಿ, ಉಪ್ಪು, ಸಕ್ಕರೆ.... ಜೋಳ, ರಾಗಿ, ಅಕ್ಕಿಕಾಳು, ಹೊಗೆಸೊಪ್ಪು... ಸುಣ್ಣ... ಚೆಕ್ಕೆ, ...ಎಲೆ... ಅಡಿಕೆ... ಹಸನು ಮಾಡಲು ಹೆಣ್ಣುಮಕ್ಕಳೂ ಕೂಡಿದರು. ಮದುವೆಯ ಸಂಭ್ರಮವಿತ್ತು. ದೇವಸಮುದ್ರದಿಂದ ಹಾಗೂ ಸಿಡಿಗಲ್ಲುನಿಂದ ಚೌಡಿಕೆಯವರು ಬಂದರು. ರಾಂಪುರ, ತಿಮ್ಮಲಾಪುರದವರಿಂದ ಹಲಿಗೆಗಳ ಬಡಿತ ಶುರುವಾಯಿತು. ಸಾವಿರಾರು ಜನರೆದುರಿಗೆ ಅಪ್ಪ ಗಡ್ಡದ ಓತಕ್ಕೆ ಕುಂಕುಮ, ಭಂಡಾರ, ಚಂದ್ರ, ಬುಕ್ಕಿಟ್ಟು ಹಚ್ಚಿ, ಕೊರಳಿಗೆ ಮಾವು ಬೇವಿನ ತೋರಣ ಕಟ್ಟಿ ಊದುಕಡ್ಡಿ ಬೆಳಗಿ, ತೆಂಗಿನಕಾಯಿ ಒಡೆದು, ಹೊಸ್ತಿಲು ಬಾಗಿಲಿಗೆ ಇಟ್ಟು ಕಡ್ಲೆ ಮಂಡಾಲು, ಕೊಬ್ಬರಿ, ರೊಕ್ಕವನ್ನು ಅಂಗೈಯಿಂದ ಉಗ್ಗಿದ. ದಾನವಾಗಿ ಬೆಂಡೋಲೆ, ಹಸು, ಕರುಗಳನ್ನು ನೀಡಿದ. ದೇವರಿಗೆ ಹೊಸ ಬಟ್ಟೆಗಳನ್ನು ನೀಡಿದ ಅಕ್ಕ ಎಲ್ಲಕ್ಕನಿಗೆ ಬೇವಿನ ಉಡುಗೆ ತೋಡಿಸಿ, ತಲೆಮೇಲೆ ನಂದಾದೀವಿಗೆ ಹೊರಸಿ ಮುತ್ತೈದೆಯರಿಂದ ಕಳಸ ಕುಂಬ, ಹಡ್ಲಿಗೆಗಳು, ಎಡೆಗಳು, ತೆಂಗಿನ ಕಾಯಿ ಚೀಲ, ಮಂಡಾಳು ಚೀಲ, ಬಾಳೆಗೊನೆ... ಹೊರ್ಸಿದ ಬೀಗರು ಬಿಜ್ಜರಿಗೆ... ಹೊಸ ಸೀರೆ ಕುಪ್ಪಸಗಳು ಮೆರವಣಿಗೆ ಮನೆಯಿಂದ ಹೊರಟಿತು. ಜನರು ಇರುವೆ ಸಾಲಿನಂತೆ ಹೊರಟಿತು.'[೨೨] ದಲಿತ ಹೆಣ್ಣುಮಕ್ಕಳನ್ನು ಬಸವಿ ಮಾಡುವ ಪದ್ಧತಿ ದಲಿತರಲ್ಲಿ ಇತ್ತು ಎಂಬುದನ್ನು ಲೇಖಕರು ಪ್ರತಿಭಟನೆ ಸ್ವರೂಪದಲ್ಲಿ ಬರೆದಿದ್ದಾರೆ.

ಒಟ್ಟಾರೆಯಾಗಿ ಈ ದಲಿತ ಆತ್ಮಕಥನಗಳಲ್ಲಿ ದಲಿತರು ತಮ್ಮ ಊರಲ್ಲಿ ಊರಿನ ಚಾಕರಿ ಮಾಡುವುದು ಎಲ್ಲಾ ಕಡೆ ಒಂದು ರೀತಿಯಲ್ಲಿ ಇರುವುದನ್ನು ಕಾಣಬಹುದು. ಆದರೆ ಪ್ರಾದೇಶಿಕವಾಗಿ ನೋಡಿದರೆ ತಮ್ಮ ತಮ್ಮ ಪ್ರದೇಶದಲ್ಲಿ ಒಂದೊಂದು ರೀತಿಯ ಸಂಸ್ಕೃತಿಯನ್ನು ಹೊಂದಿರುವುದು ಕಂಡುಬರುತ್ತದೆ. ಊರುಕೇರಿಯಲ್ಲಿ ದಲಿತರು ಮಂಟೇಸ್ವಾಮಿಗೆ ನಡೆದುಕೊಂಡರೆ ಮಣೆಗಾರರಲ್ಲಿ ಬರುವ ದಲಿತರು ಆದಿಜಾಂಬವ ಗುರುಗಳಿಗೆ ಪೂಜಿಸುವ ಪದ್ಧತಿ ಕಂಡುಬರುತ್ತದೆ. ಹಾಗೆಯೆ ಗೌರ್ಮೆಂಟ್ ಬ್ರಾಹ್ಮಣ ಕೇರಿಯಿಂದ ತೇರಿಗೆ ಆತ್ಮಕಥನಗಳಲ್ಲಿ ಲೇಖಕರು ಜೀವಿಸಿದ ಪ್ರದೇಶದ ಪರಿಸರದಲ್ಲಿ ಸಮಾಜಕ್ಕೆ ಸಂಬಂಧಪಟ್ಟ ಸಂಸ್ಕೃತಿ ಬಿಂಬಿಸುತ್ತದೆ.

ಅಡಿಟಿಪ್ಪಣಿಗಳು

೧. ಅರವಿಂದ ಮಾಲಗತ್ತಿ, ಗೌಮೆಂಟ್ ಬ್ರಾಹ್ಮಣ ಪುಟ, ಸಂ, ೩೪

೨. ಅದೇ, ಪುಸ್ತಕ, ಪು.ಸಂ. ೪೭

೩. ಅದೇ, ಪುಸ್ತಕ, ಪು.ಸಂ. ೧

೪. ಸಿದ್ಧಲಿಂಗಯ್ಯ, ಊರು ಕೇರಿ, ಪು.ಸಂ, ೪

೫. ಅದೇ, ಪುಸ್ತಕ, ಪು.ಸಂ. ೧೪

೬. ಅದೇ, ಪುಸ್ತಕ, ಪು.ಸಂ. ೩೦

೭. ತುಂಬಾಡಿ ರಾಮಯ್ಯ, ಮಣೆಗಾರ, ಪುಸ್ತಕ, ಪು,ಸಂ, ೩೦

೮. ಅದೇ, ಪುಸ್ತಕ, ಪು.ಸಂ. ೨೭

೯. ಅದೇ, ಪುಸ್ತಕ, ಪು.ಸಂ ೩೧

೧೦. ಯಲ್ಲಪ್ಪ ಕೆಕೆಪುರ, ಕೇರಿಯಿಂದ ತೊರಿಗೆ, ಪುಸ್ತಕ, ಪು.ಸಂ. ೨೬

೧೧. ಅದೇ, ಪುಸ್ತಕ, ಪು.ಸಂ ೩೦

೧೨. ಅದೇ, ಪುಸ್ತಕ, ಪು.ಸಂ ೨೨

ಅಧ್ಯಾಯ ಐದು

ಶೈಕ್ಷಣಿಕ ಆಯಾಮ

ಅಧ್ಯಾಯ ಐದು

ಶೈಕ್ಷಣಿಕ ಆಯಾಮ

ಅರವಿಂದ ಮಾಲಗತ್ತಿಯವರು ತಮ್ಮ ಆತ್ಮಕಥನದಲ್ಲಿ ಕುಟುಂಬವು ಜೀವನ ನಡೆಸಿದ ಸ್ಥಿತಿ, ತಮ್ಮ ಊರಲ್ಲಿ ದಲಿತರ ಕೇರಿಯಲ್ಲಿ ಹರಿಜನರು ಸಮಾಜದಲ್ಲಿ ತಮಗೆ ಆದಂತಹ ಅಪಮಾನ, ಜಾತಿನಿಂದತೆ, ಅಸಮಾನತೆಯಿಂದ ದಲಿತರಿಗೆ ಕ್ಷೌರ ಮಾಡದೇ ಬರಿ ಮೇಲ್ವರ್ಗದವರಿಗೆ ಕ್ಷೌರ ಮಾಡುವುದು, ದಲಿತರಿಗೆ ದೇವಸ್ಥಾನಗಳಲ್ಲಿ ಒಳಗಡೆ ಪ್ರವೇಶ ವಿಲ್ಲದಿರುವುದು. ಊರಿನ ಪಕ್ಕದಲ್ಲಿ ದಲಿತ ಹೆಂಗಸರು ಬಟ್ಟೆ ಹೊಗೆಯಲು ಹೋದಾಗ ಮೇಲ್ವರ್ಗದ ಹೆಂಗಸರು ದನ ತಿನ್ನುವ ಜಾತಿ ಕೆರೆಯಲ್ಲಿ ಬರಬಾರದು ಎಂದು ಜಾತಿನಿಂದನೆ ಮಾಡುವಂತಹ ಸಂಗತಿಗಳನ್ನು ವಿವರಿಸುವುದರ ಜೊತೆಗೆ ಅರವಿಂದ ಮಾಲಗತ್ತಿಯವರು ತನ್ನ ಬಾಲ್ಯದಿಂದ ಶಿಕ್ಷಣ ಪಡೆಯುವಾಗ ಹರಿಜನರು ಎಂಬ ಕಾರಣಕ್ಕೆ ಶಾಲೆ, ಸಮಾಜದಲ್ಲಿ, ತಮ್ಮ ಊರಲ್ಲಿ ಅಪಮಾನಗಳನ್ನು ಸಹಿಸುತ್ತಾ ವ್ಯಾಸಂಗ ಮಾಡಿದ ಪರಿಸ್ಥಿತಿಯ ಬಗ್ಗೆ ಆತ್ಮ ಕಥನದಲ್ಲಿ ವಿವರಿಸಿದ್ದಾರೆ.

'ಪ್ರಾಥಮಿಕ ಶಾಲೆಯಲ್ಲಿ ಓದುವಾಗ ನನಗೆ ಸಿಕ್ಕ ರಕ್ಷೆ ಇದು ಅಲ್ಲಲ್ಲ... ನನ್ನಂತೆ ನನ್ನ ಕೇರಿಯ ಸ್ನೇಹಿತರೂ ಉಂಡಿದ್ದಾರೆ. ಹಾಗೆ ತೂಗುಹಾಕಿದಾಗ ಕೈಗಳನ್ನು ಜಾರಿಸಿ ನೆಲಕ್ಕೆ ಬೀಳಲೂ ಬರುತ್ತಿರಲಿಲ್ಲ ಅಳಬೇಕು, ಗೋಗೆರೆಯಬೇಕು, ಕಾಡಿ ಬೇಡಿದರೂ ಪ್ರಯೋಜನವಿರುತ್ತಿರಲಿಲ್ಲ. ನಾನು ಗೋಗೆರೆದಷ್ಟು ನಮ್ಮ ಗುರೋತ್ತಮರಿಗೆ ಹಲ್ಲು ಕಡಿಯುವಷ್ಟು ಕೋಪ ಬರುತ್ತಿತ್ತು. ಕೈಯಲ್ಲಿ ನುಣುಪಿಲ್ಲದ ಉದ್ದನೆಯ ಬಡಿಗೆ, ಗೋಡೆಗೆ ಮುಖ ಮಾಡಿ ಗೂಟಕ್ಕೆ ತೂಗು ಹಾಕಿದ ಮೇಲೆ ಅವರಿಗೆ ಹೊಡೆಯಲು ಸಿಕ್ಕುವುದು ಉಬ್ಬಿನಿಂತ ನಮ್ಮ ಕುಂಡೆಯ ದಡಗಳು.

ಸೂಳೆ ಮಗನ ಕುಂಡೆಂದ್ರ ತಬಲಾ ಆಗ್ಯಾವ ನೋಡು ಸಾಲಿ ಉಪ್ಪಿಟ್ಟು ತಿಂದು ತಿಂದು.... ಎನ್ನುವುದು ಬಾರಿಸುವುದು.'[೧]

ಮಾಲಗತ್ತಿ ಪ್ರಾಥಮಿಕ ಶಾಲೆಯಲ್ಲಿ ವ್ಯಾಸಂಗ ಮಾಡುವಾಗ ತಾವು ಹರಿಜನರು ಎಂಬ ಕಾರಣಕ್ಕಾಗಿ ಶಿಕ್ಷಕರು ಅಸಮಾನತೆಯಿಂದ ಕಾಣುತ್ತಿದ್ದರು. ದಲಿತ ವಿದ್ಯಾರ್ಥಿಗಳನ್ನು ಶಾಲೆಯಲ್ಲಿ ಹಿಂದಕ್ಕೆ ಒಂದಕೊಂದು ಪರಸ್ಪರ ಕೈಗಳನ್ನು ಜೋಡಿ ಗೊಡೆಗೆ ನೇತು ಹಾಕಿದ ಹಾಗೆ ಗೂಟಕ್ಕೆ ಇಳೆ ಬಿಟ್ಟು ಬಡಿಗೆಯಿಂದ ಒಡೆಯುವುದು ಮೊಣ ಕಾಲು ಅರ್ಧಕ್ಕೆ ಮಡಿಸಿ ನಿಂತುಕೊಳ್ಳಬೇಕು ಇಂತಹ ಕಠಿಣವಾದ ಶಿಕ್ಷೆಯನ್ನು ದಲಿತ ವಿದ್ಯಾರ್ಥಿಗಳಿಗೆ ಕೊಡುತ್ತಿದ್ದ ಶಿಕ್ಷೆಗಳು ಯಾವುದಕ್ಕಾಗಿ ಎಂಬುದನ್ನು ಈ ರೀತಿಯಾಗಿ ಹೇಳಿದ್ದಾರೆ.

ಇವೆಲ್ಲಾ ಯಾವ ಕಾರಣಕ್ಕಾಗಿ ಗೊತ್ತೆ? ನಾವು ಮನೆಯಲ್ಲಿ ಹೇಳಿ ಪಾಠ ಓದಿಕೊಂಡು ಬರಲಿಲ್ಲ ಎಂದಲ್ಲ, ನಮ್ಮ ಕೊಳಕುತನಕ್ಕಾಗಲ್ಲ, ಶಾಲೆಯಲ್ಲಿ ಪ್ರಾರ್ಥನೆಯಾಗುವುದಕ್ಕಿಂತ ಮುಂಚೇಯೇ. ನಾವು ತರಗತಿಯ ಕಸ ಗುಡಿಸಬೇಕು. ಬೇಗನೆ ಬಂದು ಕಸ ಗುಡಿಸದಿದ್ದರೆ ಈ ಪರಿಯ ಶಿಕ್ಷೆಗೆ ದಲಿತರಾಗಿದ್ದಕ್ಕೆ ಸಮಾಜದಲ್ಲಿ ಕೆಲವು ಕೆಲಸಗಳನ್ನು ಹರಿಜನ ಮಾಡುವ ಸಂಪ್ರಾದಾಯಗಳನ್ನು ಮುಂದುವರೆಸಿದಕೊಂಡು ಬಂದ ಹಾಗೆ ಶಾಲೆಯಲ್ಲಿ ಕೀಳರಿಮೆಯಿಂದ ಶಿಕ್ಷಕರು ಓದಿನಲ್ಲಿ ನಾವು ಮುಂದಿದ್ದರು ದಲಿತ ವಿದ್ಯಾರ್ಥಿಗಳು ಎಂಬ ಕಾರಣಕ್ಕೆ ಅವಮಾನ ಮಾಡುತ್ತಿದ್ದರು ಎಂಬುದನ್ನು ತಿಳಿಸಿದ್ದಾರೆ. ಇದರ ಜೊತೆ ಶಾಲೆಯಲ್ಲಿ ಸ್ನೇಹಿತರಾದ ಮೇಲ್ವರ್ಗದ ವಿದ್ಯಾರ್ಥಿಗಳು ಅಪಮಾನ ಮಾಡುವುದನ್ನು ವಿಶೇಷಿಸಿದ್ದಾರೆ. 'ನಮ್ಮ ಕೇರಿಯಲ್ಲಿ ಒಟ್ಟು ತರಗತಿಯಲ್ಲಿ ನಾಲ್ಕು ಜನ, ದೇವಪ್ಪ, ಮಲ್ಲಪ್ಪ, ಬಸವಂತಪ್ಪ ಮತ್ತು ನಾನು ನಾಳೆ ಕಸದ ಪಾಳೆ ಯಾರದಿದೆ ಎನ್ನುವುದನ್ನು ಕರಿ ಹಲಗೆಯ ಮೇಲೆ ಬರೆಯಲಾಗುತ್ತಿತ್ತು. ನಮ್ಮ ಹೆಸರುಗಳನ್ನು ಕರಿ ಹಲಗೆಯ ಮೇಲೆ ಯಥಾ ಸ್ಥಿತಿಯಲ್ಲಿ ಬರೆಯಲು ಅವರು ಹೇಸುತ್ತಿದ್ದರೆಂದು ತೋರುತ್ತದೆ. ಹೀಗಾಗಿ ದೇವ್ಯಾ, ಮಲ್ಯ, ಬಸ್ಯಾ ಎಂದು ಹೆಸರನ್ನು ಮುಗುಚಿ ಬರೆಯುತ್ತಿದ್ದರು. ಹೆಸರು ಬರೆಯುವಾಗ ಕೆಲಸದ ಮೊದಲು ಗುರೋತ್ತಮರೇ ಮಾಡುತ್ತಿದ್ದರು. ಅನಂತರ ಆ ಕೆಲಸ ತರಗತಿಯ ಮಂತ್ರಿವರ್ಯರಿಗೆ ವರ್ಗಾವಣೆ ಮಾಡಲಾಯಿತು. ಕಸಗುಡಿಸುವ ಕೆಲಸ ದಲಿತರಾದ ನಮ್ಮ ನಾಲ್ಕು ಜನರಿಗೆ ಮಾತ್ರ ಸೀಮಿತವಾಗಿತ್ತು"[೨]

ಮಾಲಗತ್ತಿಯವರು ಶಾಲೆಯಲ್ಲಿ ಶಿಕ್ಷರು ಮೇಲ್ವರ್ಗದ ವಿದ್ಯಾರ್ಥಿಗಳಿಗೆ ಮಾತ್ರ ಯಾವುದೇ ರೀತಿಯ ಶಿಕ್ಷೆ ಕೊಡದೆ, ಶಾಲೆಯಲ್ಲಿ ಕೆಲಸಗಳನು ದಲಿತ ವಿದ್ಯಾರ್ಥಿಗಳಿಂದ ಮಾಡಿಸುತ್ತಾರೆ. ಜಾತಿ ನಿಂದನೆ ಮಾಡುತ್ತಾ ಶೋಷಣೆ ಮಾಡುವುದು. ಅಡ್ಡ ಹೆಸರುಗಳಿಂದ ದಲಿತ ವಿದ್ಯಾರ್ಥಿಗಳನ್ನು ಕರೆಯುವುದು. ಶಾಲೆಯಲ್ಲಿ ಬರಿ ನೆಲ್ಲದಲ್ಲಿ ಪ್ರತ್ಯೇಕವಾಗಿ ಕೂರಿಸುವ ಅಮಾನುಷವಾಗಿ.

ಮಾನಸಿಕವಾಗಿ ಹಿಂಸೆ ಮಾಡುವಂತಹ ಶಿಕ್ಷೆಯನ್ನು ಕೊಡುತ್ತಿದ್ದರು ಹಾಗೂ ಶಾಲೆಯಲ್ಲಿ ಕಸ ಗುಡಿಸುವ ದಲಿತ ವಿದ್ಯಾರ್ಥಿಗಳು ಮಾತ್ರ ಇಂತಹ ಉನ್ನತ ಸ್ಥಾನಗಳು ದಲಿತ ವಿದ್ಯಾರ್ಥಿಗಳಿಗೆ ಸೀಮಿತವಾಗಿದೆ ಎಂದು ದಲಿತರನ್ನು ಶಾಲೆಯಲ್ಲಿ ಅಸಮಾನತೆಯಿಂದ ಕಾಣುತ್ತಿದ್ದರು ಎಂದು ತನ್ನ ಶೈಕ್ಷಣಿಕ ಜೀವನ ಬಗ್ಗೆ ವಿವರಿಸಿದ್ದಾರೆ.

ಹಾಗೆಯೇ ಆತ್ಮ ಕಥನದಲ್ಲಿ ಬರುವ ನನ್ನ ಓದು ನನ್ನ ಕೇರಿಯಲ್ಲಿ ದಲಿತರ ಕೇರಿಯಲ್ಲಿ ಅರವಿಂದ ಮಾಲಗತ್ತಿಯವರು ಕುಟುಂಬ ಮಾತ್ರ ಅಕ್ಷರಸ್ತರಾಗಿದ್ದು. ಮಾಲಗತ್ತಿಯವರು ರಾತ್ರಿ ವೇಳೆಯಲ್ಲಿ ಬೀದಿ ದೀಪದಲ್ಲಿ ಓದಿಕೊಳ್ಳುತ್ತಿರುವಾಗ ಮೇಲ್ವರ್ಗದ ಗಂಡಸರು ತಮ್ಮ ಕಾಮ ತೃಷೆಯಲ್ಲಿ ತೀರಿಸಿಕೊಳ್ಳಲು ದಲಿತ ಕೇರಿಯ ಹೆಂಗಸರನ್ನು ಕೂಡುವುದಕ್ಕೆ ಬೀದಿ ದೀಪಗಳನ್ನು ಒಡೆಯುವುದು, ದಲಿತರು ವಿದ್ಯಾಭ್ಯಾಸ ಪಡೆದು ಉನ್ನತ ಮಟ್ಟಕ್ಕೆ ಹೊಗುತ್ತಾರೆ ಎಂಬುದನ್ನು ಅರಿತು ಹೊಟ್ಟೆ ಕಿಚ್ಚಿನಂತಹ ಕೆಲಸಗಳನ್ನು ಮೇಲ್ವರ್ಗದ ಜನರು ಮಾಡುತ್ತಾರೆಂದು ಹಾಗೂ ಹಗಲು ಹೊತ್ತಿನಲ್ಲಿ ತನ್ನ ಊರಿನ ಹತ್ತಿರದ "ಪದ್ಮಾಪತಿ" ಗುಡ್ಡಕ್ಕೆ ಹೋಗಿ ಓದಿಕೊಳ್ಳುತ್ತಿದ್ದನ್ನು ಶೈಕ್ಷಣಿಕ ಜೀವನದ ಬಗ್ಗೆ ವಿರಿಸಿದ್ದಾರೆ.

ಊರು-ಕೇರಿ

ಸಿದ್ಧಲಿಂಗಯ್ಯನವರು ಕುಟುಂಬವು ಬಡತನದಿಂದ ತಮ್ಮ ಹಸಿವು ನಿಗಿಸಿಕೊಳ್ಳುವುದಕ್ಕೆ ಐನೋರ ಹೊಲದಲ್ಲಿ ತಂದೆಯು ಎತ್ತು ದುಡಿಯುವ ಹಾಗೆ ಕಷ್ಟಪಟ್ಟು ದುಡಿಮೆ ಮಾಡುತ್ತಾ ಬ್ರಾಹ್ಮಣರ ಹೊಲವನ್ನು ಪಾಲಿಗೆ ಮಾಡಿ, ಅದರಲ್ಲಿ ಹೂವು, ತರಕಾರಿ ಬೆಳೆದು ಬಂದಂತಹ ಸಂಪಾದನೆಯಿಂದ ತನ್ನ ಕುಟುಂಬವನ್ನು ಸಾಗಿಸುತ್ತಿದ್ದನು. ಹಾಗೆಯೇ ತಾಯಿಯು ತಂದೆಯ ಜೊತೆಗೆ ಹೊಲಕ್ಕೆ ಹೋಗಿ ಅಲ್ಲಿ ಬೆಳಿಗ್ಗೆಯಿಂದ ಸಂಜೆಯ ತನಕ ದುಡಿದು ಮನೆಗೆ ಬರುತ್ತಿದ್ದು, ರಾತ್ರಿ ಹೊತ್ತು ತಂದೆಗೆ ತಾಯಿಯು ಭೂಜಕ್ಕೆ ಎಣ್ಣೆ ಕಾಯಿಸಿ ಹಚ್ಚುತ್ತಿದ್ದಳು ಬಹಳ ಕಷ್ಟಪಟ್ಟು ಜೀವನ ಮಾಡುತ್ತಿದ್ದ ಇವರು ತನ್ನ ಮಗನನ್ನು ಶಾಲೆಗೆ ಕಳುಹಿಸಿ ಬುದ್ಧಿವಂತ ಮಾಡಬೇಕೆಂದು ತಾಯಿಯ ಆಸೆಯಂತೆ, ಸಿದ್ಧಲಿಂಗಯ್ಯನವರನ್ನು ಶಾಲೆಗೆ ಸೇರಿಸಿದರು. ಹಾಗೂ ಶಾಲೆಗೆ ಸೇರಿದ ನಂತರ ಶೈಕ್ಷಣಿಕ ಜೀವನವನ್ನು ಕುರಿತಂತೆ ಈ ರೀತಿಯಾಗಿ ವಿವರಿಸಿದ್ದಾರೆ "ನನ್ನನ್ನು ಒಂದು ದಿನ ನಮ್ಮ ದೊಡ್ಡಪ್ಪ ಮತ್ತಿತರು ಹಿಡಿಯುವ ಯತ್ನ ಮಾಡಿದರು ನಾನು ತಪ್ಪಿಸಿಕೊಳ್ಳಲು ಎಷ್ಟು ಯತ್ನಿಸಿದರೂ ಅವರು ಬಿಡಲಿಲ್ಲ, ಹೇಗೊ ಅರಚಾಡುತ್ತಿದ್ದ ನನ್ನನ್ನು ಹೊತ್ತು ಕೊಂಡು ಹೋಗಿ ಶಾಲೆಗೆ ಬಿಟ್ಟರು. ನಾನು ಗೋಳೋ ಎಂದು ಅಳುತ್ತಿದ್ದೆ ಮನೆ, ತಂದೆ, ತಾಯಿ, ಕುರಿ, ದನಗಳ ನೆನಪಾದರಂತೂ ಕಣ್ಣೀರು ಒತ್ತರಿಸಿಕೊಂಡು ಬರುತ್ತಿತ್ತು. ಶಾಲೆಯ ಒಳಗೆ ನನಗಿಂತ ಚಿಂತಾಕ್ರಾಂತರಾದ ಹಲವು ಹುಡುಗರು

ಕುಳಿತಿದ್ದರು. ಮಾಸ್ತರು ಬೆತ್ತದಿಂದ ಒಂದು ಏಟು ಕೊಟ್ಟು ಕೂಡಲೇ ನಾನು ಒಮ್ಮೆ ಜೋರಾಗಿ ಅತ್ತು ಸುಮ್ಮನೆ ಕುಳಿತುಕೊಂಡೆ.'[೨] ತಂದೆ-ತಾಯಿಯ ಜೊತೆಯಲ್ಲಿ ಹೊಲ-ದನ ಕರುಗಳ ಜೊತೆಯಲ್ಲಿ ಬೆಳೆದು ಒಂದೇ ಸಮನೆ ಶಾಲೆಗೆ ಸೇರಿಸಿದ್ದಕ್ಕೆ ಮನಸ್ಸು ಚಂಚಲದಿಂದ ಕೂಡಿದ್ದರ ಬಗ್ಗೆ ತಿಳಿಸಿದ್ದಾರೆ. ಜೊತೆಗೆ ಶಾಲೆಯಲ್ಲಿ ಹೊಂದಿಕೊಂಡು ಶಾಲೆಗೆ ಕೆಲವು ದಿನಗಳ ನಂತರ ಇನ್ಸ್‌ಪೆಕ್ಟರ್ ಬಂದು ಮಕ್ಕಳ ಹತ್ತಿರ ಪಾಠ ಓದಿಸಿ, ಬರೆಸಿ ಪರೀಕ್ಷೆ ಮಾಡಿ ಹೋದಾಗ ಸಿದ್ದಲಿಂಗಯ್ಯನವರು ಇನ್ಸ್‌ಪೆಕ್ಟರ್‌ನ ಮಿನಿಕ್ರಿ ಮಾಡುವ ಮೂಲಕ ಸಹಪಾಠಿಗಳನ್ನು ನಗಿಸುತ್ತಾ ಸ್ನೇಹಿತರಿಂದ ಮಿಠಾಯಿ ಪಡೆದು ಹಸಿವು ನಿಗಿಸಿಕೊಳ್ಳುತ್ತಿದ್ದರು. ಹೇಗೆ ಲೌಖಿಕ ಕಲೆ ಅಭಿನಯದಲ್ಲಿ ಪ್ರಸಿದ್ಧಿ ಪಡೆದು ಶಾಲೆಯ ಎಲ್ಲಾ ಹುಡುಗರಿಗೆ ಬೇಕಾದವನು ಆದನು.

ತಮ್ಮ ತಾಯಿಯ ತವರೂರು ಆದ ಮಂಚಬಲೆಯ ಪಕ್ಕದ ಅಣೆ ಕೆಂಪಯ್ಯನ ದೊಡ್ಡಿಯಲ್ಲಿ ಶಾಲೆಗೆ ಸೇರಿದಾಗ ಆ ಶಾಲೆಯಲ್ಲಿ ಗಂಡ-ಹೆಂಡತಿ ಇಬ್ಬರು ಒಂದು ಶಾಲೆಯಲ್ಲಿ ಶಿಕ್ಷಕರಾಗಿದ್ದು ಅಲ್ಲಿ ಶಾಲೆ ಶಿಕ್ಷಕ ವಿದ್ಯಾರ್ಥಿಗಳನ್ನು ಗಂಡ-ಹೆಂಡತಿ ಶಾಲೆಯಲ್ಲಿ ಜಗಳವಾಡುತ್ತಿದ್ದನು ವಿದ್ಯಾರ್ಥಿಗಳು ನೋಡುತ್ತಾ ಆನಂದ ಪಡುತ್ತಿದ್ದ ಮನಗಂಡು ಶಿಕ್ಷಕ ವಿದ್ಯಾರ್ಥಿಗಳನ್ನು ಸೌದೆ ತರಲು ಕಾಡಿಗೆ ಕಳುಹಿಸುತ್ತಿದ್ದು ಇಂತಹ ಕೆಲಸ ಮಾಡುಲು ಸಿದ್ದಲಿಂಗಯ್ಯನವರಿಗೆ ವ್ಯಥೆವಾಗಿದ್ದರಿಂದ ಶಾಲೆಗೆ ಹೋಗುವಂತೆ ಮನೆಯಿಂದ ಹೊರಟು ನದಿಯ ದಡಕ್ಕೆ ಬಂದು ಅಲ್ಲಿ ಪುಸ್ತಕ ಇಟ್ಟು ನೀರಿನಲ್ಲಿ ಈಜುವುದು ಶಾಲೆ ಬಿಟ್ಟು ಸಮಯಕ್ಕೆ ಸರಿಯಾಗಿ ಮನೆ ಕಡೆ ಹೋಗುವಂತಹ ಕಳ್ಳಾಟ ದಿನಗಳನ್ನು, ಸಿದ್ದಲಿಂಗಯ್ಯನವರ ಕುಟುಂಬ ಬೆಂಗಳೂರಿಗೆ ಹೋದಾಗ ತಂದೆಯು ಸ್ಮಶಾಸನ ಹತ್ತಿರದ ಒಂದು ಪ್ರಾಥಮಿಕ ಶಾಲೆಗೆ ಸೇರಿಸಿದರು. ಮಾಗಡಿಯಲ್ಲಿ ಎರಡನೆ ತರಗತಿಯನ್ನು ಮುಗಿಸಿದ್ದರಿಂದ ನೇರವಾಗಿ ೩ನೇ ತರಗತಿಗೆ ಸೇರಿಸಿದರು. ಆ ಶಾಲೆಯ ಶಿಕ್ಷಕಿಯಾಗಿದ್ದ ಅಂಡಾಳಮ್ಮ ಲೇಖಕರು ದಲಿತರಾಗಿದ್ದಕ್ಕೆ ಅವರ ಬಗ್ಗೆ ವಿಶೇಷ ಕಾಳಜಿ ವಹಿಸಿರುವುದರ ಬಗ್ಗೆ ವಿವರಿಸಿದ್ದಾರೆ. 'ಒಂದು ದಿನ ತರಗತಿಯಲ್ಲಿ ಬಡ ವಿದ್ಯಾರ್ಥಿಗಳು ಎಂದು ನಿಂತುಕೊಳ್ಳಿ ಎಂದರು ಕೆಲವರು ಎದ್ದು ನಿಂತರು. ಮೇಡಂ ಅವರಿಗೆಲ್ಲ ಸರ್ಕಾರದಿಂದ ಬಂದಿದ್ದ ಉಚಿತ ಪುಸ್ತಕ ಪೆನ್ನುಗಳನ್ನು ಹಂಚಿದರು. ನಾನು ಹಾಗೆ ಕುಳಿತ್ತಿದ್ದೆ. ಮೇಡಂ ನನ್ನನ್ನು ಸ್ಥಿತಿವಂತರ ಹುಡುಗನೆಂದು ಬಾವಿಸಿರಬೇಕು ಒಂದು ದಿನ ನನ್ನ ತಂದೆ ನನ್ನನ್ನು ಹುಡುಕಿಕೊಂಡು ಶಾಲೆಗೆ ಬಂದನು ಮೇಡಂ ನನ್ನ ತಂದೆಯನ್ನು ನೋಡಿರಲಿಲ್ಲ. ಅವರಿಗೆ ಬಂದವನು ನನ್ನ ತಂದೆ ಎಂದು ಗೊತ್ತಾಗಿ ತುಂಬಾ ವ್ಯಥೆಪಟ್ಟರು. ಬಡವ ವಿದ್ಯಾರ್ಥಿಗಳು ನಿಂತುಕೊಳ್ಳಿ ಎಂದಾಗ ಯಾಕೆ ನಿಲ್ಲಲಿಲ್ಲ ಎಂದು ಕೊಪಗೊಂಡರು. ನನ್ನ ತಂದೆಯ ಹರಕು ಬಟ್ಟೆ ಕ್ಷೌರವಿಲ್ಲದ ದೈನ್ಯ ಮುಖ ನೋಡಿ ಆತನನ್ನ ಬಡವನೆಂದು ಹೇಳುತ್ತಿತ್ತು. ಮೇಡಂ ಕೂಡಲೇ ಬಡ ವಿದ್ಯಾರ್ಥಿಗಳಿಗೆ ಕೊಡುವ ಪುಸ್ತಕ ಪೆನ್ಸಿಲ್ಲುಗಳನ್ನು ಆಫಿಸುರೂಮಿನಿಂದ

ತರಿಸಿಕೊಟ್ಟರು. ನಾನು ಅತಿ ಬಡವನ ಮಗನೆಂದು ತಂದೆ ಮೇಲೆ ಇನ್ನೂ ಹೆಚ್ಚಿನ ಮಮತೆಯನ್ನು ತೋರಿದರು.'[೪] ಹೇಗೆ ಬೆಂಗಳೂರಿನ ಪ್ರಾಥಮಿಕ ಶಾಲೆಯಲ್ಲಿ ಓದಲು ಹೋದಾಗ ತನ್ನ ಬಡತನ ಸ್ಥಿತಿಯನ್ನು ಕಂಡ ಅಂಡಳಮ್ಮ ಎಂಬ ಶಿಕ್ಷಕಿಯು ಲೇಖಕರಿಗೆ ಮಮತೆಯನ್ನು ತೋರಿಸುತ್ತಾ ಓದಲು ಪ್ರೋತ್ಸಾಹ ನೋಡಿದ್ದನ್ನು ವಿವರಿಸಿದ್ದಾರೆ.

ಹೀಗೆ ಶಾಲೆಗೆ ಹೋಗುವಾಗ ಹಣವಂತ ವಿದ್ಯಾರ್ಥಿಗಳು ಶಾಲೆಯ ಮುಂದೆ ಇರುತ್ತಿದ್ದ ಅಂಗಡಿಯಲ್ಲಿ ಕಡ್ಲೆಕಾಯಿ, ಐಸ್‌ಕ್ಯಾಂಡ್ ಕೊಂಡುತ್ತಿದ್ದನು ಕಂಡು ತಾನು ಬಡವರಾಗಿದ್ದಕ್ಕೆ ಹಣವಿಲ್ಲದೆ ಮೂವರು ಸ್ನೇಹಿತರು ಸೇರಿ ಕಡ್ಲೆಕಾಯಿ ಕದ್ದುದ್ದರಿವಂತ ವಿದ್ಯಾರ್ಥಿ ಜೀವನ ಬಗ್ಗೆ ವಿವರಿಸಿದ್ದಾರೆ.

ಈ ವೇಳೆಗಾಗಲೇ ಲೇಖಕರು ಚೆನ್ನಾಗಿ ಓದುವ ಹುಡುಗ ಎಂದು ತಮ್ಮ ಕೋಣೆಯಲ್ಲಿ ಗೊತ್ತಾಗಿತ್ತು. ಇದನ್ನು ಮನಗಂಡ ಕೇರಿನ ಜನರು ತಮಗೆ ಬರುವಂತಹ ಕಾಗದಗಳನ್ನು ಓದಿಸುತ್ತಿದ್ದರು ಅವರ ಮನೆಗೆ ಹೋದಾಗ ಗೌರವದಿಂದ ಏನಾದರೂ ತಿಂಡಿ ಇದ್ದರೆ ಕೊಟ್ಟ ತಿಂದ ನಂತರ ಕಾಗದ ಓದುವುದು ಹಾಗೂ ಕಾಗದವನ್ನು ಬರೆಯ ಕೊಟ್ಟ ಇದಕ್ಕೆ ಪ್ರತಿರೂಪ ಸಂಭಾವನೆ ಕೊಡುತ್ತಿದ್ದರು. ಇದರಿಂದ ಆಕರ್ಷಿತನಾಗಿ ಊರಿನ ಎಲ್ಲರಿಗೂ ಪ್ರೀತಿಯ ಹುಡುಗನಾಗಿ ಓದುತ್ತಾ ತನ್ನ ಹೊಟ್ಟೆ ಹಸಿವು ನೀಗಿಸಿಕೊಳ್ಳಲು ಸ್ನೇಹಿತರ ಜೊತೆಗೂಡಿ ಹಿರಿಯರು ಹೇಳಿದ ಕೆಲಸಗಳನ್ನು ತಪ್ಪದೆ ಕೇಳುತ್ತಾ ಅವರು ಕೊಟ್ಟಂತಹ ಹಣದಿಂದ ಶಾಲೆಗೆ ಹೋಗುತ್ತಾ ವ್ಯಾಸಂಗದಲ್ಲಿ ತೊಡಗಿಕೊಂಡಿದ್ದನ್ನು ವಿವರಿಸಿದ್ದಾರೆ.

ಸಿದ್ದಲಿಂಗಯ್ಯನವರ ತಾನು ವ್ಯಾಸಂಗ ಮಾಡುತ್ತಿದ್ದಾಗ ಶ್ರೀರಾಮಪುರದ ಆರ್. ಗೋಪಾಲಸ್ವಾಮಿ ದಲಿತ ವಿದ್ಯಾರ್ಥಿ ನಿಲಯಕ್ಕೆ ತಾ ಸೇರಿದಾಗ ಅಲ್ಲಿ ತಾನು ಅನುಭವಿಸಿದ ಅನುಭವ ಮತ್ತು ವಿದ್ಯಾರ್ಥಿ ಸೋಮಾರಿತನದ ಬಗ್ಗೆ ವಿವರಿಸಿದ್ದಾರೆ. ವಿದ್ಯಾರ್ಥಿನಿಲಯದಲ್ಲಿ ಪುಂಡ ಹುಡುಗರ ಜೊತೆ ಸೇರಿ ಹಾಸ್ಟೆಲ್‌ನಲ್ಲಿ ತಿಂಡಿ, ತಿನುಸುಗಳನ್ನು ಕದ್ದು ತಿನುವಂತಹ ಪ್ರಸಂಗವನ್ನು ಹಾಗೂ ತನ್ನ ಸೋಮಾರಿತನವನ್ನು ಬಿಟ್ಟು ಚೆನ್ನಾಗಿ ಓದುವ ಸ್ನೇಹಿತರ ಸಂಘ ಬಯಸಿ ಓದಿದ ಕೆಲವ ಪ್ರಸಂಗಗಳನ್ನು ಹಾಗೂ ವಿದ್ಯಾರ್ಥಿ ನಿಲಯದಲ್ಲಿ ತಾನು ಪಡೆದ ಅನುಭವಗಳನ್ನು ಹೀಗೆ ವಿವರಿಸಿದ್ದಾರೆ.

'ಶ್ರೀರಾಮಪುರದ ಆರ್.ಗೋಪಾಲಸ್ವಾಮಿ ಅಯ್ಯಂಗರ್ ದಲಿತ ವಿದ್ಯಾರ್ಥಿ ನಿಲಯಕ್ಕೆ ನನ್ನ ತಾಯಿ ಸೇರಿಸಿದಳು ಅವಳು ಅದೇ ವಿದ್ಯಾರ್ಥಿ ನಿಲಯದಲ್ಲಿ ಕಸಗುಡಿಸುವ ಕೆಲಸ ಮಾಡುತ್ತಿದ್ದಳು ಇದರಿಂದ ನನಗೆ ಕೊಂಚ ಧೈರ್ಯವಿತ್ತು ಕೆಲವು ಪುಂಡ ಹುಡುಗರು ಆಕೆಯನ್ನು ಗದರಿಸಿದಾಗ ನನಗೆ ವ್ಯಥೆಯಾಗುತ್ತಿತ್ತು. ಬಡತನವೇ ಮೈದಳೆದಂತೆ ಇದ್ದ ನನ್ನ

ತಂದೆ ಆಗಾಗ ಅಲ್ಲಿಗೆ ಬರುತ್ತಿದ್ದನು. ವಿದ್ಯಾರ್ಥಿ ನಿಲಯದ ವಾಸ ಹೊಸ ಅನುಭವ ನೀಡಿತು.'[3] ಹೀಗೆ ಬಡತನದಿಂದಾಗಿ ಲೇಖಕರನ್ನು ಓದಲು ವಿದ್ಯಾರ್ಥಿನಿಲಯಕ್ಕೆ ಸೇರಿ ಅದೇ ವಿದ್ಯಾರ್ಥಿನಿಂದಲ್ಲಿ ಕೆಲಸ ಮಾಡುತ್ತಿದ್ದ ತನ್ನ ತಾಯಿಯನ್ನು ವಿದ್ಯಾರ್ಥಿಗಳು ಕೆಲವು ಸಾರಿ ತಾಯಿಯನ್ನು ಗದರಿಸುವ ಹಾಗೂ ತಂದೆಯು ಆಗಾಗ ಹಾಸ್ಟೆಲ್‌ಗಳಿಗೆ ಬಂದು ಹೋದಾಗ ಮನಸ್ಸಿನಲ್ಲಿ ವ್ಯಥೆ ಪಡುತ್ತಿದ್ದನ್ನು ವಿವರಿಸಿದ್ದಾರೆ. ವಿದ್ಯಾರ್ಥಿನಿಲಯದಲ್ಲಿ ರಾಜ್ಯದ ನಾನಾ ಕಡೆಯಿಂದ ಬಂದ ವಿದ್ಯಾರ್ಥಿ ಕನ್ನಡವನ್ನು ಬೇರೆ ಬೇರೆ ರೀತಿಯಲ್ಲಿ ಮಾತಾನಾಡುತ್ತಿದ್ದು ಎಲ್ಲಾ ವಿದ್ಯಾರ್ಥಿಗಳು ಒಂದು ಕಡೆ ಮಲಗುತ್ತಿದ್ದು ಪ್ರಾರ್ಥನೆ ಮಾಡುವ ಪದ್ದತಿಯಿತ್ತು ಕೆಲವು ಹುಡುಗರು ಸೋಮಾರಿತನ ತಪ್ಪಿಸಿಕೊಳ್ಳುತ್ತಿದ್ದರು. ಇದರಲ್ಲಿ ಲೇಖಕರು ಒಬ್ಬರು ಲೇಖಕರು ನಿಲಯ ಪಾಲಕರು ಬರುವಷ್ಟರಲ್ಲಿ ಬೇರೆಯರ ಜಾಗದಲ್ಲಿ ಹೋಗಿ ಅವರ ಹೊದಿಕೆಯನ್ನು ಹೊದ್ದು ಮಲಗುತ್ತಿದ್ದರು ಆಗ ಪಾಲಕರು ಆ ಸ್ಥಳದಲ್ಲಿ ಇರುತ್ತಿದ್ದ ವಿದ್ಯಾರ್ಥಿಯ ಹೆಸರನ್ನು ಬರೆದುಕೊಂಡು ಹೋಗಿ, ಆ ವಿದ್ಯಾರ್ಥಿಗೆ ಅವತ್ತಿನ ದಿನ ಊಟ ಇಲ್ಲದೆ. ಭೋಜನಾಲಯದಿಂದ ಹೊರಗಡೆ ಕಳುಹಿಸುತ್ತಿದ್ದರು. ಒಂದು ದಿನ ಲೇಖಕ ಕುಳ್ಳಕೆ. ಚಿಕ್ಕ ಮನುಷ್ಯನಾಗಿದ್ದರಿಂದ. ಕಬೋರ್ಡಿನಲ್ಲಿ ಬಚ್ಚಿಟ್ಟುಕೊಳ್ಳುತ್ತಿದ್ದ ಸೋಮಾರಿತನವನ್ನು ಕುರಿತಂತೆ ಆತ್ಮಕತೆಯಲ್ಲಿ ಹೀಗೆ ವಿವರಿಸಿದ್ದಾರೆ. "ನಾನು ಆ ಕಬೋರ್ಡಿನ ಒಳಗೆ ಕೋತಿಯಂತೆ ಸೇರಿಕೊಳ್ಳುತ್ತಿದ್ದೆ ಈ ವಿಚಾರದಲ್ಲಿ ನನಗೆ ಸಹಾಯಕ್ಕರಾಗಿದ್ದ ಮಿತ್ರರು ಕಬೋರ್ಡನ್ನು ಮುಚ್ಚಿ ಹೊರಗಿನಿಂದ ಬೀಗ ಹಾಕಿಕೊಂಡು ಹೊಗುತ್ತಿದ್ದರು. ಕಬೋರ್ಡಿನ ಸಣ್ಣ ಸಂದಿನಿಂದ ಬರುವ ಗಾಳಿಯಿಂದ ಹಲವು ಗಂಟೆ ನಿದ್ದೆ ಮಾಡುತ್ತಿದ್ದೆ. ಸ್ನೇಹಿತರು ಪ್ರಾರ್ಥನೆ, ಡ್ರಿಲ್ಲನ್ನು ಮುಗಿಸಿಕೊಂಡು ಒಂದು ಕಬೋರ್ಡಿನ ಬೀಗ ತೆಗೆದು ನನ್ನನ್ನು ಹೊರಕ್ಕೆ ಬಿಡುತ್ತಿದ್ದರು. ಹೇಗೆ ತಿಂಗಳು ಗಂಟೆಗಳ ನಿದ್ದೆ ಮಾಡುತ್ತಿದ್ದ ಪಾಲಕರಿಗೆ ಹೇಗೋ ಇದರ ಸುಳಿವು ಸಿಕ್ಕಿದ ಮೇಲೆ ಈ ಅಭ್ಯಾಸ ನಿಲ್ಲಿಸಿದೆ."[4] ಲೇಖಕರು ಸೋಮಾರಿತನ ಹಾಗೂ ಹಸಿವು ನೀಗಿಸಿಕೊಳ್ಳುವುದಕ್ಕೊಸ್ಕರ ವಿದ್ಯಾರ್ಥಿ ನಿಲಯದಲ್ಲಿ ಪ್ರಾರ್ಥನೆಗೆ ತಪ್ಪಿ ನಿದ್ದೆ ಮಾಡುತ್ತಿದ್ದ ವಿದ್ಯಾರ್ಥಿ ಜೀವನದಲ್ಲಿರುವ ಸೋಮಾರಿತನವನ್ನು ವಿವರಿಸಿದ್ದಾರೆ.

ಕೆಲವು ಭಾನುವಾರಗಳಲ್ಲೂ ಹಬ್ಬದಿನಗಳಲ್ಲಿ ಪಾಲಕರು ನಮಗೆಲ್ಲ ಗೋಣಿ ಚೀಲ ಕೊಟ್ಟು ಸಿಟಿ ಮಾರ್ಕೇಟ್ಟಿಗೆ ಕಳುಹಿಸುತ್ತಿದ್ದರು. ನಾವು ಮಾರ್ಕೇಟ್ಟಿನ ಅಂಗಡಿಗಳ ಮುಂದೆ ನಿಂತು ದವಸ, ದಾನ್ಯ, ತರಕಾರಿಗಳನ್ನು ಬೇಡುತ್ತಿದ್ದರು. ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡಬೇಕೆಂದು ಪರಿಪರಿ ವಿನಂತಿಸಿಕೊಳ್ಳುತ್ತಿದ್ದೇವು. ಕೆಲವು ಅಂಗಡಿಗಳವರು ಉದಾರವಾಗಿ ನಿಡುತ್ತಿದ್ದರು. ಅವನ್ನೆಲ್ಲ ಮೂಟೆಗಳಲ್ಲಿ ಹೊತ್ತುಕೊಂಡು ವಿದ್ಯಾರ್ಥಿ ನಿಲಯಕ್ಕೆ ಸಂಜೆ ವೇಳೆಗೆ ಬರುತ್ತಿದ್ದೆವು ಎಂಬುದಾಗಿ ನಿಲಯಪಾಲಕ ನಡೆತೆಯ ಬಗ್ಗೆ ತಿಳಿಸಿದ್ದಾರೆ.

ರಂಗ ಧಾಮಯ್ಯ ಎಂಬ ವಿದ್ಯಾರ್ಥಿಯು ಲೇಖಕರು ಎಂಟನೆ ತರಗತಿಯಲ್ಲಿ ಓದುತ್ತಿದ್ದಾಗ ಪರಿಚಯವಾಗಿ, ಲೇಖಕರ ಕುಟುಂಬದ ಸ್ಥಿತಿಯನ್ನು ಕಂಡಿದ್ದ ರಂಗದಾಮಯ್ಯ ಬುದ್ಧಿ ಮಾತು ಹೇಳಿದ ನಂತರ ಲೇಖಕರು ಶಾಲೆಗಳಲ್ಲಿ ಆಚರಿಸುತ್ತಿದ್ದ ರಾಷ್ಟ್ರೀಯ ದಿನಚಾರಣೆಗಳು ಬಾಷಣಗಳನ್ನು ಕಾರ್ಯಗ್ರಾಮದಲ್ಲಿ ಭಾಗವಹಿಸುತ್ತಾ ಭಾಷಣಗಳನ್ನು ಕೇಳುತ್ತಾ ವಿದ್ಯಾಂಸರುಗಳ ಒಡನಾಡಿಯಾಗಿ ತಾನು ಒಳ್ಳೆಯ ಬುಕ್ಕಗಳನ್ನು ಓದುತ್ತಾ. ವ್ಯಾಸಂಗ ಮುಂದುವರಿಸಿದರು. ಶಾಲೆಗೆ ಬೇಸಿಗೆ ರಜೆ ದಿನಗಳಲ್ಲಿ ತನ್ನ ಕುಟುಂಬದ ಪರಿಸ್ಥಿತಿ ತೀರ ಕಷ್ಟದಲ್ಲಿದ್ದರಿಂದ ಮದುವೆ ಸಮಾರಂಭಗಳಲ್ಲಿ ಪಾತ್ರೆ ತೊಳೆಯುವ, ಎಲೆ ಎತ್ತುವ ಕೆಲಸಕ್ಕೆ ಹೋಗಿ ಕುಟುಂಬಕ್ಕೆ ಆಸರೆಯಾಗುತ್ತಾ ವ್ಯಾಸಂಗವನ್ನು ಮುಂದುವರೆಸಿಕೊಂಡು, ಅಂಬೇಡ್ಕರ್ ಸಂಬಂಧಿಸಿದ ಪುಸ್ತಕಗಳನ್ನು ಓದುವ ಮೂಲಕ, ಗ್ರಂಥಾಲಯದ ವಾಚನಾಲಯಕ್ಕೆ ಹೋಗಿ ಕತೆ ಕಾದಂಬರಿ, ಓಗುತ್ತಾ ಶಾಲೆಯಲ್ಲಿ ಒಳ್ಳೆಯ ಭಾಷಣಕಾರನಾಗಿ ಕಾಣಿಸಿಕೊಂಡ. ಸಾಹಿತ್ಯ ಕ್ಷೇತ್ರದ ವಿದ್ವಾಂಸರೊಂದಿಗೆ ಒಡನಾಟ ಇಟ್ಟುಕೊಂಡು, ಕವಿತೆಗಳನ್ನು ಬರೆಯುತ್ತಾ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ದಲಿತ ಕವಿ ಸಿದ್ಧಲಿಂಗಯ್ಯ ಎಂದು ಪ್ರಸಿದ್ಧ ಪಡೆದರು. ಹೇಗೆ ತನ್ನ ಶೈಕ್ಷಣಿಕ ಜೀವನದ ಅನುಭವಗಳನ್ನು ತನ್ನ ಆತ್ಮಕಥನದಲ್ಲಿ ವಿವರಿಸಿದ್ದಾರೆ.

ಮಣೆಗಾರ

ತುಂಬಾಡಿ ರಾಮಯ್ಯನವರು ತಮ್ಮ ಮಣೆಗಾರ ಆತ್ಮಕಥನದಲ್ಲಿ ದಲಿತರು ಸಮಾಜದಲ್ಲಿ ಅವಮಾನಗಳಿಗೆ ಒಳಪಟ್ಟು. ತನ್ನ ಕುಟುಂಬ ಬಡತನದಿಂದ ಜೀವನ ನಡೆಸುತ್ತಾ ಇದದ್ದು, ತಮ್ಮ ಊರಿನ ಸಾಮಾಜಿಕ, ಸಾಂಸ್ಕೃತಿಕತೆಯ ಬಗ್ಗೆ ವಿಶ್ಲೇಷಿಸುವುದರ ಜೊತೆಗೆ ದಲಿತರಾದ ರಾಮಯ್ಯನ ಕುಟುಂಬದವರು ತಮ್ಮ ಮಕ್ಕಳು ಅಕ್ಷರ ಕಲಿತು ವಿದ್ಯಾವಂತರಾಗಬೇಕು ಎಂದು ಶಾಲೆಗೆ ಕಳುಹಿಸುವ ತಂದೆ ತಾಯಿಗಳ ಆಸೆ ಮತ್ತು ವಿದ್ಯಾರ್ಥಿಯ ಸ್ಥಿತಿ ಮತ್ತು ಲೇಖಕರು ತನ್ನ ವಿದ್ಯಾರ್ಥಿ ಜೀವನದಲ್ಲಿ ಶಾಲೆಯಲ್ಲಿ ಪಡೆದಂತಹ ಅನುಭವಗಳನ್ನು ವಿವರಿಸಿದ್ದಾರೆ.

ತುಂಬಾಡಿ ರಾಮಯ್ಯನವರು ಶಾಲೆಗೆ ಹೋಗುವುದರ ಜೊತೆಗೆ ತನ್ನ ತಂದೆಯ ಜೊತೆಗೆ ಚಪ್ಪಲಿ ಹೊಲೆಯುವ ಸಣ್ಣ ಪುಟ್ಟ ಕೆಲಸಗಳಲ್ಲಿ ಸಹಾಯ ಮಾಡುತ್ತಾ, ಇನ್ನು ಕೆಲವು ರಜೆದಿನಗಳಲ್ಲಿ ಗಾರೆ ಕೆಲಸಕ್ಕೆ ಕೂಲಿ ಮಾಡಲು ಹೋಗಿ, ಮನೆಯಲ್ಲಿ ದನ ಕರುಗಳಿಗೆ ಹೊಲಕ್ಕೆ ಹೋಗಿ ಹುಲ್ಲು ಕೊಯ್ದು ತಂದು ಹಾಕಿ. ತಾನು ಪಿ.ಯು.ಸಿ ಓದುವಾಗ ಶಾಲೆಯಲ್ಲಿ ಹಾಗೂ ಹಾಸ್ಟೇಲ್‌ನಲ್ಲಿ ಪಡೆದ ಜೀವನಾನುಭವಗಳನ್ನು ಅಭಿವ್ಯಕ್ತಿಸಿದ್ದಾರೆ.

"ನಾನು ಐದನೆ ತರಗತಿ ಓದಲು ನಮ್ಮ ಹಳ್ಳಿಯಿಂದ ಮೂರು ಕಿ.ಲೋ.ಮೀ. ದೂರದ ವಡ್ಡರಗೆರೆಗೆ ಹೋಗಲು ಶುರು ಮಾಡಿದೆ. ಆಗ ಹೇಳತಿರದ ಬರಗಾಲ. ನನಗೆ ಮುತವರ್ಜಿಯಿಂದ

ಪಾಠಹೇಳಿಕೊಡುತ್ತಿದ್ದ ನನ್ನ ಅಣ್ಣ ಯಾವುದೋ ನಿಗೂಢ ಕಾರಣಕ್ಕಾಗಿ ತುಂಬಾಡಿ ಹೊಸಕೆರೆ ಬಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದ. ಅಣ್ಣನ ಸಾವು ಮತ್ತು ಮನೆಯ ಬಡತನದಿಂದಾಗಿ ತನ್ನ ಓದು ಮುಂದುವರೆಸಲು ಸಾಧ್ಯವಿಲ್ಲದಂತಾಯಿತು. ಅಂದು ಅಪ್ಪ ಅಣ್ಣನ ಶವವನ್ನು ತುಂಬಾಡಿ ಹೊಸಕೆರೆಯ ಹಿಂದೆ ಮಣ್ಣು ಮಾಡಿ ಬಂದಿದ್ದ. ಅಣ್ಣ ಯಾವಾಗಲು ನನ್ನನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಓದಿಸುತ್ತಿದ್ದ. ನಮ್ಮ ಮನೆಯಲ್ಲಿ ನಾನಾದರೂ ಓದಿ ಮುಂದೆ ಬರಬೇಕೆಂಬ ಹಂಬಲವಾಗಿತ್ತು"[೭] ರಾಮಯ್ಯನವರು ತಾನು ಚಿಕ್ಕವನಿಗಿದ್ದ ಅಣ್ಣನು ಶಾಲೆಯಲ್ಲಿ ಶಿಕ್ಷಕರಿಂದ ತಿರಸ್ಕಾರಕ್ಕೆ ಒಳಪಟ್ಟು ಮನನೊಂದು ದಲಿತರಾಗಿ ಹುಟ್ಟಿದ ನಮಗೆ ಸಮಾಜದಲ್ಲಿ ಶೋಷಣೆ ಮಾಡುವುದು ಶಾಲೆಯಲ್ಲಿ ಚೆನ್ನಾಗಿ ಓದುತ್ತಿದ್ದರೂ, ಶಿಕ್ಷಕರು ಅಸ್ಪೃಶ್ಯತೆಯ ಕಾರಣವಿತ್ತಿದ್ದರಿಂದ ಮನನೊಂದು ಆತ್ಮಹತ್ಯೆ ಮಾಡಿಕೊಂಡಿದ್ದ ಸ್ಥಿತಿಯನ್ನು ತಿಳಿಸುವ ಮೂಲಕ ತನ್ನ ವಿದ್ಯಾರ್ಥಿ ಜೀವನದ ಅನುಭವಗಳನ್ನು ಆತ್ಮಕಥನದಲ್ಲಿ ವಿವರಿಸಿದ್ದಾರೆ.

ತುಂಬಾಡಿ ರಾಮಯ್ಯನವರು ಆರನೆ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಕುಟುಂಬವು ಊಟಕ್ಕೂ ಗತಿಯಿಲ್ಲದೆ ಇರುವ ಪರಿಸ್ಥಿತಿಯಲ್ಲಿದ್ದಾಗ ತನ್ನ ಸಹ ಪಾಠಿಗಳಿಗೆ ಸಹಾಯ ಮಾಡುತ್ತಾ. ತಾನು ಅವರಿಂದ ಊಟ ಪಡೆದು ತಿಂದು ಶೈಕ್ಷಣಿಕ ಅನುಭವಗಳನ್ನು ಈ ಕೆಳಕಂಡಂತೆ ವಿವರಿಸುದ್ದಾರೆ. "ನಾನು ಆರನೇ ತರಗತಿಗೆ ಬಂದಾಗ ಪೇಲಾಗಿದ್ದ ಇಬ್ಬರು ಹುಡುಗರು ಅಲ್ಲಿ ಗೆಳರಾದರು. ಒಬ್ಬ ಫಕಿರಪ್ಪನ ಪಾಳ್ಯದವನು, ಇನ್ನೊಬ್ಬ ಮಲ್ಲಪ್ಪನ ಹಳ್ಳಿಯವನು ದಿಟ್ಟ ಬಡ್ಡಿಗೆ ನೇರವಾಗಿದ್ದವರು. ಇಬ್ಬರಿಗೂ ಸಾಕಷ್ಟು ಗದ್ದೆ, ತೋಟ ತುಡಿಕೆಗಳಿದ್ದುದರಿಂದ ಅವರ ಮನೆಯಲ್ಲಿ ಬೇಸಾಯದ ಕೆಲಸ ಜಾಸ್ತಿ, ಇದರಿಂದಾಗಿ ಅವರಿಬ್ಬರೂ ಮನೆಯಲ್ಲಿ ಬರೆದುಕೊಂಡು ಬರಬೇಕಾಗಿದ್ದ ಪಾಠಗಳನ್ನು ಎಂದೂ ಬರೆದುಕೊಂಡು ಬರದೆ ಮೇಸ್ಟರಿಂದ ಯಾವಾಗಲೂ ಏಟು ತಿನ್ನುತ್ತಿದ್ದರು. ಏಟು ತಪ್ಪಿಸಿಕೊಳ್ಳಲು ಅವರಿಬ್ಬರೂ ಒಂದು ಉಪಾಯ ಕಂಡುಕೊಂಡರು. ಏನೆಂದರೆ ಅವರು ಬರೆದುಕೊಂಡು ಬರಬೇಕಾದ ಪಾಠಗಳನ್ನು ನನ್ನ ಕೈಯಿಂದ ಬರೆಸಿಕೊಂಡು"[೮] ಅದಕ್ಕೆ ಪ್ರತಿಯಾಗಿ ತಾವು ತರುತ್ತಿದ್ದ ತಿಂಡಿಗಳಾದ ದೋಸೆ, ಚಪಾತಿ, ಇಡ್ಲಿಯನ್ನು ಪಡೆದು ಹೊಟ್ಟೆ ಹಸಿವನ್ನು ನೀಗಿಸಿಕೊಂಡು ವಿದ್ಯಾಭ್ಯಾಸ ಮಾಡಿದ ಬಗೆಯನ್ನು ನೋಡಬಹುದು.

ಆತ್ಮಕಥನದ "ತಬ್ಬಲಿಯು ನೀನಾದೆ ಮಗನೆ" ಪ್ರಸಂಗದಲ್ಲಿ ರಾಮಯ್ಯನ ತಾನು ಏಳನೇ ತರಗಿತಿಯಲ್ಲಿ ಓದುತ್ತಿದ್ದಾಗ ಚೆನ್ನರೆಡ್ಡಿ ಶಿಕ್ಷರು ತುಮಕೂರಿಗೆ ವರ್ಗಾವಾದಗ ಲೇಖಕರ ಮತ್ತು ತನ್ನ ಊರಿನ ಹನುಮಂತರಾಯನನ್ನು ತುಮಕೂರಿಗೆ ಕರೆತಂದು ಅವರಿಗೆ ಹಾಸ್ಟೆಲ್ ವ್ಯವಸ್ಥೆ ಮಾಡಿ, ವ್ಯಾಸಂಗ ಮಾಡಲು ಪ್ರೋತ್ಸಾಹ ನೀಡಿದ ಸಂಗತಿಗಳು ಹಾಗೂ ತಮ್ಮ ಬಡತನ ಸ್ಥಿತಿಯನ್ನು ಕಂಡ ಶಿಕ್ಷಕರು ದಲಿತ ವಿದ್ಯಾರ್ಥಿಗಳಿಗೆ ಸಹಾಯ ಮಾಡಿದ ಹಾಗೂ

ಹಾಸ್ಟೆಲ್‌ನಲ್ಲಿರುವ ವಾತವರಣದ ಬಗ್ಗೆ ತಾನು ತವರೂರು ಬಿಟ್ಟು ಬಂದು ಏಕಾಂಗಿಯಾಗಿ ತಂದೆ–ತಾಯಿ, ಊರಿನ ಪರಿಸರವನ್ನು ನೆನೆಯುತ್ತಾ. ಹಾಸ್ಟೆಲ್‌ನಲ್ಲಿ ಹಿರಿಯ ವಿದ್ಯಾರ್ಥಿಗಳು ಟ್ರಂಕ್‌ಗಳನ್ನು ಒಡೆದು. ತಂದಿದ್ದ ತಿಂಡಿಗಳನ್ನು ಚಕ್ಕುಲಿ, ಕೊಡಬಳೆ ಮುಂತಾದ ವಸ್ತುಗಳನ್ನು ಕದ್ದು ತಿನ್ನುವಂತಹ ಹಾಸ್ಟೆಲ್‌ನ ಪರಿಸರದ ಬಗ್ಗೆ ವಿಶ್ಲೇಷಿಸಿದ್ದಾರೆ.

ತುಂಬಾಡಿ ರಾಮಯ್ಯನವರು ಶಾಲೆಯ ರಜಾದಿನಗಳಲ್ಲಿ ಪೀರ್ಯಣ್ಣ ಎಂಬುವರ ಹತ್ತಿರ ಗಾರೆ ಕೆಲಸಕ್ಕೆ ಹೊಗುತ್ತಿದ್ದ. ಮತ್ತು ಕೂಲಿಯಿಂದ ಬಂದ ಸಂಪಾದನೆಯನ್ನು ಮನೆಗೆ ಕೊಡುತ್ತಿದ್ದ ತನ್ನ ಶೈಕ್ಷಣಿಕ ಜೀವನದ ವಿವರಿಸಿದ್ದಾರೆ. "ಒಮ್ಮೆ ದಾಸರಹಳ್ಳಿ ಕೆರೆಯ ತೂಬು ರಿಪೇರಿಯನ್ನು ಮಾಡುತ್ತಿದ್ದರು ಆಗ ಶಾಲೆಗೆ ರಜೆ. ಇದ್ದುದರಿಂದ ನಾನು ಅವರೊಡನೆ ಕೆಲಸ ಮಾಡಲು ಹೋಗಿದ್ದೆ ಆ ಕೆಲಸ ಮಾಡುತ್ತಿದ್ದ ಅವರ ಭಾವಮೈದುನ ಬಿ.ಎಸ್.ಸಿ. ಓದುತ್ತಿದ್ದು ರಜೆ ಕಳೆಯಲು ಅವರ ತಂಗಿಯ ಮನೆಗೆ ಬಂದಿದ್ದರು. ಬೇಸರಿಕೆ ಕಳೆಯಲು ನಾನು ಕೆಲಸ ಮಾಡುತ್ತಿರುವೆಲ್ಲಿಗೆ ಬಂದು ಕುಳಿತ್ತಿದ್ದರು"[**] ಹೀಗೆ ಲೇಖಕ ತನ್ನ ಶೈಕ್ಷಣಿಕ ಜೀವನಾನುಭವಗಳ ಆತ್ಮಕಥನದಲ್ಲಿ ಬರೆದಿದ್ದಾರೆ. ಇದಲ್ಲದೆ ತಾನು ಹೈಸ್ಕೂಲ್‌ನಲ್ಲಿ ವ್ಯಾಸಂಗ ಮಾಡುವಾಗ ಪ್ರತಿನಿತ್ಯವು ಮನೆಯಲ್ಲಿ ಕೂಲಿ ಮಾಡುವುದರ ಜೊತೆಗೆ ದನಕರುಗಳಿಗೆ ಹುಲ್ಲು ಕೊಯ್ದು ತಂದು ಶಾಲೆ ಹೋಗುತ್ತಿರುವ ಶೈಕ್ಷಣಿಕ ಜೀವನವನ್ನು ಈ ಆತ್ಮಕಥನದಲ್ಲಿ ಕಾಣಬಹುದು.

ತುಂಬಾಡಿ ರಾಮಯ್ಯನವರು ತುಮಕೂರಿನಲ್ಲಿ ೧೯೭೭ರಲ್ಲಿ ಬಿ.ಎ. ಪದವಿಗೆ ಸೇರಿದಾಗ ಆಗ ತಾವರಕೆರೆಯ ಗೋವಿಂದಯ್ಯ, ಹೆತ್ತೇನಹಳ್ಳಿ ಮೂರ್ತಿ, ಪಾರ್ವತಿ ಮಲ್ಲಯ್ಯ, ದೊಡ್ಡ ತಿಮ್ಮಯ್ಯ, ಬಿ.ಸಿ. ಸುಬ್ಬರಾಯ ಮತ್ತು ಸಂಜೀವಪ್ಪ ಮುಂತಾದ ಗೆಳೆಯರು ಜೊತೆಗಿದ್ದು ಎಲ್ಲಾರೂ ಒಂದೇ ಕುಟುಂಬದ ಸದಸ್ಯರಂತೆ ಇದ್ದರು. ಆ ಸಂದರ್ಭದಲ್ಲಿ ತುಮಕೂರಿನಲ್ಲಿ ದಲಿತ ಮತ್ತು ಇತರೆ ಜಾತಿಯ ವಿದ್ಯಾರ್ಥಿಗಳಿಗೆ ಘರ್ಷಣೆ ಆದ ಪ್ರಸಂಗವನ್ನು ತಿಳಿಸಿದ್ದಾರೆ.

ದಲಿತ ವಿದ್ಯಾರ್ಥಿಗಳಿಗೂ ಮತ್ತು ಇತರೆ ಜಾತಿಯ ವಿದ್ಯಾರ್ಥಿಗಳಿಗೂ ಯಾವ ಕಾರಣಕ್ಕೊ ಏಗೊ ಮಾರಾಮರಿ ಹೊಡೆದಾಟ ಶುರುವಾಯಿತು. ದಲಿತ ವಿದ್ಯಾರ್ಥಿಗಳಿಗೆ ಸಿಕ್ಕ ಸಿಕ್ಕ ಕಡೆಯಲೆಲ್ಲಾ ಒಡೆತಗಳು ಬೀಳುತ್ತಿದ್ದವು. ಇದರಿಂದ ನಗರದಲ್ಲಿ ಇನ್ನಷ್ಟು ದೊಂಬಿಯಾಗಬಹುದೆಂದು ತುಮಕೂರಿನಲ್ಲಿದ್ದ ದಲಿತ ಹಾಸ್ಟೆಲ್‌ಗಳಿಗೆ ಪೋಲೀಸ್‌ರ ಕಾವಲು ಏರ್ಪಾಟಾಗಿತ್ತು. ಹಳ್ಳಿಗಳಿಂದ ಬಂದಿದ್ದ ದಲಿತ ವಿದ್ಯಾರ್ಥಿಗಳೆಲ್ಲಾ ಹೆದರಿ ಮರಳಿ ಹಳ್ಳಿಗಳಿಗೆ ಸೇರಿಕೊಳ್ಳುತ್ತಿದ್ದರು.

ತುಂಬಾಡಿ ರಾಮಯ್ಯನವರು ತಮ್ಮ ಊರಲ್ಲಿ ವಿದ್ಯಾಭ್ಯಾಸ ಮಾಡುವಾಗ ಹಾಗೂ ಪಿ.ಯು.ಸಿ. ಓದುವ ಕೊರಟಗೆರೆಯಲ್ಲಿ ಹಾಸ್ಟೆಲ್‌ನಲ್ಲಿ ಇದ್ದುಕೊಂಡು ಓದುತ್ತಿದ್ದ ಇಂತಹ ಘಟನೆಗಳನ್ನು ಕಂಡರಿಯಲಿಲ್ಲ. ಇಂತಹ ಗಲಾಟೆಯಲ್ಲಿ ದಲಿತರ ಪರವಾಗಿ ತುಮಕೂರಿನ

ಮಾದಿಗರು ಹಟ್ಟಿ ಜನ ಇವರ ರಕ್ಷಣೆ ನೀಡುತ್ತಾ ಬಂದರು. ಅದೇ ದಿನಗಳಲ್ಲಿ ದಲಿತ ಸಂಘರ್ಷ ಸಮಿತಿಯು ರಾಜ್ಯದಲ್ಲಿ ಪ್ರಾರಂಭಗೊಳ್ಳುತ್ತಿತ್ತು. ತುಮಕೂರಿನಲ್ಲಿ ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಘಟವನ್ನು ಸ್ಥಾಪಿಸುವ ಉದ್ದೇಶದಿಂದ ನಗರ ಸಭೆ ಆವರಣದಲ್ಲಿ ಒಂದು ಬಹಿರಂಗ ಸಂಭೆಯನ್ನು ಏರ್ಪಡಿಸಲಾಗಿತ್ತು. ಇದೇ ಕಾಣದಿಂದ ಬಿ. ಕೃಷ್ಣಪ್ಪನವರು ಮೊದಲ ಬಾರಿಗೆ ತುಮಕೂರಿಗೆ ಬಂದರು. ಸಭೆಯನ್ನು ಉದ್ದೇಶಿಸಿ ತರ್ಕಬದ್ಧವಾದ ಭಾಷಣ ಮಾಡಿದರು. ಲೇಖಕರು ಮಾತ್ರ ಮುಗ್ದನಾಗಿ ಇವರ ಆಕರ್ಷವಾದ ಭಾಷಣವನ್ನು ಕೇಳಿ ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತನಾಗಿ, ದಲಿತ ಸಂಘರ್ಷ ಸಮಿತಿಯ ಪ್ರತಿಯೊಂದು ಮೆರವಣಿಗೆಗಳಲ್ಲಿ ಭಾಗವಹಿಸುವ ಮೂಲಕ ತುಮಕೂರಿನ ಮಂಡಿಪೇಟೆಯ ಹಮಾಲ ಸಂಘ, ಮಾಲೀಕರು ನಿಡುತ್ತಿದ್ದ ಕಿರುಕುಲಕ್ಕೆ ಸಹಿಸಲಾಗದೆ ಸಂಘವ ಕಟ್ಟಲು ಪ್ರಾರಂಭ ಮಾಡಿ, ದಲಿತ ಸಂಘರ್ಷ ಸಮಿತಿಗೆ ಸೇರುಕೊಂಡು, ದಲಿತೇತರಲ್ಲಿರುವ ದಲಿತರು ಈ ಸಂಘರ್ಷ ಸಮಿತಿಗೆ ಪ್ರೋತ್ಸಾಹ ನಿಡುವುದರ ಮೂಲಕ, ತುಂಬಾಡಿಯವರು ಇಂತಹ ಸಭೆ, ಸಮಾರಂಭಗಳಲ್ಲಿ ಭಾಗವಹಿಸಿ ದಲಿತರನ್ನು ಸಮಾಜದಲ್ಲಿ ಶೋಷಣೆ ಮಾಡುವುದರ ವಿರುದ್ದ ದಲಿತರೆಲ್ಲರನ್ನೂ ಒಗ್ಗೂಡಿಸುವ ಕಾರ್ಯದಲ್ಲಿ ತೊಡಗಿ ದಲಿತ ಪ್ರಜ್ಞೆಯನ್ನು ವಿದ್ಯಾರ್ಥಿ ದಸೆಯಿಂದಲೆ ಬಳಸಿಕೊಂಡಿದನ್ನು ನೋಡಬಹುದು.

ಬಿ.ಎ. ಪಾಸು ಮಾಡುತ್ತಿದ್ದಂತೆಯೇ ಆಹಾರ ಇಲಾಖೆಯಲ್ಲಿ ಸ್ಟೈಫಂಡ್‌ರಿ ಕೆಲಸಕ್ಕೆ ಸಿಕಿತು. ಇದರೊಡನೆ ಓದನ್ನು ಮುಂದುವರಿಸಬೇಕೆಂದು ಎಲ್.ಎಲ್.ಬಿ.ಗೆ ಸೇರಿದೆ. ಎಲ್.ಎಲ್.ಬಿ. ಹಾಸ್ಟೆಲ್‌ನಲ್ಲಿ ಊಟ, ತಿಂಡಿ, ಮಾಡಿಕೊಂಡು, ಸ್ಟೇಫಂಡ್‌ರಿ ಹಣದಲ್ಲಿ ಅಲ್ಲಿ–ಇಲ್ಲಿ ಕೆಲಸಗಳಿಗಾಗಿ ಅರ್ಜಿ ಹಾಕುತ್ತಾ ಉಳಿದ ಹಣವನ್ನು ಮನೆಗೆ ಕಳುಹಿಸುತ್ತಿದ್ದರು. ಉಳಿದ ಪುಡಿಕಾಸಿನಲ್ಲಿ ದಲಿತ ಸಂಘರ್ಷ ಸಮಿತಿಯ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾ ಖರ್ಚುಮಾಡಿಕೊಂಡು ತನ್ನ ವ್ಯಾಸಂಗ ಮಾಡುತ್ತಿದ್ದುದ್ದನ್ನು ಕಾಣಬಹುದು

ಕೇರಿಯಿಂದ ತೇರಿಗೆ

ಯಲ್ಲಪ್ಪ ಕೆಕೆಪುರವರ ತಮ್ಮ ಆತ್ಮಕತೆಯಲ್ಲಿ ಹೈಸ್ಕೂಲ್‌ವರೆಗಿನ ಶಿಕ್ಷಣವನ್ನು ಕುರಿತು ಶೈಕ್ಷಣಿಕ ಬದುಕಿನ ಸ್ಥಿತಿಯನ್ನು ಹಾಗೂ ಬಾಲ್ಯದಲ್ಲಿ ಜೀವನಾನುಕ್ರಮವನ್ನು ಅಧ್ಯಯನದಲ್ಲಿ ಒಳಪಡಿಸಿಕೊಂಡಿದ್ದೇನೆ. ಲೇಖಕರು ದಲಿತರನ್ನು ಸಮಾಜದಲ್ಲಿ ಸಮುದಾಯವನ್ನು ಶೋಷಣೆ ಮಾಡುತ್ತಿದ್ದ ಧಣಿಗಳ ವಿರುದ್ಧದ ಪ್ರತಿಭಟನೆ ಮಾಡದೆ ತಮ್ಮ ಬಡತನದಿಂದ ಕೂಲಿ ಮಾಡುತ್ತಾ, ಮನೆಯಲ್ಲಿ ಕೆಲಸ ಮಾಡುತ್ತಾ ವಿದ್ಯಾಭ್ಯಾಸ ಮಾಡಿದ್ದನ್ನು ವಿವರಿಸಿದ್ದಾರೆ. "ನೀ ಇಷ್ಟು ಮುದ್ದು ಮಾಡಿ ತಲೆ ಮೇಲೆ ಕೂಡಿಸಿಕೊಂಡ್ರೆ... ಇವಾ ಹಾಳಾಗ್ತಾನೆ, ದನ ಕರ, ಮಕೆಗಳನ್ನು

ಕಾಯಲು ಸೋಪ್ತಿಯಾಗುತ್ತಾನೆ. ಅಡಕಲ ಗಡಿಗೆಗಳನೆಲ್ಲಾ... ಒಡೆದು ಮನೆ ಮಂದಿಗೆಲ್ಲಾ ಕವರಿ ಬಡಿ ಬಂದಾನೆ ಇವ್ನ ಕಂಬಕ್ಕೆ ಕಟ್ಟಿ ನಗಸುತ್ತಿನಿಂದ ಹೊಡೆದು ಶಾಲೆಗೆ ಬಿಟ್ಟು ಬಾ" ಎಂದು ಅಪ್ಪನಿಗೆ ಚೊಂಗು ಟಿಸ್ಸುಕು ಹೇಳಿದ್ದೆ, ತಡ ಅಪ್ಪ ಬಿದ್ಧಬ್ರು ಕುಟಿಯಾದ"[೧೦] ಮನೆಯಲ್ಲೂ ಆಯಾಗಿ ಆಡುತ್ತಾ ನೆಲಿಯುತ್ತಾ, ತಂದೆಯ ಜೊತೆಗೆ ಸಳ್ಳೆ, ಹೆಂಡ ಕುಡಿಯುತ್ತಾ ಇದ್ದ ಮಗನನ್ನು ವಿದ್ಯಾವಂತನನ್ನಾಗಿ ಮಾಡಲು ತಾಯಿಯು ತಂದೆಗೆ ಶಾಲೆಗೆ ಸೇರಿಸಲು ಕಿವಿ ಮಾತು ಹೇಳಿದ್ದುದ್ದನ್ನು ತಾವಾದರೂ ಅನಕ್ಷರಸ್ಥರಾಗಿದ್ದ ಮಕ್ಕಳು ವಿದ್ಯಾವಂತರಾಗಬೇಕೆಂಬ ತಾಯಿ ಆಸೆಗಳನ್ನು ವಿವರಿಸಿದ್ದಾರೆ.

"ನಗಸುತ್ತು ಹರಿಯುವ ತನಕ ಬಡಿದ ಶಾಲೆಗೆ ತನ್ನ ಎಳೆದುಕೊಂಡು ಹೋಗಿ ಬಿಟ್ಟು ಬಂದ. ಶಾಲೆಯೆಂದರೆ... ನನಗೆ ಬಂದಿಖಾನೆಯಾಗಿತ್ತು. ನನ್ನ ಕೇರಿಯವರು ಅಲ್ಲಿ ಇರಲಿಲ್ಲ. ಎಲ್ಲಾ ಅಪರಿಚತರೆ ಸುವಾಸನೆಯಿಂದ ಉಸಿರು ಗಟ್ಟಿಸುತ್ತಿತ್ತು. ನನ್ನನ್ನು ಯಾರು ಮುಟ್ಟಿಸಿಕೊಳ್ಳುತ್ತಿರಲಿಲ್ಲ. ಅದು ಮೇಷ್ಟ್ರು ಮಾತ್ರ ಕೊಲಿನಿಂದ ನನ್ನ ಮುಟ್ಟಿಸಿಕೊಳ್ಳುತ್ತಿದ್ದ. ನೀರಡಿಕೆಯಾದರೆ, ಬೊಗಸೆಗೆ ಮೇಲಿಂದ ನೀರು ಎತ್ತಿ ಹಾಕುತ್ತಿದ್ದರು. ನನ್ನನ್ನು ಚಿಂಪಾಂಜಿಯಂತೆ ನೋಡುತ್ತಿದ್ದರು. ಎಲ್ಲರೂ ಕಟ್ಟಿಗೆ ಮಣೆ ಮೇಲೆ ಕುಂತಿರುತ್ತಿದ್ದರು ನಾ ಮಾತ್ರ ದೂರದ ನೆಲದ ಮೇಲೆ ಕುಂತಿರುತ್ತಿದ್ದೆ ಒಬ್ಬನೇ ಆಟವಾಡಬೇಕು, ಜೈಲೆನಿಸಿತು. ಮನೆಯಲ್ಲಿದ್ದಂತೆ ಇರಲು ಆಗದೆ ವಿಲವಿಲ ಒದ್ದಾಡುತ್ತಿದ್ದೆ. ಅಕ್ಷರ ತಿದ್ದುವ, ಬರೆಯುವ ಕೆಲಸ ನನಗೆ ಆಗದ ಕೆಲಸವೆನಿಸಿತು. ಬರತ್ತದಿಂದಲೆ, ಸ್ಲೇಟನಿಂದ ಬೆರಳುಗಳ ಗಣ್ಣಿಗೆ ಹೊಡೆಯುತ್ತಿದ್ದರು, ಬಗ್ಗಿಸಿ ನಿಲ್ಲಿಸುತ್ತಿದ್ದರು"[೧೧] ಲೇಖಕರು ಚಿಕ್ಕಂದಿನಿಂದ ಮನೆಯಲ್ಲಿ ತಂದೆ-ತಾಯಿಗಳ ಜೊತೆಗೆ ಸುಖ ಸಂತೋಷದಿಂದ ಇದ್ದು. ಶಾಲೆಗೆ ಬಂದಾಗ ಅಲ್ಲಿ ದಲಿತನಾಗಿದ್ದಕ್ಕೆ ಮೇಲ್ವರ್ಗದವರ ಹುಡುಗರ ಜೊತೆಯಲ್ಲಿ ಕುಂದ್ರಿಸದೆ, ಬರಿ ನೆಲದಲ್ಲಿ ಕುಂದ್ರಿಸುವ ಹಾಗೂ ನೀರನ್ನು ಕುಡಿಯಲು ಬೋಗಸೆಯಲ್ಲಿ ಹಾಕುವುದನ್ನು ಕಂಡು ಶಾಲೆಯು ಬಂದಿಖಾನೆಯಾಗಿತ್ತು. ಇಲ್ಲಿ ಪರಿಚಯಸ್ಥರು ಇಲ್ಲ ತಮ್ಮ ಕೇರಿಯ ಒಬ್ಬ ಹುಡುಗನು ಇಲ್ಲದ್ದನ್ನು ಕಂಡು, ಶಿಕ್ಷಕರು ತಾರತಮ್ಯ ಮಾಡುವುದನ್ನು ವಿವರಿಸಿದ್ದಾರೆ. ಹೀಗೆ ಶಾಲೆಗೆ ಹೋಗುವುದನ್ನು ಅಭ್ಯಾಸ ಮಾಡಿಕೊಂಡು, ಶಾಲೆಯಲ್ಲಿ ಹುಡುಗರ ಹತ್ತಿರ ಕಿಟಲೆ ಮಾಡುತ್ತಾ, ಸಳ್ಳೆ, ಹೆಂಡವನ್ನು ಕುಡಿಯುತ್ತಿದ್ದನ್ನು ಬಾಲ್ಯದ ಶೈಕ್ಷಣಿಕ ಜೀವನವನ್ನು ನೋಡಬಹುದು. ಒಂದು ದಿನ ಎಲ್ಲಯ್ಯ ಮೇಷ್ಟ್ರ ರಾತ್ರಿ ಪಾಠಕ್ಕೆ ಅಪ್ಪನನ್ನು ಕರೆಸಿ ಬುದ್ದಿವಾದ ಹೇಳಿದ್ದನ್ನು. 'ಒಂದು ದಿನ ಡಿ.ಎಲ್ಲಯ್ಯ ಮೇಷ್ಟ್ರು, ನನ್ನಪ್ಪನನ್ನು ರಾತ್ರಿ ಪಾಠದ ಮನೆಗೆ ಕರೆದು ಕೊಂಡರು. ನನಗೆ ಒಮ್ಮೆಲೆ ಅಳಕು ಶುರುವಾಯಿತು. ಅಪ್ಪ ಒಂದು ಅರ್ಧ ಘಂಟೆಯಯಿತು ಬಾಗಿಲ ಬಳಿ ಕಿಟಕಿ ಹತ್ತಿರ ನನ್ನಕ್ಕ ಶಾಂತಕ್ಕ, ಎಲ್ಲಕ್ಕ ತಮ್ಮಂದಿರು ಕಿವಿ ತೆರೆದು ನಿಂತಿದ್ದರು.

ಅಪ್ಪ "ಏನ್..... ಮೇಷ್ಟ್ರೇ ಕರೆಸಿದ್ರಂತೆ "ಅಪ್ಪ ಮೆಲ್ಲಗೆ ಊಸರಿಸಿದ "ಸ್ವಲ್ಪ ಹೊತ್ತೂ ಕೂತು, ನಿನ್ನ ಮಗನ ಅವತಾರ ನೋಡ್ರಿ" ಎಂದು ಮೇಷ್ಟ್ರ ಅಪ್ಪನಿಗೆ ತೋರಿಸಿ ಸಲಹೆ ನೀಡಿದರು.'

"ನೋಡಿದ್ರಾ ಯಜಮಾನ್ರೇ.... ನಿಮ್ ಮಗನಿಗೆ ಇನ್ನು ಮೇಲೆ ಹೆಂಡ ಸಾರಾಯಿ ಕುಡಿಯಬಾರದು, ನೀವು ಮಕ್ಕಳ ಕೈಲಿ ಹೆಂಡ, ಸಾರಾಯಿ, ಬೀಡಿ ಸಿಗರೇಟ್ ತರ್ಸಿಕೊಳ್ಳಬಾರ್ದು, ಹಂಗಿದ್ರೆ ಪಾಠಕ್ಕೆ ಕಳ್ಸಿ ಇಲ್ಲಾವಾದ್ರೆ ಬೇಡ" ಮೇಷ್ಟ್ರು ಎಲ್ಲರಿದುರಿಗೆ ಸ್ಪಷ್ಟಪಡಿಸಿದರು, ಅಪ್ಪ ಕ್ಷಣ ಯೋಚನಾಮಗ್ನನಾದ.

ನಾನು ಬಾಯಿ ಒಣಗಿಸಿಕೊಂಡು ಕುಳಿತೆ, "ಆಯ್ತು ಮೇಷ್ಟ್ರೇ... ನಿವೇಳಿದಂತೆ! ನನ್ನ ಮಗ್ನ ಬುದ್ಧಿವಂತನನ್ನಾಗಿ ಮಾಡೋ ಜವಬ್ದಾರಿ ನಿಮ್ದು ಅಪ್ಪ ಅಷ್ಟನ್ನು ಹೇಳಿ ಕೈ ಮುಗಿದು ಎದ್ದು ಹೋದ ಇಪ್ಪತ್ತೂ ಮಂದಿ ಹುಡುಗ ಹುಡುಗಿಯರು.. ಗುಂಪು ಕ್ಷಣ ಶಬ್ದಕ್ಕೆ ನಾಚಿ ನೀರಾದೆ. ನನ್ನ ಕಿವಿ, ಹಿಂಡಿ, ತಲೆ ಮೇಲೆ ಎತ್ತಲು ಹೇಳಿ "ಇನ್ನೊಮ್ಮೆ ನೀ ಕುಡಿದಿದ್ದು ಕಂಡು ಬಂದ್ರೆ..... ನಿನ್ನ ಚರ್ಮ ಸುಲಿದು ನಾಯಿ ನರಿಗೆ ಹಾಕಿ ಬಿಟ್ಟೇನು. ರ್‍ಯಾಸ್ಕಲ್... ನೋಡೊಕೆ ಚೊಟುದ್ದ ಇದ್ದಿಯಾ ಈಗಲೆ ಕುಡಿತ, ಬೀಡಿ, ಸಿಗರೇಟು ಬೇಕು ನಿನ್ಗೆ Hopelees ...... ಎಂದು ಮೇಷ್ಟ್ರು ಮುಂಗಾರಿನ ಗುಡಿಗಿನಂತೆ ಗುಡುಗಿದರು, ನಾ ಪಾತಾಳಕ್ಕೆ ಅಲುವ ಮೋರೆ ಮಾಡಿಕೊಂಡು "ಇಲ್ಲಾ" ಎಂದು ತಲೆ ಅಲ್ಲಾಡಿಸಿದೆ"[೨] ಯಲ್ಲಪ್ಪ ಕೆಕೆಪುರವರು ತಾನು ವಿದ್ಯಾಭ್ಯಾಸ ಮಾಡಲು ಶಾಲೆಗೆ ಸೇರಿದಾಗ ಕುಟುಂಬದಲ್ಲಿ ಇದ್ದಂತೆ ತನ್ನ ನಡೆವಳಿಕೆಗಳನ್ನು ಶಾಲೆಯಲ್ಲಿ ಹಾಗೂ ರಾತ್ರಿ ಪಾಠ ಶಾಲೆಯಲ್ಲಿ. ಮುಂದುವರೆಸುತ್ತಾ ಹೊಗಿದ್ದನ್ನು ಕಂಡ ಡಿ.ಎಲ್ಲಯ್ಯ ಮೇಷ್ಟ್ರು ತಂದೆಯನ್ನು ಕರೆಸಿ ಮಕ್ಕಳಿಂದ ಹೆಂಡ ಸಾರಾಯಿ, ಬೀಡಿ, ಸಿಗರೇಟು, ತರಿಸಿಕೊಳ್ಳುವುದು ಹಾಗೂ ನಿನ್ನ ಮಗನಿಗೆ ಸಳ್ಳೆ ಹೆಂಡ ಕುಡಿಯುವುದನ್ನು ಬಿಡಿಸಬೇಕು ಇಲ್ಲವಾದ್ರೆ ಮಗನನ್ನು ಶಾಲೆಗೆ ಸೇರಿಸಿಕೊಳ್ಳುವುದಿಲ್ಲ ಎಂಬುದನ್ನು ತಿಳಿಸಿದರು. ಯಲ್ಲಪ್ಪನಿಗೆ ವಿದ್ಯಾರ್ಥಿಗಳ ನಡುವೆ ಮುಜುಗರ ಉಂಟಾಗಿ, ತನ್ನ ಛಲದಿಂದ ಕುಡಿತ, ಸಳ್ಳೆ ತಿನ್ನುವುದನ್ನು ಬಿಟ್ಟು ತಂದೆಗೆ ಬುದ್ಧಿವಾದ ಹೇಳುವ ಮೂಲಕ. ಶಾಲೆಯಲ್ಲಿ ಎಲ್ಲಾ ವಿದ್ಯಾರ್ಥಿಗಳಿಗಿಂತ, ತಿಂಗಳು, ವಾರ, ಮಗ್ಗಿಯನ್ನು ಕಂಠಪಾಠ ಮಾಡಿ ಶಿಕ್ಷಕರಿಗೆ ಒಪ್ಪಿಸಿ ಒಳ್ಳೆಯ ವಿದ್ಯಾವಂತನೆನಿಸಿಕೊಂಡು. ಶೈಕ್ಷಣಿಕ ಜೀವನದಲ್ಲಿ ಓದುವುದರಲ್ಲಿ ಎಲ್ಲಾ ವಿದ್ಯಾರ್ಥಿಗಳಿಗಿಂತ ಬುದ್ಧಿವಂತನಾಗಿದ್ದನ್ನು ವಿವರಿಸಿದ್ದಾರೆ.

ತಂದೆಗೆ ಕಾಯಿಲೆ ಬಂದು ನಿಧನರಾದಾಗ ತನ್ನ ಮಾವ ಬಂಜೆಪ್ಪನು ಮನೆಯಲ್ಲಿ ಇದ್ದ ದನ, ಕರ, ಹಸು, ಮೇಕೆ ಎಲ್ಲವನ್ನು ಮಾರಿ ಕುಡಿದು ಮಜಾಮಾಡಿ ಮನೆಯಲ್ಲಿರುವ ಪ್ರತಿಯೊಂದು ವಸ್ತುಗಳನ್ನು ಖಾಲಿ ಮಾಡಿದಾಗ ಯಲ್ಲಪ್ಪನವರ ಕುಟುಂಬವು ದಿನದಿಂದ

ದಿನಕ್ಕೆ ಕಷ್ಟದಲ್ಲಿ ನಲುಗಿದಾಗ, ತಂದೆಯ ಸಾವಿನನಂತರ ಎರಡು ವರ್ಷಗಲು ಸುಖವಾಗಿದ್ದು, ಊಟಕ್ಕೂ ಗತಿಯಿಲ್ಲದಂತೆ ಪರಿಸ್ಥಿತಿ ಬಂದಾಗ ಲೇಖಕರು ತನ್ನ ವಿದ್ಯಾಭ್ಯಾಸ ಮಾಡಲು ಶಿಕ್ಷಕರ ಮನೆಯಲ್ಲಿ ಕೆಲಸ ಮಾಡುತ್ತಾ ಓದಿನಲ್ಲಿ ತಲ್ಲಿನನಾದ ಬಗೆಯನ್ನು ಕುರಿತಂತೆ ಹೀಗೆ ಹೇಳಿದ್ದಾರೆ. “ಆಗ ಎಲ್ಲಯ್ಯ ಮೇಷ್ಟ್ರು ನಮ್ಮ ಕಸ ಮುಸುರೆ ಗುಡಿಸಿಕೊಂಡು ನೀರು ಕಟ್ಟಿಗೆ ತಂದುಕೊಂಡು, ರಾತ್ರಿ ಪಾಠಹೇಳಿಸಿಕೊಂಡು ನಯವಿನಯವಾಗಿ... ಇರಬೇಕೆಂದು “ನನ್ಗ ಅಜ್ಞಾನಪಿಸಿದರು. ವಿನಯದಿಂದಲೇ ಅಮ್ಮನೊಂದಿಗೆ ತಲೆಯಲ್ಲಾಡಿಸಿದೆ. ಮೇಷ್ಟ್ರು ಖುಷಿಗೊಂಡರು ಅವರಿಗೂ ಅದೇ ಬೇಕಾಗಿತ್ತು. ಮದುವೆ ಮಾಡಿಕೊಂಡಿರಲಿಲ್ಲ ಒಬ್ಬಂಟಿಗರಿದ್ದರು. ನಾ ನಿತ್ಯವೂ ನಮ್ಮ ಮನೆಯಿಂದ ಒಂದುಗಳಾಸು, ಹಾಲುಸ, ಮಜ್ಜಿಗೆ, ಮೊಸರನ್ನು ಇವರಿಗೆ ತಂದು ಕೊಡುತ್ತಿದ್ದೆ. ಈ ಮೊದಲು ಕಸ, ಮುಸುರೆ, ಸಗಣಿಯಿಂದ ಸಾರಿಸಲು ಬರುತ್ತಿದ್ದ ಹೆಂಗಸರನ್ನು ಬಿಡಿಸಿ, ಅವರು ನಿರ್ವಹಿಸುವ ಕೆಲಸಗಳನೆಲ್ಲಾ ಹಂತ ಹಂತವಾಗಿ ಮಾಡತೊಡಗಿದೆ”[೧೩] ಬಡತನವಿದ್ದು ಓದುವುದಕೊಸ್ಕರ ತಂದೆಯನ್ನು ಕಳೆದುಕೊಂಡು. ಅಮ್ಮನಿಂದ ದೂರವಾಗಿ, ಶಿಕ್ಷಕರ ಆಳಾಗಿ, ಅಮ್ಮನಿಗೆ ಬಟ್ಟೆ ಹೊಟ್ಟೆಗೆ ಹೊರೆಯಾಗಿ ಓದುವ ಹವ್ಯಾಸದಲ್ಲಿ ತೊಡಗಿದರು. ಒಂದೊಂದು ದಿನ ಶಿಕ್ಷಕರ ಮನೆಯಲ್ಲೇ ಉಳಿದಿದ್ದ ಊಟ ಮಾಡಿ ಹಸಿವು ನಿಗಿಸಿಕೊಂಡು. ವಿದ್ಯಾಭ್ಯಾಸ ಮಾಡುತ್ತಿದ್ದರು.

ಬೇಸಿಗೆ ರಜೆಯಲ್ಲಿ ಎಲ್ಲಯ್ಯ ಮೇಷ್ಟ್ರು ತನ್ನ ಊರಿಗೆ ಹೊದಾಗ. ತನ್ನ ತಾಯಿಯ ಜೊತೆಗೆಯಲ್ಲಿ ಕುಟುಂಬವು ಬದುಕುಸಾಗಿಸಲು ಕೂಲಿಗೆ ಹೊಗುತ್ತಿದ್ದು. ಗೊಂಚಿಗಾರರ ಹೊಲದಲ್ಲಿ ಉಳ್ಳಾಗಡ್ಡೆ ಕಿತ್ತುವುದು, ಸೋಸುವು, ಗೆಸಿಗೆ ಹೊರುವುದಕ್ಕೆ ಹೋಗಿ ದುಡಿಯುವಂತಹ ಕ್ರಿಯಾ ಶೀಲತೆಯನ್ನು ಬಳಸಿಕೊಂಡರು ಏಳನೆಯ ತರಗತಿಯಲ್ಲಿ ಒದುತ್ತಿದ್ದಾಗ ಉಳ್ಳವರ ಮೇಲ್ಜಾತಿಯ ಎಂಥೆಂಥಾವರ... ಮಕ್ಕಳಾ ಮೊಮ್ಮಕ್ಕಳಾ, ಏಳನೇಯ ತರಗತಿಯಲ್ಲಿ ಪಾಸು ಮಾಡದೆ ಪೇಲಾಗಿದ್ದು. ಅದ್ರೆ ಯಲ್ಲಪ್ಪನವರು ಶ್ರಮಪಟ್ಟು, ದುಡಿದು, ಶಿಕ್ಷಕರ ಮನೆ ಕೆಲಸ ಮಾಡಿಕೊಂಡು ಒಂದೇ ಬಾರಿಗೆ ಪ್ರಥಮ ಶ್ರೇಣಿಯಲ್ಲಿ ಪಾಸಾದರು.

ಬೇಸಿಗೆ ರಜೆಯಲ್ಲಿ ಕೂಲಿ ಮಾಡಿ ದುಡಿದ ಹಣದಿಂದ ಪುಸ್ತಕಗಳನ್ನು ಕೊಂಡು ಓದಿನಲ್ಲಿ ಆಸಕ್ತಿಯಿಂದ ರಾಜ್ಯದಲ್ಲಿ ಬರಗಾಲ ಬಂದಾಗ ತುತ್ತು ಕೂಳಿಗೂ ಇಲ್ಲದಂತಹ ಪರಿಸ್ಥಿತಿಯಲ್ಲೂ ವಿದ್ಯಾಭ್ಯಾಸ ಮಾಡುತ್ತಿದ್ದ “೧೯೭೧-೧೯೭೨ನೇ ಸಾಲಿನಲ್ಲಿ ತುಂಬಾ ರಷ್ಟ ಅನುಭವಿಸಿದೆ. ಮನೆಯಲ್ಲಿ ಬರಗಾಲ ಬಂದಿತ್ತು. ಎಲ್ಲರೂ ತಿನ್ನುವವರೇ, ಸಂಪಾದನೆ ಸಾಲದು.... ಒಂದು ಹೊತ್ತಿನ ಗಂಜಿಗೂ ಕಡು ಕಷ್ಟವಾಗಿತ್ತು, ಕೆಂಪು, ಹುಳು “ಜೊಳ್ಳು” ಬಿದ್ದ ಜೋಳ, ಮೆಕ್ಕೆ ಜೋಳ, “ಜೇಡಿ” ಬಿದ್ದ ಸಜ್ಜೆ ಮುದ್ದೆ, ರೊಟ್ಟಿ ಗಂಜಿ, ಅನ್ನವನ್ನು ಬರೀಯ ಉಪ್ಪು, ಪಳ್ಳಾಗಡ್ಡೆಯ ಜೊತೆಗೆ “ಕವ್ರು, ಕವ್ರೆ” ತಿಂದು ಓದತೊಡಗಿದೆ”೧೪

ಲೇಖಕರು ಒಂಭತ್ತನೆ ತರಗತಿಯಲ್ಲಿ ಪಾಸಗಿದ್ದೆ ಹಿರಿಮೆಯಿಂದ ಊರಲ್ಲಿ ತುಂಬೆಲ್ಲ ಬಿಗುತ್ತಾ ಹೇಳಿದರು. ಎಸ್.ಎಸ್.ಎಲ್.ಸಿ ಗೆ ಪ್ರವೇಶ ಪಡೆದು ವಿದ್ಯಾಭ್ಯಾಸಕ್ಕೆ ಬೇಕಾಗುವಂತ ಪುಸ್ತಕಗಳನ್ನು ಬೇರೆಯವರ ಹತ್ತಿರ ಕಾಡಿ, ಬೇಡಿ ಪಡೆದು ಎಸ್.ಎಸ್.ಎಲ್.ಸಿ ಪಾಸ್ ಮಾಡುವುದು ಕಷ್ಟವೆನಿಸಿ, ಶಿಕ್ಷಕರ ಪ್ರೊತ್ಸಾಹದಿಂದ ಹಿಂದಿ, ಇಂಗ್ಲಿಷ್, ಗಣಿತ, ವಿಷಯಗಳು ಕಷ್ಟವೆನಿಸಿದರೂ ಆಸಕ್ತಿಯಿಂದ. ಮೇಷ್ಟ್ರ ಮನೆಯಲ್ಲಿ ಕೆಲಸ ಮಾಡುತ್ತಾ. ಎಸಂ.ಎಸ್.ಎಲ್.ಸಿ.ಯಲ್ಲಿ ೧೯೭೫ರಲ್ಲಿ ಪಾಸು ಮಾಡಿದರು.

ಆತ್ಮ ಕತೆಯಲ್ಲಿ ಯಲ್ಲಪ್ಪ ಕೆಕೆಪುರವರ ತಂದೆಯ ಸಾವಿನ ನಂತರ ಮನೆಯಲ್ಲಿ ಬಂಜೆಪ್ಪ ಮಾವನಿಂದ ಕುಟುಂಬವು ಕಷ್ಟಗಳನ್ನು ಅಪಮಾನಗಳನ್ನು ಅನುಭವಿಸುತ್ತಾ ಜೀವನ ಸಾಗಿಸಲು ಕಷ್ಟವಾಗಿದೆ. ತಾಯಿಯು ಸಮಾಜದಲ್ಲಿ ಅಂಜದೆ ಗಂಡನ ರೀತಿಯಲ್ಲಿ ಬದುಕಬೇಕೆಂಬ ಛಲದಿಂದ ಮಗನನ್ನು ವಿದ್ಯಾವಂತ ಮಾಡಿ ಸಮಾಜದಲ್ಲಿ ಮುಂದೆ ಬರಬೇಕೆಂದು ಕೂಲಿ ಮಾಡುತ್ತಾ ಗಂಚಿಕಾರ, ಸಾಹುಕಾರರ ಹೊಲ–ಮನೆಗಳಲ್ಲಿ ಕಸ, ಮುಸುರೆ ಕೆಲಸ ಮಾಡುತ್ತಾ ಯಲ್ಲಪ್ಪನವರನ್ನು ಓದಿಸುತ್ತಿರುವ ಹಾಗೂ ಯಲ್ಲಪ್ಪನವರು ತಾಯಿಯು ಜೊತೆಗೆ ರಜೆ ದಿನಗಳಲ್ಲಿ ಕೂಲಿ ಹೊಗುತ್ತಾ ಬಂದ ಹಣದಿಂದ ಪುಸ್ತಕ, ಪೆನ್ನುಕೊಂಡು ಶಾಲೆಯಲ್ಲಿ ಸಹ ಪಾಠಿಗಳಿಂದ ಅಪಮಾನಕ್ಕೆ ಒಳಗಾಗಿ ಓದಿನಲ್ಲಿ ಚುರುಕುತನದಿಂದ ಇಡೀ ಶಾಲೆಯಲ್ಲಿ ಓದಿನಲ್ಲಿ ಎಲ್ಲರಿಗಿಂತ ಬುದ್ದಿವಂತನಾಗಿದ್ದನ್ನು ಓದಿನಲ್ಲಿರುವಂತ ಆಸಕ್ತಿಯ ಬಗ್ಗೆ ಹಾಗೂ ಬಾಲ್ಯದಲ್ಲಿ ಪಟ್ಟಂತ ನೋವು, ಅಪಮಾನ, ಕಷ್ಟ, ಬಡತನದೊಂದಿಗೇ ದಲಿತರಲ್ಲಿ ಯಾವ ರೀತಿಯ ಬದುಕು ಇರುತ್ತದೆ ಎಂಬುದನ್ನು ವಿವರಿಸಿದ್ದಾರೆ.

ಅಡಿಟಿಪ್ಪಣೆಗಳು

೧. ಅರವಿಂದ ಮಾಲಗತ್ತಿ, ಗೌರ್ಮೆಂಟ್ ಬ್ರಾಹ್ಮಣ ಪು.ಸಂ. ೦೬

೨. ಅರವಿಂದ ಮಾಲಗತ್ತಿ, ಗೌರ್ಮೆಂಟ್ ಬ್ರಾಹ್ಮಣ ಪು.ಸಂ. ೦೮

೩. ಸಿದ್ಧಲಿಂಗಯ್ಯ, ಊರು ಕೇರಿ, ಪು.ಸಂ. ೦೯

೪. ಸಿದ್ಧಲಿಂಗಯ್ಯ, ಊರು ಕೇರಿ, ಪು.ಸಂ. ೨೭

೫. ಸಿದ್ಧಲಿಂಗಯ್ಯ, ಊರು ಕೇರಿ, ಪು.ಸಂ. ೩೭

೬. ಸಿದ್ಧಲಿಂಗಯ್ಯ, ಊರು ಕೇರಿ, ಪು.ಸಂ. ೪೧

೭. ತುಂಬಾಡಿ ರಾಮಯ್ಯ, ಮಣೆಗಾರ, ಪು, ಸಂ, ೪೩

೮. ತುಂಬಾಡಿ ರಾಮಯ್ಯ, ಮಣೆಗಾರ, ಪು.ಸಂ. ೪೫

೯. ತುಂಬಾಡಿ ರಾಮಯ್ಯ, ಮಣೆಗಾರ, ಪು.ಸಂ. ೪೮

೧೦. ಯಲ್ಲಪ್ಪ ಕೆರೆಪುರ, ಕೇರಿಯಿಂದ ತೇರಿಗೆ, ಪು.ಸಂ. ೧೨

೧೧. ಯಲ್ಲಪ್ಪ ಕೆರೆಪುರ, ಕೇರಿಯಿಂದ ತೇರಿಗೆ, ಪು.ಸಂ. ೧೨

೧೨. ಯಲ್ಲಪ್ಪ ಕೆರೆಪುರ, ಕೇರಿಯಿಂದ ತೇರಿಗೆ, ಪು.ಸಂ. ೩೫

೧೩. ಯಲ್ಲಪ್ಪ ಕೆರೆಪುರ, ಕೇರಿಯಿಂದ ತೇರಿಗೆ, ಪು.ಸಂ. ೧೮೦

ಅಧ್ಯಾಯ ಆರು

ಬಡತನ ಮತ್ತು ಕ್ರಿಯಾಶೀಲತೆ

ಅಧ್ಯಾಯ ಆರು

ಬಡತನ ಮತ್ತು ಕ್ರಿಯಾಶೀಲತೆ

ದಲಿತ ಆತ್ಮಕಥೆಗಳನ್ನು ಸಾಮಾಜಿಕ ನ್ಯಾಯದ ನೆಲೆಯಲ್ಲಿ ಬರೆಯತೊಡಗಿದವರಲ್ಲಿ ಮರಾಠಿ ಆತ್ಮಕಥೆಗಳು ಪ್ರಮುಖವಾದವುಗಳು. ಲೇಖಕರು ತಮ್ಮ ಜೀವನ ಬಡ ಜೀವನ ವೃತ್ತಾಂತದ ಬಗ್ಗೆ ಹಾಗೂ ದಲಿತ ಸಮುದಾಯದ ಜೀವನಾನುಭವವನ್ನು ಕುರಿತಂತೆ ಆತ್ಮಕತೆಗಳಲ್ಲಿ ಬರೆದರು. ಮರಾಠಿ ಆತ್ಮಕಥೆಗಳ ಪ್ರಭಾವದಿಂದ ಕನ್ನಡದಲ್ಲಿ ದಲಿತ ಆತ್ಮಕತೆಗಳನ್ನು ಆರಂಭವಾದವು. ಕನ್ನಡ ದಲಿತ ಲೇಖಕರಾದ ಅರವಿಂದ ಮಾಲಗತ್ತಿ, ಡಾ. ಸಿದ್ದಲಿಂಗಯ್ಯ, ತುಂಬಾಡಿ ರಾಮಯ್ಯ, ಯಲ್ಲಪ್ಪ ಕೆಕೆಪುರವರ ಮುಂತಾದವರು ತಮ್ಮ ಆತ್ಮ ಕತೆಗಳಲ್ಲಿ ವೈಯಕ್ತಿಕ ಜೀವನದ ಬಗ್ಗೆ ಸಮಾಜದಲ್ಲಿ ದಲಿತರಿಗೆ ಆಗುತ್ತಿದ್ದ ಅಪಮಾನಗಳನ್ನು, ದಾಸ್ಯ ವ್ಯವಸ್ಥೆಯ ಅಟ್ಟಹಾಸ, ದಲಿತರನ್ನು ನುಂಗಿ ನೀರು ಕುಡಿಯುತ್ತಿರುವ ಮೌಢ್ಯದಿಂದ, ಶಿಕ್ಷಣ, ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿರುವುದನ್ನು ತಮ್ಮ ಆತ್ಮಕತೆಗಳಲ್ಲಿ ವಿಶ್ಲೇಷಿಸಿದ್ದಾರೆ.

ಕರ್ನಾಟಕದಲ್ಲಿ ದಲಿತರ ಸಮಾಜದಲ್ಲಿನ ಮೇಲ್ವರ್ಗದವರಿಂದ ದಮಕ್ಕೆ ಒಳಗಾಗಿ, ಅಪಮಾನಗಳನ್ನು ಅನುಭವಿಸಿದ ಸಂಗತಿಗಳನ್ನು ಕಥೆ, ಕಾದಂಬರಿಗಳಲ್ಲಿ ಬರೆಯುತ್ತಿದ್ದ ಹಾಗೆಯೇ ಆತ್ಮಕತೆಗಳಲ್ಲಿ ತಮ್ಮ ನೋವುಗಳನ್ನು ಅಭಿವ್ಯಕ್ತಪಡಿಸುವುದರ ಜೊತೆಗೆ ಈ ಆತ್ಮಕಥನಕಾರರು ಸ್ವ ಅನುಭಾವದ ಮೂಲಕ ತಮ್ಮಲ್ಲಿ ಅಡಕವಾಗಿರುವ ಜೋವನೋತ್ಸಾಹ ಕ್ರಿಯಾಶೀಲತೆ ಮತ್ತು ಸೃಜನಶೀಲತೆಯ ಆಯಾಮವೂ ಅಷ್ಟೇ ಮುಖ್ಯವಾಗಿ ಇಲ್ಲಿ ದಾಖಲಾಗಿದೆ.

ಊರುಕೇರಿ

ಸಿದ್ಧಲಿಂಗಯ್ಯನವರ ತಮ್ಮ ಆತ್ಮಕಥೆಯಲ್ಲಿ ತನ್ನ ಕುಟುಂಬವು ತೀರ ಬಡತನದಿಂದ ತಂದೆಯು ಕೂಲಿಮಾಡುತ್ತಾ ಬ್ರಾಹ್ಮಣರ ಹೊಲದಲ್ಲಿ ಎತ್ತುಗಳ ರೀತಿಯಲ್ಲಿ ಹೆಗಲಿಗೆ ನೊಗ

ಹಾಕಿಕೊಂಡು ದುಡಿದಿರುವುದು ಹಾಗೂ ತಂದೆ-ತಾಯಿ ಇಬ್ಬರು ಹೊಲಕ್ಕೆ ಹೋಗಿ ಬೆಳಿಗ್ಗೆಯಿಂದ ಸಂಜೆಯತನ ದುಡಿಮೆ ಮಾಡುತ್ತಾ ಸಾಲ ತೀರದೆ ಹೋಗದೆ ಇರುವುದರಿಂದ ಬೆಂಗಳೂರಿನ ಹೆಂಡದ ಅಂಗಡಿ, ಸ್ಯಾಮುಯಲ್‌ನಲ್ಲೂ ಸೌದೆ ಒಡೆಯುತ್ತಾ, ತಾಯಿಯು ವಿದ್ಯಾರ್ಥಿನಿಲಯದಲ್ಲಿ ಕಸ ಗುಡಿಸಿಕೊಂಡು ದುಡಿಮೆ ಮಾಡುವ ಮೂಲಕ ತನ್ನ ಸಂಸಾರವನ್ನು ನಡೆಸುತ್ತಿದ್ದರು. ಇಂತಹ ಕಷ್ಟದಲ್ಲಿ ಮಗನನ್ನು ಓದಿಸಲು ವಿದ್ಯಾರ್ಥಿನಿಲಯಕ್ಕೆ ಸೇರಿಸಿದರು. ವ್ಯಾಸಂಗ ಮಾಡುವಾಗ ವಿದ್ಯಾರ್ಥಿಯಾದ ಸಿದ್ಧಲಿಂಗಯ್ಯ ಚೆನ್ನಾಗಿ ಓದುವುದರ ಮೂಲಕ ಸೃಜನಶೀಲತೆಯಿಂದ ತನ್ನ ವಿದ್ಯಾರ್ಥಿ ದಿಸೆಯಿಂದಲೆ. ಸಂಘಟನೆ ಮತ್ತು ಹೋರಾಟಗಳ ಮಧ್ಯೆ ಬೆಳೆದರು, ತಾವೆ ಸ್ವತಃ ಅನ್ಯಾಯ ಅಸಮಾನತೆಯ ವಿರುದ್ಧವಾಗಿ ಚಳುವಳಿ ಮತ್ತು ಭಾಷಣಗಳ ಮೂಲಕ ದಲಿತರ ಶೋಷಿತ ವಿದ್ಯಾರ್ಥಿಗಳ ಪರವಾಗಿ ಹೋರಾಡಿ ನ್ಯಾಯ ಒದಗಿಸಿಕೊಟ್ಟು. ಹಿಂಸೆ, ಹಲ್ಲೆಗೆ ಗುರಿಯಾಗಿ ರಕ್ತಪಾತವಾದ ಪ್ರಾಣಾಪಾಯದಿಂದ ಪಾರದಂತಹ ಅನುಭವಗಳನ್ನು ಹಾಗೂ ಸಾಹಿತ್ಯ ಕೃಷಿ ಮಾಡಿದ ಬಗೆಯನ್ನು ವಿವರಿಸಿದ್ದಾರೆ.

ಬೆಂಗಳೂರಿನಲ್ಲಿ ಮೊದಲ ದಲಿತ ವಿದ್ಯಾರ್ಥಿಗಳ ಹೋರಾಟ ವಿಚಾರವಾದಿ, ಪರಿಷತ್ತಿನ ಮೂಲಕ ನ್ಯಾಯವನ್ನು ಒದಗಿಸಿಕೊಡುವ ಹೋರಾಟವನ್ನು ಮಾಡಿದರು. 'ನಾವು ಕೆಲವು ಗೆಳೆಯರು ಸೇರಿ ವಿಚಾರವಾದಿ ಪರಿಷತ್ತನ್ನು ಸ್ಥಾಪಿಸಿದವು. ಇದರ ಆಶ್ರಯದಲ್ಲಿ ದಲಿತ ವಿದ್ಯಾರ್ಥಿಗಳ ಒಂದು ಮೆರವಣಿಗೆಯನ್ನು ಸಂಘಟಿಸಿದೆವು. ಬೆಂಗಳೂರಿನ ಎಲ್ಲಾ ದಲಿತ ವಿದ್ಯಾರ್ಥಿ ನಿಲಯಗಳಿಗೂ ಭೇಟಿಕೊಟ್ಟು ವಿದ್ಯಾರ್ಥಿಗಳ ಸಮಸ್ಯೆಗಳನ್ನು ಅರ್ಥಮಾಡಿಕೊಂಡೆವು ಬೆಂಗಳೂರಿನ ದಲಿತ ವಿದ್ಯಾರ್ಥಿಗಳು ಆಗ ಬಹಳ ಕಷ್ಟಗಳನ್ನು ಅನುಭವಿಸುತ್ತಿದ್ದರು. ಅವರಿಗೆ ಸರಿಯಾದ ಊಟ ಸಿಗುತ್ತಿರಲಿಲ್ಲ. ಸ್ನಾನಕ್ಕೆ, ಶೌಚಕ್ಕೆ ವ್ಯವಸ್ಥೆ ಇರಲಿಲ್ಲ.'[೧] ಇಂತಹ ಮೂಲಭೂತ ಸೌಕರ್ಯಗಳನ್ನು ವಿದ್ಯಾರ್ಥಿನಿಲಯಗಳಿಗೆ ವ್ಯವಸ್ಥೆ ಮಾಬಡೇಕೆಂದು ಸಂಬಂಧಪಟ್ಟ ಇಲಾಖೆ, ಮಂತ್ರಿಗಳ ಹತ್ತಿರ ಹೋಗಿ ಹೋರಾಟಗಳ ಮೂಲಕ ತಮ್ಮ ಜಾತಿಯ ವಿದ್ಯಾರ್ಥಿಗಳಿಗೆ ಅನುಕೂಲ ಮಾಡುವ ಕೆಲಸಗಳಲ್ಲಿ ತೊಡಗಿದರು.

ಇಂತಹ ಹಲವು ಹೋರಾಟಗಳು ದಲಿತ ವಿದ್ಯಾರ್ಥಿಗಳ ಪರವಾಗಿ ಸಿದ್ಧಲಿಂಗಯ್ಯನವರು ಮಾಡುತ್ತಿದ್ದು ಸಂಘದಲ್ಲಿ ಚಪ್ಪಲಿ, ಕಲ್ಲು, ಲಾಠಿಗಳಿಂದ ಒಡೆತ ತಿಂದಿದ್ದ ಸಂದರ್ಭಗಳನ್ನು 'ನಾವೊಂದು ವಿಚಾರವಾದಿ ಸಮಾವೇಶವನ್ನು ಸಂಘಟಿಸಿದೆವು. ರಾಜ್ಯದ ನಾನಾ ಕಡೆಯಿಂದ ಅದಕ್ಕೆ ಪ್ರತಿನಿಧಿಗಳು ಬಂದಿದ್ದರು. ಸಮಾವೇಶಕ್ಕೆ ಅಧ್ಯಕ್ಷತೆಯನ್ನು ವಹಿಸಲು ಒಪ್ಪಿಕೊಂಡಿದ್ದವರು ಗಲಾಟೆಯ ಮುನ್ಸೂಚನೆ ಸಿಕ್ಕಿ ಸಮಾವೇಶಕ್ಕೆ ಬರಲಿಲ್ಲ. ಸಮಾವೇಶ ಅಧ್ಯಕ್ಷತೆಯನ್ನು ನಾನೇ ವಹಿಸಬೇಕಾಯಿತು. ನಮ್ಮ ಸಭೆ ಸೆಂಟ್ರಲ್ ಕಾಲೇಜಿನ ಹಾಕಿ ಮೈದಾನದಲ್ಲಿ ನಡೆಯಿತು. ಶಾಲೆ ರಹಿತ ವರ್ಗರಹಿತ, ಸಮಾಜ ರಚನೆಗೆ ಹೋರಾಡುವುದು. ಸಮಾವೇಶದ ಗುರಿಯಾಗಿತ್ತು. ಈ

ಸಮಾವೇಶವನ್ನು ಕೆಡಿಸಲು ಕೆಲವರು ಬಂದಿದ್ದರು. ಇದನ್ನು ಕೆಲವರು ಮೂಢನಂಬಿಕೆ ವಿರೋಧಿ ಸಮ್ಮೇಳನವೆಂದು ನಾವು ಕರೆದಿದ್ದೆವು. ಕೆಲವರು ಮೂಢನಂಬಿಕೆಗಳು ಯಾಕೆ ಹೋಗಬೇಕು. ಅದೆ ಚಂದ ಎಂದು ವಾದಿಸತೊಡಗಿದರು."[೨] ಹೀಗೆ ಈ ಸಮಾಜದಲ್ಲಿ ಜಾತಿಯೆಂಬುದು ಬೇಡ ಎಲ್ಲಾರೂ ಒಂದೆ ಅಂತರ ಜಾತಿಯ ವಿವಾಹಗಳು ಆಗಬೇಕು ಎಂದು ಕಾರ್ಯಕ್ರಮದಲ್ಲಿ ಹೇಳಿದಾಗ, ಘರ್ಷಣೆ ಆಗಿ, ಚಾಕು, ಚೈನುಗಳಿಂದ ಒಡೆದಾಟ, ಲೇಖಕರಿಗೆ ಇದರಲ್ಲಿ ಅಂಗೈಗೆ ಗಾಯವಾಗಿ ಪ್ರಾಣಾಪಾಯದಿಂದ ಪಾರಾಗಿದ್ದನ್ನು ವಿವರಿಸಿದ್ದಾರೆ. ತನ್ನ ಓದಿನ ಅಥವಾ ಅಂಬೇಡ್ಕರ್ ವಿಚಾರಗಳಿಂದ ಪ್ರಭಾವಿತರಾದ ಸಿದ್ದಲಿಂಗಯ್ಯನವರು ಅಸ್ಪೃಶ್ಯತೆ ಮೂಢನಂಬಿಕೆ, ಜಾತಿ, ತಾರತಮ್ಯಗಳ ವಿರುದ್ಧ ಹೋರಾಟ ಮಾಡುವ ಹಾಗೂ ಕವಿತೆಗಳನ್ನು ಬರೆಯುವ, ಭಾಷಣಗಳನ್ನು ಮಾಡುವಂತಹ ಸೃಜನಶೀಲತೆಯನ್ನು ಬೆಳೆಸಿಕೊಂಡರು.

ಸಿದ್ಧಲಿಂಗಯ್ಯನವರು ತಮ್ಮ ವಿದ್ಯಾರ್ಥಿಜೀವನದಿಂದಲೇ ಸಾಹಿತ್ಯಕ್ಷೇತ್ರವನ್ನು ಪ್ರವೇಶಿಸಿದ್ದಾರೆ. ಆರಂಭಿಕ ಬರಹದಲ್ಲಿ ಅವರು ಮಾಡಿದ ಪ್ರಯತ್ನ ಮತ್ತು ಪರಿಶ್ರಮಗಳು ಬಹುಮುಖ್ಯವಾದವುಗಳು. ತಮ್ಮ ಆತ್ಮವಿಶ್ವಾಸದಿಂದ ಪ್ರಥಮ ಬಾರಿಗೆ ಬರೆದಿದ್ದು ಕವನಗಳನ್ನು ಹಿರಿಯರು, ಕವಿಗಳಲ್ಲಿ, ಗುರುಗಳಲ್ಲಿ, ಒಪ್ಪಿಸುತ್ತಿದ್ದರು. ಅವರ ಮಾರ್ಗದರ್ಶನ ಹಾಗೂ ಪ್ರೋತ್ಸಾಹಗಳನ್ನು ಗಳಿಸಿ ವಿದ್ಯಾರ್ಥಿ ದೆಸೆಯಿಂದಲೇ ಕ್ರಾಂತಿಕವಿ ಎಂದು ಕರೆಸಿಕೊಂಡರು. ಅವರು ಸಾಹಿತ್ಯ ಸಾಧನೆ ಪ್ರಶಂಸೆ ಪಡುವಂತಹದ್ದು.

ಸಿದ್ದಲಿಂಗಯ್ಯನವರು ತಮ್ಮ ಆರಂಭದ ಸಾಹಿತ್ಯ ರಚನೆಯನ್ನು ಯಾವ ಬಗೆಯಲ್ಲೂ ಸ್ಫೂರ್ತಿ, ಪ್ರೇರಣೆ, ಪ್ರೋತ್ಸಾಹಗಳು ದೊರೆತವು ಎಂಬುದನ್ನು ಆತ್ಮಕಥೆಯಲ್ಲಿ ಹೀಗೆ ಹೇಳಿದ್ದಾರೆ. "ಶ್ರೀರಾಂಪುರದಲ್ಲಿ ಬಹಳ ವಾಚನಾಲಯಗಳನ್ನು ಪ್ರಾರಂಭಿಸಿ ಕನ್ನಡ ಪತ್ರಿಕೆಗಳು, ಮ್ಯಾಗಜಿನ್‌ಗಳನ್ನು ತರಿಸುತ್ತಿದ್ದರು. ನಾನು ಅಲ್ಲಿಗೆ ಹೋಗಲಾರಂಭಿಸಿದೆ. ತಮಿಳು ಸಂಘಗಳೂ ವಾಚನಾಲಯಗಳನ್ನು ಶುರು ಮಾಡಿ ತಮಿಳು ಪತ್ರಿಕೆಗಳ ಜೊತೆಗೆ ಕನ್ನಡ ಪತ್ರಿಕೆಗಳನ್ನು ತರಿಸುತ್ತಿದ್ದರು. ನಾನು ವಾಚನಾಲಯಗಳಿಗೆ ಹೋಗಿ ಅವುಗಳಿಂದ ಬಹಳ ಪ್ರಯೋಜನ ಪಡೆದು, ಶೇಷಾದ್ರಿಪುರದ ಕಡೆಗೆ ಹೋಗುತ್ತಿದ್ದಾಗ ದಾರಿಯಲ್ಲಿ ಸಾರ್ವಜನಿಕ ಗ್ರಂಥಾಲಯ ಎಂಬ ಬೋರ್ಡ್‌ನ್ನು ನೋಡಿ ಒಳಗೆ ಹೋದೆ. ಅಲ್ಲಿದ್ದ ಪುಸ್ತಕಗಳನ್ನು ಕಂಡು ಬಹಳ ಸಂತೋಷವಾಯಿತು. ಬಸವರಾಜ ಕಟ್ಟೀಮನಿಯವರ 'ಸ್ವಾತಂತ್ರ್ಯದೆಡೆಗೆ' ಕಾದಂಬರಿಯನ್ನು ಓದಿದೆ, ಕಾದಂಬರಿ, ಕವಿತೆಯ ಓದಿಗೆ ಈ ಗ್ರಂಥಾಲಯ ನೆರವಾಯಿತು. ಹಾಗೆ ಗ್ರಂಥಾಲಯಗಳಲ್ಲಿ ಬಸವಣ್ಣ, ಅಂಬೇಡ್ಕರ್ ವಿಚಾರಗಳು ಮುಂತಾದ ಕವಿತೆ, ಕಾವ್ಯಗಳನ್ನು ಓದುವ ಮೂಲಕ ಸಾಹಿತ್ಯ ರಚನೆಯಲ್ಲಿ ತನ್ನನ್ನು ತೊಡಗಿಸಿಕೊಂಡು ಕವಿತೆಗಳನ್ನು ಬರೆಯತೊಡಗಿದರು.

ತಾನು ಬರೆದಂತಹ ಕವಿತೆಗಳನ್ನು ಹಿರಿಯರಿಗೆ ತೋರಿಸುತ್ತಾ ಬಂದದ್ದನ್ನು ಕುರಿತಂತೆ, ಒಂದು ದಿನ ಕಬ್ಬನ್ ಪಾರ್ಕ್‌ನಲ್ಲಿ ಹೋಗುತ್ತಿದ್ದಾಗ ಗಂಜಿಗಟ್ಟಿ ಎಂಬುವರು ಬರುತ್ತಿದ್ದರು. ಅವರು ಟಿಪಲ್ ಎಂಬ ಇಂಗ್ಲೀಷ್ ಪತ್ರಿಕೆಯ ಸಂಪಾದಕರು. ಅವರು ಸೂಟು ಧರಸಿ ಟೈ ಕಟ್ಟಿದ್ದರು, ಬೂಟು ಧರಿಸಿದ್ದರು. ಅವರು ಕನ್ನಡಿಗರು ಆದರೂ ಯಾವತ್ತೂ ಕನ್ನಡ ಮಾತನಾಡುತ್ತಿರಲಿಲ್ಲ. ಅವರಿಗೆ ನಮಸ್ಕರಿಸಿ ನನ್ನ ಕವಿತೆಗಳನ್ನು ಅವರಿಗೆ ತೋರಿಸುವ ಬಯಕೆಯನ್ನು ವ್ಯಕ್ತಪಡಿಸಿದೆ ಅವರು ಸಂತೋಷದಿಂದ ನನ್ನ ಕವಿತೆಗಳನ್ನು ನೋಡಲು ಒಪ್ಪಿದರು"[೩] ಅವರ ಹತ್ತಿರ ಹೋಗುವುದರ ಮೂಲಕ ಪತ್ರಿಕೆಯ ಸಂಪಾದಕರಾಗಿದ್ದ ಗಂಜಿ ಗಟ್ಟಿಯ ಕವಿತೆಗಳನ್ನು ಓದಿ, ನೀನೊಬ್ಬ ಕ್ರಾಂತಿಕವಿ ಎಂದು ಹುರಿದುಂಬಿಸುವ ಮೂಲಕ ಸಂತೋಷಗೊಂಡ ಸಿದ್ಧಲಿಂಗಯ್ಯನವರು ಅಂದಿನಿಂದ ಕವಿತೆಗಳನ್ನು ಬರೆಯಲು ಪ್ರಾರಂಭಿಸಿದರು. ಹೀಗೆ ಕನ್ನಡ ಸಾಹಿತ್ಯದಲ್ಲಿ ಕವಿತೆಗಳನ್ನು ಬರೆಯುವುದರ ಮೊದಲ ಕವಿತೆ ಎಂದರೆ 'ಹೊಲೆ ಮಾದಿಗರ ಹಾಡು' ಕವನ ಸಂಕಲನವನ್ನು ಬರೆದು ಕ್ರಾಂತಿ ಕವಿ ಎಂದು ದಲಿತ ಸಾಹಿತ್ಯದಲ್ಲಿ ಹೆಸರುವಾಸಿಯಾದರು.

ಮಣೆಗಾರ :

ತುಂಬಾಡಿ ರಾಮಯ್ಯನವರ ಮಣೆಗಾರ ಸಮುದಾಯದಲ್ಲಿ ಹುಟ್ಟಿ, ಬಾಲ್ಯದಿಂದ ಸಮಾಜದಲ್ಲಿ ಅತಿಯಾದ ಬಡತನ, ಅಸ್ಪೃಶ್ಯತೆ, ಅಪಮಾನಗಳನ್ನು ಜಾತಿ ನಿಂದನೆಗಳನ್ನು ಮೂಲಕ ಅನುಭವಿಸಿದ ಜೀವನಾನುಭಾವಗಳನ್ನು ತನ್ನ ಆತ್ಮಕಥನಲ್ಲಿ ಚಿತ್ರಿಸಿದ್ದಾರೆ. ಇವರ ಕುಟುಂಬ ಬಡತನದಿ ಜೀವಿಸುವಂತಹ ಅವಿಭಕ್ತ ಕುಟುಂಬವಾಗಿದ್ದು, ತನ್ನ ತಂದೆಯು ಸಂಸಾರ ಸಾಗಿಸಲು ಚಪ್ಪಲಿ ಹೊಲೆಯು, ಹಂದಿ ಸಾಕುವ, ಮಾದಿಗತನ ಕೆಲಸ ಮಾಡುತ್ತಾ ತನ್ನ ಮಗನನ್ನು ಓದಿಸುವ ಮೂಲಕ ಸಮಾಜದಲ್ಲಿ ಮುಂದೆ ಬರಬೇಕೆಂಬ ಹಂಬಲದ ಬಗ್ಗೆ ಹಳ್ಳಿಯಲ್ಲಿ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಧಾರ್ಮಿಕ ಮತ್ತು ದಲಿತರ ಬದುಕಿನಲ್ಲಿ ಬಂದಂತಹ ಸಮಾಜದ ಅಮಾನುಷವಾದ ಅಪಮಾನಗಳನ್ನು ದಾಖಲಿಸಿದ್ದಾರೆ. ಇಂತಹ ಸಮಾಜದಲ್ಲಿ ಅಸಮಾನತೆಯಿಂದ ಕಾಣುತ್ತಿದ್ದ ತಾನು ಚೆನ್ನಾಗಿ ಓದಿ ಶಾಲೆಗೆ ಹೋಗುತ್ತಿದ್ದಾಗ ಹಾಸ್ಟೆಲ್‌ನಲ್ಲಿ ದಲಿತ ವಿದ್ಯಾರ್ಥಿಗಳನ್ನು ಶೋಷಣೆ ಮಾಡುವಂತಹ ಸಮಾಜ ಹಾನಸ್ಥಿತಿಯನ್ನು ಕಂಡು ನೋವು ಅನುಭವಿಸುತ್ತಾ ಚೆನ್ನಾಗಿ ಓದುತ್ತಾ. ವಿದ್ಯಾರ್ಥಿ ದಿಸೆಯಿಂದಲೆ ಡೈರಿಯಲ್ಲಿ ಕೆಲಸ ಮಾಡುತ್ತಾ, ಸ್ಟೆಪೆಂಡರಿ ಕೆಲಸಕ್ಕೆ ಸೇರಿಕೊಂಡು ದಲಿತರ ಪರ ಹೋರಾಟಗಳನ್ನು ಮಾಡುವಂತಹ ಕ್ರಿಯಾಶೀಲತೆಯನ್ನು ಬೆಳೆಸಿಕೊಂಡಿರುವುದನ್ನು ಚಿತ್ರಿಸಿದ್ದಾರೆ.

ಲೇಖಕರು ಬಿ.ಎ. ಓದುತ್ತಿದ್ದಾಗ ತುಮಕೂರಿನಲ್ಲಿ ದಲಿತ ವಿದ್ಯಾರ್ಥಿಗಳಿಗೂ ಮತ್ತು ಇತರ ಜಾತಿಯ ವಿದ್ಯಾರ್ಥಿಗಳನ್ನು ಯಾವ ಕಾರಣಕ್ಕೂ, ಮಾರಮಾರಿ ಹೊಡೆದಾಟ ಶುರುವಾಗಿ

ಪೋಲೀಸರನ್ನು ಲೆಕ್ಕಿಸದೆ ದಲಿತ ವಿದ್ಯಾರ್ಥಿಗಳನ್ನು ಸಿಕ್ಕ ಸಿಕ್ಕ ಕಡೆಯಲ್ಲಿ ಬಡಿದು ದೌರ್ಜನ್ಯ ಮಾಡುತ್ತಿದ್ದ ಸಂದರ್ಭದಲ್ಲಿ ತುಮಕೂರಿನ ಮಾದಿಗರ ಹಟ್ಟಿಯ ಜನ ತಮ್ಮ ಬೆಂಬಲವನ್ನು ದಲಿತ ವಿದ್ಯಾರ್ಥಿಗಳ ರಕ್ಷಣೆ ನೀಡುತ್ತಾ ಬಂದರು ಎಂಬುದನ್ನು ವಿವರಿಸುತ್ತಾ, ಆಗ ತಾನೇ ರಾಜ್ಯದಲ್ಲಿ ದಲಿತ ಸಂಘರ್ಷ ಸಮಿತಿ ಪ್ರಾರಂಭಗೊಂಡಿತ್ತು. ದಲಿತ ಸಂಘರ್ಷ ಸಮಿತಿಯ ಸಭೆಯನ್ನು ತುಮಕೂರಿನಲ್ಲಿ ಆಯೋಜಿಸಿದ್ದರು. ಬಿ.ಕೃಷ್ಣಪ್ಪನವರು ಈ ಸಭೆಯನ್ನು ಉದ್ದೇಶಿಸಿ ಮಾತನಾಡಿದ್ದು ಲೇಖಕರಲ್ಲಿ ದಲಿತ ಪ್ರಜ್ಞೆ ಮೂಡಿ ದಲಿತ ಸಂಘರ್ಷ ಸಮಿತಿಯ ಏರ್ಪಡಿಸಿ ಸಭೆ, ಮೆರವಣಿಗೆಗಳಲ್ಲಿ ಭಾಗವಹಿಸುತ್ತಾ, ವಿದ್ಯಾರ್ಥಿ ದೆಸೆಯಿಂದಲೇ ದಲಿತರಪರ ಹೋರಾಟ, ಪ್ರತಿಭಟನೆಗಳಲ್ಲಿ ಭಾಗವಹಿಸುತ್ತಾ, ಎಲ್.ಎಲ್.ಬಿ.ಗೆ ಸೇರಿ ತನ್ನ ಕುಟುಂಬದ ಜೀವನ ಕಷ್ಟವಾದ್ದರಿಂದ ಅದೇ ಸಂದರ್ಭದಲ್ಲಿ ಸರ್ಕಾರ ತಂದಿದ್ದ ಸ್ಟೈಫೈಂಡ್ ಕೆಲಸದಲ್ಲಿ ಸೇರಿಕೊಂಡು ದುಡಿಯುವ ಹಾಗೂ ದಲಿತ ಸಂಘರ್ಷ ಸಭೆಗಳಲ್ಲಿ ಹೋರಾಟಗಳಲ್ಲಿ ಭಾಗವಹಿಸುವ ಕ್ರಿಯಾಶೀಲತೆ ಸೃಜನಶೀಲತೆಯನ್ನು ತುಂಬಾಡಿ ರಾಮಯ್ಯನವರು ಬೆಳೆಸಿಕೊಂಡರು. ದಲಿತ ಸಂಘರ್ಷ ಸಮಿತಿಯ ಮುಂದೆ ಗ್ರಾಮೀಣ ಪ್ರದೇಶದ ದಲಿತದ್ದೆ ಆಗಿದ್ದರಿಂದ ಇವರ ಸಮಸ್ಯೆಗಳನ್ನು ಕರಪತ್ರಗಳ ಹಂಚುವ ಮೂಲಕ ಪ್ರತಿಭಟನೆಗಳಲ್ಲಿ ಭಾಗವಹಿಸಿದ್ದನ್ನು ಚಿತ್ರಿಸಿದ್ದಾರೆ."[೪]

'೧೯೮೩ನೇ ಇಸವಿಯಲ್ಲಿ ರಾಮಕೃಷ್ಣ ಹೆಗಡೆಯವರು ರಾಜ್ಯದ ಮುಖ್ಯಮಂತ್ರಿಯಾಗಿದ್ದರು. ಆಗ ರಾಜ್ಯದಲ್ಲಿ ದಲಿತರ ಮೇಲೆ ನಡೆಯುತ್ತಿದ್ದ ಹಲ್ಲೆ, ದೌರ್ಜನ್ಯಗಳು ಎಲ್ಲೆ ಮೀರಿದ್ದವು. ಈ ಅನ್ಯಾಯಗಳ ವಿರುದ್ಧ ರಾಜ್ಯದ ಎಲ್ಲಾ ಮಂತ್ರಿಗಳ ಮನೆ ಮುಂದೆ ಪಿಕೆಟಿಂಗ್ ಮಾಡುವ ಮೂಲಕ ಪ್ರತಿಭಟನೆ ಮಾಡಬೇಕೆಂದು ರಾಜ್ಯದ ದಲಿತ ಸಂಘರ್ಷ ಸಮಿತಿ ತೀರ್ಮಾನಿಸಿತ್ತು. ಆಗ ತುಮಕೂರಿನಲ್ಲಿ ಜಿಲ್ಲಾ ಸಮಿತಿ ಅಸ್ತಿತ್ವದಲ್ಲಿರಲಿಲ್ಲ. ಐದು ಜನರಿದ್ದ ಅಡ್ ಹಾಕ್ ಸಮಿತಿಯ ಜಿಲ್ಲಾ ಸಮಿತಿಯ ಕಾರ್ಯನಿರ್ವಹಿಸುತ್ತಿತ್ತು. ಆ ಐದು ಜನರಿದ್ದ ಆಡ್ ಹಾಕ್ ಸಮಿತಿಯಲ್ಲಿ ನಾನು ಒಬ್ಬನಾಗಿದ್ದೆ.'[೪] ಲೇಖಕರು ಗ್ರಾಮೀಣ ಪ್ರದೇಶದ ದಲಿತ ಬಂಧುಗಳ ಪರವಾಗಿ ಸಮಾಜದದಲ್ಲಿ ದಲಿತರನ್ನು ಶೋಷಣೆ ಮಾಡುವ, ಮೂಲಭೂತ ಸೌಕರ್ಯಗಳ ಕೊರತೆ, ದೌರ್ಜನ್ಯಗಳನ್ನು ವಿರೋಧಿಸಿ ಸರ್ಕಾರದ ವಿರುದ್ಧ ಪ್ರತಿಭಟನೆ ಮಾಡುವಂತ ಪ್ರತಿಭೆ ವಿದ್ಯಾರ್ಥಿ ದೆಸೆಯಿಂದಲೇ ಹೋರಾಟಗಳಲ್ಲಿ ಭಾಗವಹಿಸಿ ಪೋಲೀಸರಿಂದ ಬಂಧನಗೊಳಗಾದ ತನ್ನ ಜೀವನದ ಬಗ್ಗೆ ಆತ್ಮಕಥನದಲ್ಲಿ ಚಿತ್ರಿಸಿದ್ದಾರೆ.

ರಾಮಯ್ಯನವರು ಬಿ.ಎ. ಪಾಸಾದ ನಂತರ ಸ್ವತಃ ದುಡಿಮೆ ಮಾಡುವಂತಹ ಸೃಜನಶೀಲತೆಯನ್ನು ಬೆಳೆಸಿಕೊಂಡ ಕೆಲವು ಅಂಶಗಳನ್ನು ಆತ್ಮಕಥೆಗಳಲ್ಲಿ ಬರೆದಿದ್ದಾರೆ. 'ಆಹಾರ ಇಲಾಖೆಯಲ್ಲಿ ಸ್ಟೈಫಂಡರಿ ಕೆಲಸಕ್ಕೆ ಸಿಕ್ಕಿತು. ಇದರೊಡನೆ ಓದನ್ನು ಮುಂದುವರೆಸುತ್ತಾ ಎಲ್.ಎಲ್.ಬಿ.ಗೆ ಸೇರಿದೆ. ಎಲ್.ಎಲ್.ಬಿ. ಹಾಸ್ಟೆಲ್‌ನಲ್ಲಿ ಊಟ-ತಿಂಡಿ ಮಾಡಿಕೊಂಡು,

ಸ್ಟೈಫಂಡರಿ ಹಣದಲ್ಲಿ ಅಲ್ಲಿ–ಇಲ್ಲಿ ಕೆಲಸಗಳಿಗಾಗಿ ಅರ್ಜಿ ಹಾಕುತ್ತಾ, ಉಳಿದಿದ್ದಲ್ಲಿ ಮನೆಗೆ ಕಳುಹಿಸುತ್ತಿದ್ದೆ. ಇನ್ನೂ ಉಳಿದ ಪುಡಿಗಾಸಿನಲ್ಲಿ ದಲಿತ ಸಂಘರ್ಷ ಸಮಿತಿಯ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾ ಖರ್ಚು ಮಾಡಿಕೊಂಡಿದ್ದೆ. ಇದೇ ನನ್ನ ಜೀವಿತದ ಸುಖ ದಿನಗಳು ಎಂದು ಭಾವಿಸಿದ್ದೆ"[೫] ಹೋರಾಟ, ಪ್ರತಿಭಟನೆ ಇವುಗಳ ನಡುವೆ ತನ್ನ ವ್ಯಾಸಂಗವನ್ನು ಮುಂದುವರೆಸುತ್ತಾ, ದುಡಿಮೆಯನ್ನು ಮಾಡುವ ತನ್ನ ವೈಯಕ್ತಿಕವಾದ ಬದುಕಿನ ಬಗ್ಗೆ ಲೇಖಕ ವಿಶ್ಲೇಷಿಸಿರುವುದನ್ನು ಕಾಣಬಹುದು.

ಸ್ಟೈಫಂಡರಿ ಕೆಲಸವನ್ನು ತೆಗೆದುಹಾಕಿದಾಗ ತುಮಕೂರಿನ ಡೈರಿ ಇಲಾಖೆಯಲ್ಲಿ ಸೂಪರ್ ವೈಸರ್ ಆಗಿ ಕೆಲಸಕ್ಕೆ ಸೇರಿಕೊಂಡು ಒಂದು ವರ್ಷ ಕೆಲಸ ಮಾಡಿ. ಜಿಲ್ಲೆಯ ಪ್ರತಿಯೊಂದು ಹಳ್ಳಿಗೂ ಭೇಟಿ ಕೊಡುತ್ತಾ ಸರ್ವೇ ಮಾಡುವ ಮೂಲಕ ಊರುಗಳಲ್ಲಿ ಹಾಲಿನ ಡೈರಿ ಪ್ರಾರಂಭ ಮಾಡುವಂತಹ ಕೆಲಸ ಮಾಡುತ್ತ ಬಂದ ಸಂಪಾದನೆಯಿಂದ ಕುಟುಂಬ ಸ್ವಲ್ಪ ಹಣಕೊಡುತ್ತಾ ತನ್ನ ಖರ್ಚಿಗೆ ಇಟ್ಟುಕೊಂಡು ಬದುಕು ನಡೆಸುತ್ತಿದ್ದೆನು. ಆತ್ಮಕಥೆಯಲ್ಲಿ ತಿಳಿಸಿದ್ದಾರೆ.

ತುಂಬಾಡಿ ರಾಮಯ್ಯನವರು ದಲಿತ ಸಮುದಾಯದ ಬಡತನದ ಕುಟುಂಬದಲ್ಲಿ ಹುಟ್ಟಿ. ತನ್ನ ತಂದೆಯ ಚಪ್ಪಲಿ ಹೊಲಿಯುವ ಮೂನಿಮಾದಿಗತನ ಮಾಡುತ್ತಾ, ಹಂದಿ ಸಾಕಣೆ ಮಾಡುತ್ತಾ ಕುಟುಂಬ ಜೀವನವನ್ನು ಸಾಗಿಸುತ್ತಿದ್ದನು. ತಂದೆಯ ಜೊತೆಗೆ ಕಾಯದಲ್ಲಿ ಬಾಗಿ ಕ್ರಿಯಾಶೀಲತೆಯನ್ನು ಬೆಳೆಸಿಕೊಂಡಿರುವುದನ್ನು ನೋಡಬಹುದು.

ಕೇರಿಯಿಂದ ತೇರಿಗೆ

ಯಲ್ಲಪ್ಪ ಕೆ.ಕೆ.ಪುರವರು ತಮ್ಮ ಆತ್ಮ ಕತೆಯಲ್ಲಿ ದಲಿತರಾಗಿ ಹುಟ್ಟಿ, ತಂದೆಯು ಬಡತನದಿಂದ ಕುಟುಂಬವನ್ನು ಸಾಕಲು ಕಟ್ಟಿಗೆ ಕಡಿದು ಊರುಗಳಲ್ಲಿ ಮಾರುತ್ತಾ ಬಂದ ಸಂಪಾದನೆಯಿಂದ ಜೀವನ ನಡೆಸಿದ. ದಲಿತರನ್ನು ಸಮಾಜದಲ್ಲಿ ಶೋಷಣೆ ಮಾಡುತ್ತಾ ಅಸಮಾನತೆಯಿಂದ ಕಾಣುವ ಮೇಲ್ವರ್ಗದವರ ದರ್ಪ, ದಲಿತರ ಸಂಸ್ಕೃತಿ ತಾನು ಶಾಲೆಯಲ್ಲಿ ಓದುತ್ತಿದ್ದಾಗ ಅನುಭವಿಸಿದ ಶೋಷಣೆಕ ಅನುಭವಗಳನ್ನು, ಆತ್ಮಕತೆಯಲ್ಲಿ ವೈಯಕ್ತಿಕ ಜೀವನದ ಬಗ್ಗೆ ಬರೆಯುವುದರ ಜೊತೆಗೆ, ಬಾಲ್ಯದಲ್ಲೆ ಅತಿಘೋರವಾದ ಬಡತನದಿಂದ, ತುತ್ತು ಅನ್ನಕ್ಕು ಗತಿ ಇಲ್ಲದಿದ್ದಾಗ, ತಾನು ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದಾಗ ದುಡಿಮೆ ಮಾಡುತ್ತ, ಬಡತನದಿಂದ ಶಾಲೆಗೆ ಹೋಗುವ ಮೂಲಕ ವಿದ್ಯಾಭ್ಯಾಸ ಮಾಡಿದ್ದನ್ನು ವಿವರಿಸಿದ್ದಾರೆ. ತಂದೆಯು ತೊಗಲು, ಉಳ್ಳಾಗಡ್ಡೆ ವ್ಯಾಪಾರ ಮಾಡುತ್ತಾ, ಸಮಾಜದಲ್ಲಿ ಘನತೆ ಗೌರವಕ್ಕೆ ಪಾತ್ರರಾಗಿ ಜೀವಿಸುತ್ತಿದ್ದರು. ತಂದೆಯು ಹೆಂಡತಿ, ಮಕ್ಕಳಿಗೆ ಕಷ್ಟವೆಂಬುದು ಗೊತ್ತಿಲ್ಲದ ಹಾಗೆ

ಸಾಕಿದ್ದು ಇವರ ಸಾವಿನ ನಂತರ ಕುಟುಂಬವು ಬದುಕಿದ ಪರಿಸ್ಥಿತಿಯನ್ನು ಹಾಗೂ ಲೇಖಕರು, ತನ್ನ ತಾಯಿ, ಕೂಲಿ-ನಾಲಿ ಮಾಡಿದ ಬಗೆ, ದುಡಿಮೆಯಲ್ಲಿ ಕ್ರಿಯಾಶೀಲತೆಯನ್ನು ಕಂಡುಕೊಂಡದ್ದು ಲೇಖಕರು ಆತ್ಮಕಥೆಯಲ್ಲಿ ವಿಶ್ಲೇಷಿಸಿರುವುದನ್ನು ಕುರಿತಂತೆ ಈ ರೀತಿಯಾಗಿ ನೋಡಬಹುದು. 'ಒಂದು ದಿನ ಕಾಮರೆಡ್ಡಿ ಗಂಚಿಗಾರ ಹೊಲದಲ್ಲಿ ಉಳ್ಳಾಗಡ್ಡಿ ಕಿತ್ತುವುದು, ಸೋಸುವುದು, ಗರ್ಸಿಗೆ ಹೊರುವುದಕ್ಕಾಗಿ ಕೂಲಿಯಾಳುಗಳು ಬೇಕೆಂದರು. ಅಮ್ಮ ರೊಟ್ಟಿ ಸುಟ್ಟಳು ಅಕ್ಕ ಶಾಂತಕ್ಕ ಚೆಟ್ನಿ ಮಾಡಿದಳು. ಗಬಗಬ ತಿಂದು ಬುತ್ತಿ ಕಟ್ಟಿಕೊಂಡು ಕುಡುಗೋಲು, ಪುಟ್ಟಿ, ತಟ್ಟಿ ಸಿಂಚಿ... ತಲೆ ಮೂಲೆ ಇಟ್ಟುಕೊಂಡು ಅಮ್ಮ ಅಕ್ಕ ಶಾಂತಕ್ಕ, ನಾನು ತಮ್ಮ ಕೃಷ್ಣನೂ... ಹೊರಟೆವು ! ಹೊಲ ತಲುಪಿದೆವು. ಉಳ್ಳಾಗಡ್ಡೆ ಕಿತ್ತಲು ಎಲ್ಲರಂತೆ ಎರಡು ಸಾಲು ಹಿಡಿದೆ, ಕೈಯಲ್ಲಿ ಸೆಲಕಿ ಹಿಡಿದು ಬೇಗ ಬೇಗನೆ ಕಿತ್ತಬೇಕು. ಕೆಲಸ ಮಾಡಿ ಅಭ್ಯಾಸವಿಲ್ಲ. ಹತ್ತು ಗಂಟೆ ಬಳ್ಳಾರಿ ಕಾಡು ಬಿಸಿಲು ಚುರುಕು ಮುಟ್ಟುವಂತೆ ಬಡಿಯುತ್ತಿತ್ತು. ತಲೆ ಸಿಡಿತದ ಬಿಸ್ಲಗೆ ಕಣ್ಣು ಕಾಲು ತಿರುಗತೊಡಗಿದವು. ಜಲಜಲ ಬೆವತು ಹೋದೇ. ಅಮ್ಮ ಇತರೆ ಕೂಲಿಯಾಳುಗಳಿಗಿಂತ ಹಿಂದೆ, ಅಕ್ಕ ಶಾಂತಕ್ಕ, ಇನ್ನೂ ಹಿಂದೆ, ತಮ್ಮ ಕೃಷ್ಣನಿಗಿಂತ ನಾ ಏಳು ಹಿಂದೆ ಬಿದ್ದೆ. ಕೆಲ್ಸ ಮಾಡಿ ಯಾರಿಗೂ ಅಭ್ಯಾಸವಿಲ್ಲ. ನಾಚಿ ನೀರಾದೆವು. ನಿಜವಾದ ಹೋರಾಟವೆಂದ್ರೆ.... ಇದು.!'[೬] ಲೇಖಕರು ಬಡತನ, ಹಸಿವಿನಿಂದ ಬದುಕು ಸಾಗಿಸಲು, ತನ್ನ ಕುಟುಂಬದ ಜೊತೆಗೆ ದುಡಿಮೆ ಮಾಡಲು ಹೋದಾಗ ಬಿಸಿಲಿನಲ್ಲಿ ಕೆಲಸ ಅನುಭವವಿಲ್ಲದೆ, ಸುಖವಾಗಿದ್ದ ಇವರು ಕಳೆ ತೆಗೆಯುವುದು, ಉಳ್ಳಾಗಡ್ಡೆ ಕೀಳುವುದಕ್ಕೆ ಊರಿನ ಗಂಚಿಗಾರರ ಹೊಲಕ್ಕೆ ಹೋದಾಗ ಕೆಲಸ ಮಾಡಿದಂತಹ ಕ್ರಿಯಾಶೀಲತೆಯನ್ನು ಕುರಿತಂತೆ ವಿವರಿಸಿದ್ದಾರೆ. ಜೊತೆಗೆ ಹೆಂಗಸರು ಮಾಡುವ ಕೆಲಸಗಳಾದ ಕಳೆ ತೆಗೆಯುವುದು, ಉಳ್ಳಾಗಡ್ಡೆ ಕೀಳುವುದು, ಗರ್ಸಿಗೆ ಹೊತ್ತುವುದನ್ನು ಬಿಟ್ಟು ಹೊಲದಲ್ಲಿ ಬೆಳೆಗೆ ನೀರು ಹಾಯಿಸುವುದನ್ನು ಸಾಹುಕಾರರಿಂದ ಕಲಿತ ಮೇಟಿ ವಿದ್ಯೆಯನ್ನು ಅಭಿವ್ಯಕ್ತಪಡಿಸಿದ್ದಾರೆ. 'ಅಪ್ಪ ಸತ್ತು.. ನಾಲ್ಕು ವರ್ಷದಲ್ಲಿ ನಾ ಮೇಟಿ ವಿದ್ಯೆಗೆ ಬಡ್ತಿ ಹೊಂದಿದೆ. ಹಳೆ ಹೆಂಗಸರಂತೆ ಕಳೆ ಕೀಳುವ, ಕಸ ಗುಡಿಸುವ ವ್ಯಕ್ತಿಯಿಂದ ಗಂಡಸರೇ ಮಾಡುವ ಕಾರ್ಯದಲ್ಲಿ ತೊಡಗಿದೆ, ಹಗಲಿರುಳು ಉಳ್ಳಾಗಡ್ಡೆ ನೀರು ಕಟ್ಟುವ, ಮೆಣಸಿನ 'ಅಗೆಗೆ' ನೀರು ತಿರುವುದು, ಹತ್ತಿ ರೇಷ್ಮೆ ಹೂ ತಂಬಾಕು, ಬದನೆ ಗಿಡಗಳಿಗೆ ನೀರು ಉಣಿಸುತ್ತಿದ್ದೆ. ಆರಂಭದಲ್ಲಿ ಹೊಲದ ಧಣಿಯಿಂದ ನಾಲ್ಕು ಏಟು ಹೊಂದಿದ್ದು ಕಹಿ ನೆನಪಾಗಿ ಹಠಕ್ಕೆ ಬಿದ್ದು, ಕೆಲ್ಸ ಕಲಿಯಲು ಹೆದ್ದಾರಿಯಾಗಿತ್ತು ! ಕೆಲ್ಸ ಕಲಿಯಲು ಹೋದಾಗ ಧಣಿ ಕೋಪಗೊಂಡು, ಕೈಯಲ್ಲಿನ ಊರುಗೋಲಿನಿಂದ, ಬೆನ್ನ ಮೇಲೆ ನಾಲ್ಕು ಬಾರ್ಸಿ ತೇಪೆ ಹಚ್ಚದ ನಿಕ್ಕರ್, ಮೈಯಂಗಿಯನ್ನು ಹರಿಬಿಟ್ಟು ! ನೀರು ಬರುವ ಹಾದಿಗೆ, ಸಲಿಕೆಯಿಂದ ಅಡ್ಡ ಕಟ್ಟಿದರೆ, ನೀರು ವಾಪಾಸು ಬಾವಿಗೆ ಹೋಗಬೇಕೆನಲೆ.... ಭಡವ ದನ ತುಂಬಾನೇ....

ಮಾದಿಗ ಮುಂದೇ.... ಇದೇನಾ ? ಹೊಟ್ಟೆಡುಮ್ಮ.... ಚಿಂಪಾಂಜಿ.... ಕರಿಯಾ... ಕತ್ತೆ ಗಾದಷ್ಟು ವಯಸ್ಸಾಗಿದೆ ನಿನ್ಗೆ ಬುದ್ದಿಯಲ್ಲಿ... ಬುದ್ದಿಗೇಡಿ... ಸಲಿಕೆಯಿಂದ ಮಣ್ಣು ತೆಗೆದು ತೆಗ್ದು... ಇತ್ತ ಕಡೆ ಹಾಕ್ಲೇ.... ಆವಾಗ್ ಮಡಿಗಳಿಗೆ ಹರಿದು ನೀರು ಹೋಗುತ್ತೆ'[೭] ಹೀಗೆ ಲೇಖಕರು ಬಡತನದಿಂದ ಇದ್ದ ತಮ್ಮ ಕುಟುಂಬಕ್ಕೆ ಆಸರೆಯಾಗಲು ರಜೆ ದಿನಗಳಲ್ಲಿ ಸಾಹುಕಾರನ ಹೊಲಕ್ಕೆ ಹೋಗಿ, ಅವರಿಂದ ಮಾದಿಗ ಜನರು ದನ ತುಂಬಾ ಜಾತಿ ಎಂದು ಮನಸ್ಸಿಗೆ ಘಾಸಿಯಾಗುವಂತಹ ಮಾತುಗಳನ್ನು ಅನಿಸಿಕೊಳ್ಳುತ್ತಾ ದುಡಿಮೆ ಮಾಡಲು ಕೆಲಸವನ್ನು ಕಲಿತ ಕ್ರಿಯಾಶೀಲತೆಯನ್ನು ನೋಡಬಹುದು. ಜೊತೆಗೆ ರಜೆಯಲ್ಲಿ ಮಾದಿಗತನ ಮಾಡಿಕೊಂಡು, ಸಾಹುಕಾರರ ಮನೆ ಕಣದಲ್ಲಿ, ಜೋಳ, ರಾಗಿ ತುಳುಸುವ ಕೆಲಸ ಕಲಿತದ್ದನ್ನು ಆತ್ಮಕತೆಯಲ್ಲಿ ಬಡತನದ ಬದುಕು ಮತ್ತು ಕ್ರಿಯಾಶೀಲತೆಯ ಬಗ್ಗೆ ತಿಳಿಸುವುದರ ಮೂಲಕ ಶಾಲೆಯಲ್ಲಿ ತಿರಸ್ಕಾರಕ್ಕೆ ಒಳಗಾದರೂ, ಎಲ್ಲಯ್ಯ ಮೇಷ್ಟ್ರು ಮನೆಯಲ್ಲಿ ಕಸಗುಡಿಸುವ, ಮುಸುರೆ ತೊಳೆಯುವಂತಹ ಕೆಲಸ ಮಾಡುತ್ತಾ ಶಿಕ್ಷಕರಲ್ಲಿ ರಾತ್ರಿ ಪಾಠ ಹೇಳಿಸಿಕೊಳ್ಳುತ್ತಾ ಓದಿನಲ್ಲಿ ಎಲ್ಲಾ ವಿದ್ಯಾರ್ಥಿಗಳಂತೆ ಬುದ್ಧಿವಂತನಾಗಿದ್ದನ್ನು, ಆತ್ಮಕತೆಯಲ್ಲಿ ವಿವರಿಸಿದ್ದಾರೆ. ಜೊತೆಗೆ ವಿದ್ಯಾಭ್ಯಾಸದಲ್ಲಿ ಆಟಗಳಲ್ಲಿ ಭಾಗವಹಿಸುತ್ತಿದ್ದ ಸೃಜನಶೀಲತೆಯನ್ನು ಬೆಳೆಸಿಕೊಂಡಿರುವ ಕುರಿತಂತೆ 'ಶಾಲಾ ವಾರ್ಷಿಕೋತ್ಸವ ಬಂದಿತು. ನಾ ಕಬ್ಬಡ್ಡಿ, ಫುಟ್‌ಬಾಲ್, ಕೇರಂ, ಪ್ರಬಂಧ, ಸ್ಪರ್ಧೆಯಲ್ಲಿ ಬಹುಮಾನ ಪಡೆದೆ ನನ್ನಣ್ಣ ಸಾವಿರ ಮೀಟರ್, ನಾನೂರು ಮೀಟರ್ ಹಾಗೂ ನೂರು ಮೀಟರ್ ಓಟದಲ್ಲಿ ಪ್ರಥಮ ಬಹುಮಾನಗಳಲ್ಲಿದ ನಾಟಕಗಳಲ್ಲೂ, ನಾಟಕದಲ್ಲಿ ಮುಖ್ಯ ಪಾತ್ರಧಾರಿಯಾಗಿ ಅಭಿನಯಿಸಿ ಬಹುಮಾನ ಗಳಿಸಿದ"[೮]

ಹೀಗೆ ದಲಿತ ಲೇಖಕರು ಕಡು-ಬಡತನದ ನಡುವೆಯೂ ತಮ್ಮ ಸೃಜನಶೀಲತೆ ಹಾಗೂ ಕ್ರಿಯಾಶೀಲತೆಯ ಜೊತೆಗೆ ಹೋರಾಟದ ಬದುಕು ನಡೆಸಿದ್ದನ್ನು ಅವರ ಆತ್ಮಕಥೆಗಳಲ್ಲಿ ನಿರೂಪಿಸಿದ್ದಾರೆ.

ಅಡಿ ಟಿಪ್ಪಣಿಗಳು

೧. ಸಿದ್ದಲಿಂಗಯ್ಯ, ಊರುಕೇರಿ, ಪು.ಸಂ. ೭೮

೨. ಅದೇ ಪುಸ್ತಕ, ಪು.ಸಂ. ೮೨

೩. ಅದೇ ಪುಸ್ತಕ, ಪು.ಸಂ. ೫೪

೪. ತುಂಬಾಡಿ ರಾಮಯ್ಯ, ಮಣೆಗಾರ, ಪು.ಸಂ. ೯೮

೫. ಅದೇ ಪುಸ್ತಕ, ಪು.ಸಂ. ೮೩

೬. ಯಲ್ಲಪ್ಪ ಕೆಕೆಪುರ, ಕೇರಿಯಿಂದ ತೇರಿಗೆ, ಪು.ಸಂ. ೯೧

೭. ಅದೇ ಪುಸ್ತಕ, ಪು.ಸಂ .೧೪೬

೮. ಅದೇ ಪುಸ್ತಕ, ಪು.ಸಂ. ೧೪೬

ಅಧ್ಯಾಯ ಏಳು

ಸಮಾರೋಪ

ಅಧ್ಯಾಯ ಏಳು

ಸಮಾರೋಪ

ಸಾಹಿತ್ಯದಲ್ಲಿ ಕಥೆ, ಕಾದಂಬರಿಗಳು, ಆತ್ಮಚರಿತ್ರೆ, ಜೀವನಚರಿತ್ರೆ ಹುಟ್ಟುವುದು ಮನುಷ್ಯನ ಭಾಷೆಯಿಂದ. ಕಥೆ, ಕಾದಂಬರಿಗಳಲ್ಲಿ ಲೇಖಕರು ತಮ್ಮ ಜೀವನಾನುಭವಗಳನ್ನು ಹಾಗೂ ಜೀವಿಸುವಂತ ಪರಿಸರದಲ್ಲಿನ ಸಂಗತಿಗಳನ್ನು ಕಲ್ಪನಾತ್ಮಕವಾಗಿ ಸಾಹಿತ್ಯದಲ್ಲಿ ಮನುಷ್ಯನ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ವಿಚಾರಗಳನ್ನು ಅಭಿವ್ಯಕ್ತಿ ಪಡಿಸುತ್ತಾನೆ. ಹಾಗೆಯೇ ಆತ್ಮಕತೆ, ಜೀವನಚರಿತ್ರೆಯಲ್ಲಿ ಒಬ್ಬ ವ್ಯಕ್ತಿಯ ಜೀವನ ಅನುಭವ ಒಂದು ಜನಾಂಗದ ಬದುಕನ್ನು ಕುರಿತಂತೆ ಸಾಹಿತ್ಯ ರಚನೆ ಮಾಡುತ್ತಾರೆ. ಆತ್ಮಕತೆಗಳಲ್ಲಿ ಹೆಚ್ಚಿನದಾಗಿ ಲೇಖಕರು ತಮ್ಮ ಕುಟುಂಬ ಮತ್ತು ಅವರ ವೈಯಕ್ತಿಕ ಜೀವನ ಬಗ್ಗೆ ವಿವರಿಸುತ್ತಾರೆ. ನನ್ನ ಅಧ್ಯಯನಕ್ಕೆ ಸಂಬಂಧಿಸಿದ ದಲಿತ ಆತ್ಮಕಥೆಗಳಲ್ಲಿ ದಲಿತರ ಬದುಕಿನ ವಿವಿಧ ಆಯಾಮಗಳ ಕುರಿತಂತೆ ಅಧ್ಯಯನದಿಂದ ಕಂಡುಕೊಂಡಂತ ಅಂಶಗಳೆಂದರೆ, ದಲಿತ ಆತ್ಮಕತೆಗಳಾದ ಗೌರ್ಮೆಂಟ್ ಬ್ರಾಹ್ಮಣ, ಊರುಕೇರಿ, ಮಣೆಗಾರ, ಕೇರಿಯಿಂದ ತೇರಿಗೆ, ಇವುಗಳಲ್ಲಿ ದಲಿತರ ಬದುಕಿನಲ್ಲಿ ಕುಟುಂಬ ಸ್ಥಿತಿ, ಸಾಮಾಜಿಕ ಸ್ಥಾನಮಾನ, ಸಾಂಸ್ಕೃತಿಕ ಜೀವನ, ಶೈಕ್ಷಣಿಕ ವ್ಯವಸ್ಥೆಯನ್ನು ಕುರಿತು ಅಧ್ಯಯನ ಮಾಡಿದ್ದೇನೆ.

ಸ್ವಾತಂತ್ರ್ಯ ಬಂದ ನಂತರ ಕನ್ನಡ ಸಾಹಿತ್ಯದಲ್ಲಿ ದಲಿತ ಆತ್ಮಕತೆಗಳು ಹುಟ್ಟಿಕೊಂಡಿದ್ದು, ಅರವಿಂದ ಮಾಲಗತ್ತಿಯವರು ಗೌರ್ಮೆಂಟ್ ಬ್ರಾಹ್ಮಣ ಆತ್ಮಕಥೆಯನ್ನು ಪ್ರಥಮವಾಗಿ ಬರೆದರು. ಇದರಲ್ಲಿ ದಲಿತರಾಗಿ ಹುಟ್ಟಿದ ಲೇಖಕರು ಸಮಾಜದಲ್ಲಿ ದಲಿತರು. ಸ್ವಾತಂತ್ರ್ಯ ಬಂದು ಸರ್ಕಾರದಿಂದ ಬರುವ ನಾನಾ ಸೌಲಭ್ಯಗಳಿಂದ ವಂಚಿತರಾಗುತ್ತಾ, ಅನಕ್ಷರತೆಯಿಂದ ಬಡತನ, ಅಸ್ಪೃಶ್ಯತೆ, ಮೌಢ್ಯತೆಗಳನ್ನು ಆಚರಿಸುತ್ತಾ, ಇಂಥ ಸ್ಥಿತಿಯಲ್ಲಿ ತಾನು ಶಿಕ್ಷಣ ಪಡೆದು ದಲಿತರಪರ

ಸಮಾಜದ ಸಮಾನತೆ ಕಂಡುಕೊಳ್ಳುವಂತಹ ಪ್ರತಿಭಟನೆ, ಸಂಘಟನೆಗಳ ಮಾಡುತ್ತಾ ಶಿಕ್ಷಣ ಪಡೆಯುತ್ತಾ ಸಮಾನತೆ ಕಂಡುಕೊಳ್ಳುವುದನ್ನು ತಿಳಿಸಿದ್ದಾರೆ.

ಹಾಗೆಯೇ ಊರು, ಕೇರಿ, ಮಣೆಗಾರ, ಕೇರಿಯಿಂದ ತೇರಿಗೆ ಆತ್ಮಕತೆಗಳಲ್ಲಿ, ಲೇಖಕರುಗಳು ದಲಿತ ಬದುಕಿನಲ್ಲಿ ಕೌಟುಂಬಿಕ ವ್ಯವಸ್ಥೆಯನ್ನು ಕುರಿತಂತೆ, ಸರ್ಕಾರಿ ಸೌಲಭ್ಯಗಳಿಂದ ವಂಚಿತರಾಗಿ, ಶಿಕ್ಷಣ ಪಡೆಯದೇ ಜೀವನ ನಡೆಸಲು ಸ್ವಂತ ಭೂಮಿ ಇಲ್ಲದೆ, ಮೇಲ್ವರ್ಗದವರ ಹೊಲಗಳಲ್ಲಿ ಕೂಲಿ ಮಾಡುತ್ತಾ, ಜೀತವಿದ್ದು, ದುಡಿದು, ಬಡತನದಿಂದ, ಹಸಿವು ನೀಗಿಸಿಕೊಳ್ಳುವುದಕ್ಕೆ ಮೇಲ್ವರ್ಗದವರಿಂದ ಶೋಷಣೆಗೆ ಒಳಗಾಗಿ ನೋವು–ಕಷ್ಟಗಳನ್ನು ಪಡುತ್ತಾ, ಬೆವರು ಸುರಿಸುವ ಮೂಲಕ ಜೀವನ ನಡೆಸುತ್ತಿದ್ದರು ಎಂಬುದನ್ನು ಅಧ್ಯಯನದಲ್ಲಿ ಗುರುತಿಸಿದ್ದೇನೆ.

ಈ ಆತ್ಮಕತೆಗಳಲ್ಲಿ ದಲಿತರನ್ನು ಸಮಾಜದಲ್ಲಿ ಮೇಲ್ವರ್ಗದ ಜಾತಿಯವರು ಹಾಗೂ ದಲಿತರಲ್ಲಿ ಸ್ವಲ್ಪಮಟ್ಟಿಗೆ ಆರ್ಥಿಕವಾಗಿ, ಶಿಕ್ಷಣಪಡೆದು ಮುಂದುವರೆದವರು ಬಡತನದಿಂದ ಜೀವಿಸುತ್ತಿದ್ದ ದಲಿತ ಕುಟುಂಬಗಳನ್ನು ಕೀಳಾಗಿ ಕಾಣುವಂತಹ ಅಸಹ್ಯಕರವಾದಂತ ಪರಿಸ್ಥಿತಿಗಳಾದ ಕೆರೆಗಳಲ್ಲಿ ನೀರು ತುಂಬಿಕೊಳ್ಳಲು ದಲಿತರಿಗೆ ಅವಕಾಶವಿಲ್ಲದೆ, ದೇವಸ್ಥಾನಗಳ ಒಳಗಡೆ ಪ್ರವೇಶವಿಲ್ಲದೆ ಇರುವುದು, ದೇವರುಗಳ ಹೆಸರಿನಲ್ಲಿ ಹಬ್ಬ–ಜಾತ್ರೆಗಳಲ್ಲಿ ದಲಿತ ಹೆಂಗಸರನ್ನು ಅಶ್ಲೀಲಕರವಾಗಿ ನೋಡುತ್ತಾ, ಮನರಂಜನೆ ಪಡೆಯುವ ಹಾಗೂ ದಲಿತರ ಬಡತನದಿಂದ ತಾವು ದನ ತಿನ್ನುವವರು ಕೆಳಸ್ತರದವರು ಎಂಬ ಮನೋಭಾವದಿಂದ, ಸಮಾಜದಲ್ಲಿ ಹಿಂದುಳಿದಿದ್ದಾರೆ. ಇಂದಿಗೂ ಸಹ ಸಮಾಜದಲ್ಲಿ ದಲಿತರನ್ನು ಶೋಷಣೆ ಮಾಡುವುದು ಕಂಡುಬರುತ್ತದೆ. ಇಂತಹ ಸ್ಥಿತಿಯ ವಿರುದ್ಧ ಲೇಖಕರು ಸಾಹಿತ್ಯದ ಮೂಲಕ ದಲಿತರನ್ನು ಪ್ರಜ್ಞಾವಂತರನ್ನಾಗಿ ಮಾಡಲು ಪ್ರಯತ್ನಸಿದ್ದಾರೆ.

ದಲಿತರು ಶಿಕ್ಷಣದಲ್ಲಿ ಹಿಂದುಳಿಯಲು ಮುಖ್ಯವಾಗಿ ಕಾರಣವೆಂದರೆ ಜಾತಿ ಹಾಗೂ ಬಡತನ, ಅಪೌಷ್ಠಿಕ ಆಹಾರ, ಅಜ್ಞಾನದಿಂದಾಗಿ ಶಿಕ್ಷಣದಿಂದ ವಂಚಿತರಾಗಿದ್ದಾರೆ ಎಂಬುದನ್ನು ನಾವು ತಿಳಿಯಬಹುದು. ದಲಿತ ವಿದ್ಯಾರ್ಥಿಗಳನ್ನು ಶಾಲೆಗಳಲ್ಲಿ ಮೇಲ್ವರ್ಗದ ಶಿಕ್ಷಕರು, ವಿದ್ಯಾರ್ಥಿಗಳು, ಅಸ್ಪೃಶ್ಯತೆಯಿಂದ ಕೀಳಾಗಿ ಕಾಣುವುದು, ಮುಟ್ಟಿಸಿಕೊಳ್ಳದಿರುವುದು, ಇಂತಹುದರಿಂದ ವಿದ್ಯಾಭ್ಯಾಸದಲ್ಲಿ ಆಸಕ್ತಿ ಇಲ್ಲದೆ ನಿರುತ್ಸಾಹಿಗಳಾದಂತಹ ಅಂಶಗಳು ಕರುಳು ಹಿಂಡುವಂತ ದಲಿತ ವಿದ್ಯಾರ್ಥಿಗಳ ಶೈಕ್ಷಣಿಕ ಜೀವನದ ಬಗ್ಗೆ ವಿವರಿಸಲಾಗಿದೆ. ಜೊತೆಗೆ ದಲಿತರು ಅನಕ್ಷರತೆಯಿಂದ ಬಡತನ, ಹಸಿವುಗಳಿಗೆ ಧಾರ್ಮಿಕವಾಗಿ ದೇವರುಗಳ ಹೆಸರಿನಲ್ಲಿ ದಲಿತ ಮಹಿಳೆಯರನ್ನು ದೇವದಾಸಿ ಪದ್ಧತಿಗೆ ಅಳವಡಿಸುವಂತಹ ದಲಿತ ಕೇರಿಗಳಲ್ಲಿ, ದೆವ್ವ, ಪಿಶಾಚಿ ಇವುಗಳಿಂದ ಪಾರಾಗಲು ದೇವರಲ್ಲಿ ಮೊರೆಹೋಗುವಂತಹ ಅನಿಷ್ಠವಾದ ಸಂಪ್ರದಾಯಗಳನ್ನು ಆಚರಿಸುತ್ತಿದ್ದರುವುದನ್ನು ಈ ಅಧ್ಯಯನದಿಂದ ತಿಳಿಯುತ್ತದೆ.

ಬಡತನದಿಂದ ದಲಿತರ ಬದುಕು ನಡೆಸಲು, ಕಣದಲ್ಲಿ ಕೆಲಸ ಮಾಡುತ್ತಾ, ಜೀತವಿದ್ದು, ತಮ್ಮಂತೆ ಮಕ್ಕಳನ್ನು ಅವಿದ್ಯಾವಂತರನ್ನಾಗಿ ಮಾಡಬಾರದು ಎಂಬ ಪೋಷಕರ ಆಸೆಯ ನಡುವೆಯೂ ಮಕ್ಕಳು ಶಾಲೆಗೆ ರಜೆ ಇರುವಾಗ ತಂದೆ-ತಾಯಿಗಳ ಜೊತೆಯಲ್ಲಿ ದುಡಿಮೆ ಮಾಡುತ್ತಾ ಹಲವು ರೀತಿಯಲ್ಲಿ ಕ್ರಿಯಾಶೀಲತೆಯನ್ನು ಬಳಸಿಕೊಳ್ಳುವ ಅಂಶಗಳನ್ನು ಗುರುತಿಸಲಾಗಿದೆ.

ಒಟ್ಟಾರೆ ಪ್ರಾತಿನಿಧಿಕವೆನ್ನಬಹುದಾದ ಕನ್ನಡದ ಪ್ರಮುಖ ದಲಿತ ಆತ್ಮಕಥನಗಳನ್ನು ಅಧ್ಯಯನಕ್ಕೆ ಒಳಪಡಿಸುವ ಮೂಲಕ ದಲಿತ ಲೋಕದ ವಿವಿಧ ಆಯಾಮಗಳನ್ನು ಸೂಕ್ಷ್ಮವಾಗಿ ಗ್ರಹಿಸುವ ಪ್ರಯತ್ನವನ್ನಿಲ್ಲಿ ಮಾಡಲಾಗಿದೆ.

ಅಧ್ಯಯನದ ಫಲಿತಗಳು:

ಈ ಅಧ್ಯಯನದಿಂದ ದಲಿತರು ಸಮಾಜದಲ್ಲಿ ಶಿಕ್ಷಣದಿಂದ ವಂಚಿತರಾಗಿರುವುದನ್ನು ಅತಿಯಾದ ಕಡುಬಡುತನದ ಜೀವನ ಮಾಡುತ್ತಿದ್ದನ್ನು, ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ಆಯಾಮಗಳನ್ನು ಗುರುತಿಸುವುದರ ಜೊತೆಗೆ ದಲಿತರನ್ನು ಮೇಲ್ವರ್ಗದವರು ಶೋಷಣೆ ಮಾಡುವುದನ್ನು ಗುರುತಿಸುವುದರೊಂದಿಗೆ, ದಲಿತರು ಇದರ ವಿರುದ್ಧ ಹೋರಾಟಗಳನ್ನು ಮಾಡುವಂತಹ ಸೃಜನಶೀಲತೆಯನ್ನು ಬೆಳೆಸಿಕೊಂಡ ಪರಿಯನ್ನು ಗುರುತಿಸಲಾಗಿದೆ.

ದಲಿತ ವಿದ್ಯಾರ್ಥಿಗಳನ್ನು ಶಾಲೆ, ಕಾಲೇಜುಗಳಲ್ಲಿ, ತಾರತಮ್ಯದ ಮೂಲಕ ಶಿಕ್ಷಕರು ನೋಡುತ್ತಿರುವ ಹೀನಾಯ ಸ್ಥಿತಿಯನ್ನು ಲೇಖಕರು ಸಮಾಜಕ್ಕೆ ಸಾಹಿತ್ಯದ ಮೂಲಕ ತಿಳಿಸುವಂತಹ ಕೆಲಸವನ್ನು ಮಾಡಿದ್ದಾರೆ.

ವಿದ್ಯಾರ್ಥಿ ನಿಲಯಗಳಲ್ಲಿ ದಲಿತ ವಿದ್ಯಾರ್ಥಿಗಳನ್ನು ಮೇಲ್ವರ್ಗದ ವಿದ್ಯಾರ್ಥಿಗಳು ಒಡೆಯುವಂತಹವರ ವಿರುದ್ಧ ದಲಿತ ಸಂಘರ್ಷ ಸಮಿತಿ, ಹಿರಿಯ ದಲಿತ ಸಾಹಿತಿಗಳಿಂದ ಸಂಪರ್ಕ ಹೊಂದುವ ಮೂಲಕ ಕ್ರಿಯಾಶೀಲತೆಯನ್ನು ಬಳಸಿಕೊಂಡು ವ್ಯವಸ್ಥೆಯ ವಿರುದ್ಧ ಬಂಡಾಯ ಏಳುವಂತಹ ದಲಿತರಿಗೆ ಇದ್ದ ಪ್ರತಿಭಟನೆಯ ಜ್ಞಾನವನ್ನು ತಿಳಿಸಲಾಗಿದೆ.

ದಲಿತ ಆತ್ಮಕಥೆಗಳಲ್ಲಿ ಲೇಖಕರು ಬಡತನದಿಂದ ಬಂದು ವಿದ್ಯಾವಂತರಾಗಿ, ಸಮಾಜದಲ್ಲಿ ಉನ್ನತ ಮಟ್ಟಕ್ಕೆ ಬೆಳೆದಂತಹದನ್ನು ಗುರುತಿಸಲಾಗಿದೆ.

ಈ ನಿಟ್ಟಿನಲ್ಲಿ ವಿದ್ಯಾಭ್ಯಾಸ ಪಡೆದು ಸಾಹಿತ್ಯದ ರಚನೆ, ಸರ್ಕಾರಿ ನೌಕರಿ ಪಡೆದಂತಹ ಯಶಸ್ಸಿನ ಅಂಶಗಳನ್ನು ಈ ಅದ್ಯಯನದಲ್ಲಿ ತಿಳಿಸಲಾಗಿದೆ.

ಮೂಲ ಆಕರಗಳು:

* ಅರವಿಂದ ಮಾಲಗತ್ತಿ, ಗೌರ್ಮೆಂಟ್ ಬ್ರಾಹ್ಮಣ, ಚೇತನ್ ಬುಕ್ ಹೌಸ್, ಮೈಸೂರು, ೨೦೧೪.

* ತುಂಬಾಡಿ ರಾಮಯ್ಯ, ಮಣೆಗಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬.

* ಯಲ್ಲಪ್ಪ ಕೆಕೆಪುರ, ಕೇರಿಯಿಂದ ತೇರಿಗೆ, ಶ್ರೀ ಶಾ ಎಂಟರ್‌ಪ್ರೈಸಸ್ (ಪ್ರೈ), ಬೆಂಗಳೂರು, ೨೦೦೯.

* ಸಿದ್ಧಲಿಂಗಯ್ಯ, ಊರುಕೇರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬.

ಪರಾಮರ್ಶನ ಗ್ರಂಥಗಳು

* ಅರ್ಜುನ್ ಗೊಳಸಂಗಿ (ಸಂ.), ಕನ್ನಡ ದಲಿತ ಸಾಹಿತ್ಯ, ಸಮಲೋಕನ, ಕರ್ನಾಟ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೩.

* ಅರ್ಜುನ್ ಗೊಳಸಂಗಿ (ಸಂ.), ದಲಿತಜ್ಞಾ, ದಲಿತ ಸಾಹಿತ್ಯ ಪರಿಷತ್, ಬೆಂಗಳೂರು, ೨೦೦೬.

* ಅರವಿಂದ ಮಾಲಗತ್ತಿ (ಸಂ.), ದಲಿತಮಾರ್ಗ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೨.

* ಪುಟ್ಟಯ್ಯ ಬಿ.ಎಂ., ಆತ್ಮಕಥೆಗಳಲ್ಲಿ ಕರ್ನಾಟಕದ ಕಥೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

* ಮುನಿವೆಂಕಟಪ್ಪ ವಿ. (ಸಂ.), ದಲಿತ ಸಾಹಿತ್ಯ ದರ್ಶನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೨.

* ಶರಣಮ್ಮ, ಅ. ಗೊರೇಬಾಳ, ಕನ್ನಡ ಸಾಹಿತ್ಯದಲ್ಲಿ ಆತ್ಮಚರಿತ್ರೆ, ದಲಿತ ಸಾಹಿತ್ಯ ಪರಿಷತ್, ರಾಜ್ಯಘಟಕ, ಗದಗ, ೨೦೦೨.

* ಶ್ಯಾಮಮೂರ್ತಿ, ಕನ್ನಡ ಆತ್ಮಕಥನ ಸಾಹಿತ್ಯ, ಸಂಸ್ಕೃತ ಪ್ರಕಾಶನ, ಬಳ್ಳಾರಿ, ೨೦೧೧.